ಕಲ್ಯಾಣ ಕಿರಣ

ಮಾರ್ಚ್ - 2006

ಬೆಲೆ : 6 ರೂ



ಶೂನ್ಯ ಪೀಠಾಧೀಶ ಅಲ್ಲಮ ಪ್ರಭು ದೇವರು



ಬೆಂಗಳೂರಿನ ಬಸವ ಮಂಟಪದಲ್ಲಿ ಶರಣ ಗಣ ಮೇಳ. ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮಿಗಳಿಂದ ಆಶೀರ್ವಚನ



ಅಮೇರಿಕಾದಿಂದ ಆಗಮಿಸಿದ ಯೋಗೀಶ್ವರಿ ಅವರಿಂದ ಉಪನ್ಯಾಸ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-35 ಬಸವ ಶಕೆ-872 ಆಜೀವ ಸದಸ್ಯತ್ವ 600 ರೂ.
ಸಂಚಿಕೆ-10 ಮಾರ್ಚ್-2006 ವಾರ್ಷಿಕ ಚಂದಾ 60/- ರೂ.

ಅಲ್ಲಮ ಪ್ರಭುಗಿರಿಗೆ ಆಹ್ವಾನ

ಬನ್ನಿ ಬನ್ನಿ ನೋಡ ಬನ್ನಿ ಅಲ್ಲಮ ಪ್ರಭು ಗಿರಿಯ
ಬನ್ನಿ ಬನ್ನಿ ನೋಡ ಬನ್ನಿ ಲಿಂಗಾಯತ ಗಣ ಮೇಳವ ॥ ಪಲ್ಲವಿ॥

ಅಲ್ಲಮ ಪ್ರಭುದೇವರ ತಪೋ ಭೂಮಿ ಈ ಗಿರಿ
ಸಿದ್ಧರಾಮೇಶ್ವರರು ಪಾದವಿಟ್ಟ ಸುಕ್ಷೇತ್ರ
ಮಹಾರಾಷ್ಟ್ರ ನಾಡಿನಲ್ಲಿ ಬಸವ ಧರ್ಮ ಬಿತ್ತಿ ಬೆಳೆದ
ಅಲ್ಲಮ- ಸಿದ್ಧರಾಮರ ದಿವ್ಯ ತಾಣ ಈ ಗಿರಿ ॥1॥

ಪ್ರಥಮ ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು
ಬಸವ ಯೋಗಿ ಸಿದ್ಧರಾಮ ದೇವರ ಜೊತೆಗೂಡಿ
ಜ್ಞಾನ ಗಂಗೆಯಾಗಿ ಹರಿದು ಬಂದು ನಿಂತ ಕ್ಷೇತ್ರವು
ಅನುಗ್ರಹಿಸಿ ಭಕ್ತರ ಪಾವನಿಸಿದ ಸ್ಥಾನವು ॥2॥

ಅಲ್ಲಮ ಪ್ರಭುದೇವರು ಹಚ್ಚಿ ಇಟ್ಟ ಜ್ಯೋತಿ ನೋಡು
ನಂದಾದೀಪವಾಗಿ ತಾನು ಅಂದಿನಿಂದ ಉರಿಯುತಿಹುದು
ಅಲ್ಲಮ ಸಿದ್ಧರಾಮರು ಶರಣು ಹೇಳಿ ಬೀಳ್ಕೊಟ್ಟ
ತಿರುಗುತಿ ಎಂಬ ತಾಣ ಇತಿಹಾಸವ ಸಾರುತಿದೆ ॥3॥

ಬಸವ ತೀರ್ಥ ಎಂಬ ಚಿಲುಮೆ ಅಮೃತ ಧಾರೆ ನೀಡುತಿದೆ
ಸಿದ್ಧರಾಮ ಗಿರಿಯ ಶೃಂಗ ಭವ್ಯವಾಗಿ ಮೆರೆಯುತಿದೆ
ಬಾ ಶರಣ ಭಕ್ತಿಯಿಂದ ಲಿಂಗಾಯತ ಗಣ ಮೇಳಕೆ
ಹೊಸ ವರ್ಷವ ಸ್ವಾಗತಿಸು ಬಸವಾತ್ಮಜೆ ಕರೆ ಇದು

- ಮಾತಾಜಿ

[ಬನ್ನಿ ಬನ್ನಿ ನೋಡ ಬನ್ನಿ ಸಂಗಮದ ಕ್ಷೇತ್ರವ ದಾಟಿಯಲ್ಲಿ ಹಾಡಬಹುದು.]

★ ಕಲ್ಯಾಣ ಕಿರಣ ★

ಸಂಪುಟ 35 ಬಸವ ಶಕೆ 872 ಆಜೀವ ಸದಸ್ಯತ್ವ 600ರೂ
ಸಂಚಿಕೆ 10 ಮಾರ್ಚ್- 2006 ವಾರ್ಷಿಕ ಚಂದಾ 60/-ರೂ.

ಲೇಖನಗಳು ಕಿರಣ ಗನ್ನಡಿ ಲೇಖಕರು ಪುಟ

ಪೂಜ್ಯ ಮಾತಾಜಿಯವರ 61ನೆಯ ವರ್ಧಂತಿ ಆಚರಣೆ ದಿ.19-3-2006

KALYANA KIRANA-Reg No.19988/70. Monthly Magazine Edited by Pujya Mate Kasturidevi and Published by Pujya Allama Prabhu Swamiji, on behalf of Vishwakalyana Mission Charitable Trust, Basava Mantapa, at Padmashri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/23322790

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666



ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಬಳಿಯ ಅಲ್ಲಮ ಪ್ರಭು ಗಿರಿಯಲ್ಲಿ 2006 ಮಾರ್ಚ್ 29, 30ರಂದು ಪ್ರಥಮ ಲಿಂಗಾಯತ ಗಣ ಮೇಳ

ಶರಣ ಬಂಧುಗಳಲ್ಲಿ ಶರಣು ಶರಣಾರ್ಥಿ,

ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಅನುಭವ ಮಂಟಪ ಎಂಬ ಅಧ್ಯಾತ್ಮಿಕ ಸಂಸ್ಥೆಯನ್ನು ಕಟ್ಟಿ, ಅದರಲ್ಲಿ ಶೂನ್ಯಪೀಠ ಎಂಬ ಧರ್ಮಪೀಠವನ್ನು ಸ್ಥಾಪಿಸಿ ಅದಕ್ಕೆ ವ್ಯೋಮಕಾಯ ಸಿದ್ಧರಾದ ಅಲ್ಲಮ ಪ್ರಭುದೇವರನ್ನು ಮೊದಲನೆಯ ಅಧಿಕಾರಿಯನ್ನಾಗಿ ಪೀಠಾರೋಹಣ ಮಾಡಿಸಿದರು. ಶ್ರೀ ಅಲ್ಲಮ ಪ್ರಭುದೇವರು ಮತ್ತು ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರರು ಧರ್ಮ ಪ್ರಚಾರಾರ್ಥ ಇಂದಿನ ಕರ್ನಾಟಕ, ಮಹಾರಾಷ್ಟ್ರದ ವಿವಿಧ ಸ್ಥಳಗಳಲ್ಲೆಲ್ಲ ಗಂಗೆ-ಯಮುನೆಯರಂತೆ ಸಂಚರಿಸಿ ಭಕ್ತರನ್ನು ಉದ್ಧರಿಸಿದ್ದಾರೆ. ಜೊತೆಗೂಡಿ ಸಂಚರಿಸಿದ ಉಭಯತರೂ ಒಂದು ವಿಶಿಷ್ಟ ಸ್ಥಳದಿಂದ ಪರಸ್ಪರ ಬೀಳ್ಕೊಟ್ಟು, ಸಾಭಾರಿ ಜಂಗಮರಾದ ಶ್ರೀ ಸಿದ್ಧರಾಮೇಶ್ವರರು ಸೊಲ್ಲಾಪುರಕ್ಕೆ ಕರ್ತವ್ಯ ಮುಖಿಯಾಗಿ ವಾಪಸು ಹೊರಡುತ್ತಾರೆ. ನಿರಾಭಾರಿ ಜಂಗಮರಾದ ಶ್ರೀ ಅಲ್ಲಮ ಪ್ರಭುದೇವರು ಅಶ್ವಾರೋಹಿಯಾಗಿ ಶಿಷ್ಯರೊಡನೆ ಸಂಚಾರವನ್ನು ಮುಂದುವರಿಸುತ್ತಾರೆ. ಒಂದು ಸ್ಥಳದಲ್ಲಿ ತಪೋಮಗ್ನರಾಗಿ ತಂಗಿರುತ್ತಾರೆ. ಅದೇ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಬಳಿ ಇರುವ ಅಲ್ಲಮ ಪ್ರಭು ಗಿರಿ. ಮರಾಠಿಯಲ್ಲಿ ಅಲ್ಲಮ ಪ್ರಭು ಡೋಂಗರ್ ಎನ್ನುತ್ತಾರೆ. ಇದು ಕೊಲ್ಹಾಪುರದಿಂದ 25 ಕಿ.ಮೀಟರ್ ದೂರದಲ್ಲಿ ಕೊಲ್ಹಾಪುರ-ಸಾಂಗ್ಲಿ-ಸೊಲ್ಲಾಪುರ ಹೆದ್ದಾರಿಯ ಮೇಲಿದೆ. ಸಮೀಪದಲ್ಲಿ ಇಚಲ ಕರಂಜಿ, ಮೀರಜ್, ಸಾಂಗ್ಲಿ ಮತ್ತು ವಡಗಾಂವ ಪಟ್ಟಣಗಳು ಇವೆ. ಹಾತ್‌ಕಣಂಗಲೆಯವರೆಗೆ ರೇಲ್ವೆ ಸೌಲಭ್ಯವಿದೆ. ರಾಣಿ ಚೆನ್ನಮ್ಮ ಎಕ್ಸ್‌ಪ್ರೆಸ್ ಮುಂತಾದ ರೇಲ್ವೆ ಗಾಡಿಗಳು ಹಾತ್ ಕಣಂಗಲೆ ಮೂಲಕ ಕೊಲ್ಹಾಪುರಕ್ಕೆ ಹೋಗುತ್ತವೆ ಮತ್ತು ಹಾತ್‌ಕಣಂಗಲೆಯಲ್ಲಿ ಬೇಡಿಕೆಯ ಮೇರೆಗೆ ನಿಲ್ಲುತ್ತವೆ.

ಅಲ್ಲಮ ಪ್ರಭು ನಂದಾದೀಪ

ಶ್ರೀ ಅಲ್ಲಮ ಪ್ರಭುದೇವರು ಪೂಜೆಯ ಸಮಯದಲ್ಲಿ ಹಚ್ಚಿದ ಜ್ಯೋತಿಯನ್ನು ಅಲ್ಲಮ ಪ್ರಭು ದಿವ್ಯಾಲಯದ ಪೂಜಾರಿ ವಂಶಸ್ಥರು ನಂದಾದೀಪವಾಗಿ ಕಾಯ್ದುಕೊಂಡು ಬಂದಿರುವುದು ಸ್ಥಳ ವಿಶೇಷ. ಶ್ರೀ ಸಿದ್ಧರಾಮೇಶ್ವರರ ದಿವ್ಯಾಲಯವು ಸಹ ಪಕ್ಕದಲ್ಲೇ ಇದ್ದು ಕೆಲವು ಕಾಲ ಅವರು ಸಹ ಈ ಗಿರಿಯಲ್ಲಿ ತಂಗಿದ್ದಾರೆ. ಈ ಉಭಯತರೂ ಪೂಜೆ-ಧ್ಯಾನಗಳಿಗೆ ಬಳಸುತ್ತಿದ್ದ ಗವಿಯು ಶ್ರೀಸಿದ್ಧರಾಮೇಶ್ವರ ದಿವ್ಯಾಲಯದ ಕೆಳಗೆ ಇದೆ. ಅಲ್ಲಮ ಪ್ರಭು ಗಿರಿಗೆ ಸುಮಾರು 4 ಕಿ.ಮೀ ದೂರದಲ್ಲಿ ಸಿದ್ಧರಾಮೇಶ್ವರ ಗಿರಿ (ಸಿದ್ಧೋಬಾ ಡೋಂಗರ್)ಇದ್ದು ಎತ್ತರವಾದ ಆ ಗುಡ್ಡದ ಮೇಲೆ ಸಹ ಸಿದ್ಧರಾಮೇಶ್ವರ ದಿವ್ಯಾಲಯವಿದೆ. ಈ ಜಂಗಮ ಕ್ಷೇತ್ರಗಳು ಹೆಚ್ಚಿನ ಪ್ರಚಾರವನ್ನು ಪಡೆಯದೆ ಇರುವುದು ಮತ್ತು ಯಾವುದೇ ವಿಶೇಷ ಅಭಿವೃದ್ಧಿ ಹೊಂದದಿರುವುದು ವಿಷಾದನೀಯ ಸಂಗತಿಯಾಗಿದೆ.

ಬಸವ ಧರ್ಮ ಪೀಠದ ಧ್ಯೇಯೋದ್ದೇಶ

ಕೂಡಲ ಸಂಗಮದ ಬಸವ ಧರ್ಮ ಪೀಠ ಟ್ರಸ್ಟ್ ಶರಣರ ಸ್ಥಾನಗಳನ್ನು ಅಭಿವೃದ್ಧಿ ಪಡಿಸುವ ಆಶಯವನ್ನು ಹೊಂದಿದ್ದು ಅಲ್ಲಮ ಪ್ರಭು ಗಿರಿ(ಡೋಂಗರ್)ಯಲ್ಲಿ ಜಗದ್ಗುರು ಅಲ್ಲಮಪ್ರಭು ದಿವ್ಯಾಲಯಕ್ಕೆ ಹತ್ತಿರದಲ್ಲಿ 14 ಎಕರೆಯಷ್ಟು ಜಮೀನನ್ನು ಖರೀದಿಸಿದೆ. ಈ ತಕ್ಷಣ ಬೋರ್‌ವೆಲ್, ಭಾವಿ ಮತ್ತು ನೀರಿನ ತೊಟ್ಟಿಯ ನಿರ್ಮಾಣಕ್ಕೆ ಆದ್ಯತೆ ನೀಡಲಾಗುತ್ತಿದೆ. ಒಂದು ಕಾರ್ಯಾಲಯ (Office) ವನ್ನು ಸಹ ಕಟ್ಟಿಸಲಾಗುತ್ತಿದೆ. ಮುಂದೆ ವಿಸ್ತಾರವಾದ ಕಾರ್ಯಯೋಜನೆಯ ಮಾಸ್ಟರ್ ಪ್ಲಾನ್ ಪ್ರಕಟಿಸಲಾಗುವುದು. ಮತ್ತೆ ಕಟ್ಟಡ ನಿಧಿಗೆ, ದಾಸೋಹ ನಿಧಿಗೆ ದೇಣಿಗೆಯನ್ನು ಸಂಗ್ರಹಿಸಲಾಗುವುದು.

ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು ಮತ್ತು ಕಾಯಕ ಯೋಗಿ ಸಿದ್ಧರಾಮೇಶ್ವರರು ಪಾದವಿಟ್ಟ ಈ ಜಂಗಮಕ್ಷೇತ್ರವನ್ನು ಅಭಿವೃದ್ಧಿಪಡಿಸಬೇಕೆಂದು, ಲಿಂಗಾಯತ ಸಮಾಜದ ಸಂಘಟನೆಯ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿ ಬಸವ ಧರ್ಮಪೀಠದ ಶಾಖೆಯೊಂದನ್ನು ಹೊಂದುವುದು ತೀರಾ ಅತ್ಯಗತ್ಯ ಎಂಬ ಮಹಾರಾಷ್ಟ್ರ ಶರಣ ಬಂಧುಗಳ ಬೇಡಿಕೆಯಂತೆ 2006ನೇ ಇಸವಿಯ ಚೈತ್ರ ಶುದ್ಧ ಪ್ರತಿಪದೆ ಯುಗಾದಿಯ ಅಲ್ಲಮಪ್ರಭು ಪೀಠಾರೋಹಣ ಸಂಸ್ಮರಣ ದಿನಕ್ಕೆ ಹೊಂದಿಕೊಂಡು ಮಾರ್ಚ್ ತಿಂಗಳಿನ 29 ಮತ್ತು 30ನೆಯ ದಿನಾಂಕಗಳಂದು ಪ್ರಥಮ ಲಿಂಗಾಯತ ಗಣ ಮೇಳವನ್ನು ಏರ್ಪಡಿಸಲಾಗಿದೆ.

ಕೂಡಲ ಸಂಗಮದ ಬಸವ ಧರ್ಮಪೀಠ, ಮಹಾರಾಷ್ಟ್ರ ರಾಷ್ಟ್ರೀಯ ಬಸವ ದಳಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಅಲ್ಲಮ ಪ್ರಭು ಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ನಡೆಸಲಾಗುವುದು. ದಿ.29-3-2006 ಬೆಳಿಗ್ಗೆ ಉದ್ಘಾಟನೆ, ಮಧ್ಯಾಹ್ನ ಚಿಂತನಗೋಷ್ಠಿ, ಸಂಜೆ ಪ್ರವಚನ, ಸಾಮೂಹಿಕ ಕೀರ್ತನ(ಭಜನೆ), ಯುಗಾದಿ ಪಾಡ್ಯದ ದಿವಸ ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ, ಬೆಳಿಗ್ಗೆ 10-30ರಿಂದ ಸಮುದಾಯ ಪ್ರಾರ್ಥನೆ-ಅಲ್ಲಮ ಪ್ರಭು ವಚನ ಪಠಣ, ಸಂಜೆ 4ರಿಂದ ಉತ್ಸವ; ಸಿದ್ಧರಾಮೇಶ್ವರ ಗಿರಿಯಿಂದ ಜ್ಯೋತಿಯನ್ನು ತಂದು ಮೆರವಣಿಗೆ ಮೂಲಕ ಅಲ್ಲಮ ಪ್ರಭು ಗಿರಿಗೆ ಹೋಗಲಾಗುವುದು. ನಂತರ ಲಿಂಗಾಯತ ಗಣ ಮೇಳದ ಸಮಾರೋಪ ಸಮಾರಂಭ.

ಸ್ಥಳದ ಹೆಸರು : ಅಲ್ಲಮ ಪ್ರಭು ಗಿರಿ(ಡೋಂಗರ್), ಗ್ರಾಮ : ಆಳತೆ ; ಇದು ಕೊಲ್ಹಾಪುರದಿಂದ ಸಾಂಗ್ಲಿಗೆ ಹೋಗುವ ದಾರಿಯ ಮೇಲೆ ಕೇವಲ 25 ಕಿ.ಮೀಟರ್ ದೂರದಲ್ಲಿ ಇದೆ. ಸುಪ್ರಸಿದ್ಧ ಕೈಗಾರಿಕಾ ನಗರ ಇಚಲ ಕರಂಜಿಯಿಂದಲೂ 20 ಕಿ.ಮೀಟರ್ ದೂರದಲ್ಲಿದೆ. ಈ ಸ್ಥಳದಿಂದ ಸ್ವಲ್ಪ ದೂರದಲ್ಲಿ ಜೈನರ ಸುಪ್ರಸಿದ್ಧ ಯಾತ್ರಾಸ್ಥಳಗಳಾದ ಕುಂತಗಿರಿ ಮತ್ತು ಬಾಹುಬಲಿ ಬೆಟ್ಟವಿದೆ. ವಡಗಾಂವ ನಗರವೂ ಸಮೀಪದಲ್ಲಿದೆ. ಅಲ್ಲಮ ಪ್ರಭು ಗಿರಿ ಇರುವ ಆಳತೆ ಗ್ರಾಮವು ಹಾತ್‌ಕಣಂಗಲೆ ತಾಲ್ಲೂಕಿನಲ್ಲಿದ್ದು ಹಾತ್‌ಕಣಂಗಲೆಯವರೆಗೆ ರೇಲ್ವೆ ಲೈನ್ ಸೌಲಭ್ಯವಿದೆ.

ಕಾರ್ಯಕ್ರಮದ ಸಮಯದಲ್ಲಿ ಬೆಟ್ಟದ ಮೇಲೆ ವಸತಿ ವ್ಯವಸ್ಥೆಯನ್ನು ತಾತ್ಕಾಲಿಕ ಶಾಮಿಯಾನಾ ಟೆಂಟ್‌ಗಳಿಂದಲೇ ಮಾಡಬೇಕು. ಕೋಣೆಗಳ ವ್ಯವಸ್ಥೆ ಬೇಕಾದವರಿಗೆ ಇಚಲ ಕರಂಜಿ - 20 ಕಿ.ಮೀ ಮತ್ತು ಕೊಲ್ಹಾಪುರ 25 ಕಿ.ಮೀಟರ್ ದೂರದಲ್ಲಿರುವ ನಗರಗಳು. ಅಲ್ಲಿಂದ ಬರಲು ಹೋಗಲು ಸಿಟಿ ಬಸ್ ವ್ಯವಸ್ಥೆ ಮಾಡಿಸಲು ನಿರ್ಧರಿಸಲಾಗಿದೆ. ಟೆಂಪೋ ಸಹ ಸಿಗುತ್ತವೆ. ದೂರದ ಊರುಗಳಿಂದ ಬರುವವರು ದಿ. 28ರ ಸಂಜೆಯೊಳಗೆ ಬರಬೇಕೆಂದು, ಹತ್ತಿರದ ಸ್ಥಳಗಳಿಂದ ಬರುವವರು ಬೆಳಿಗ್ಗೆ 10-30ಕ್ಕೆ ನಡೆಯುವ ಉದ್ಘಾಟನಾ ಕಾರ್ಯಕ್ರಮಕ್ಕೆ ತಪ್ಪದೆ ಹಾಜರಾಗಬೇಕೆಂದು ವಿನಂತಿಸುತ್ತೇವೆ.

ಧನ ಸಹಾಯಕ್ಕೆ ಮನವಿ

2006ರ ಮಾರ್ಚ್ 29 ಮತ್ತು 30ರಂದು ನಡೆಯುವ ಪ್ರಥಮ ಲಿಂಗಾಯತ ಗಣ ಮೇಳಕ್ಕೆ ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಮಹಾಪೋಷಕರು	: 10000ರೂ ಮತ್ತು ಮೇಲೆ ಕೊಟ್ಟವರು	ಹಿತೈಷಿಗಳು	500 ರೂ
ಪೋಷಕರು	: 5000ರೂ ಮತ್ತು ಮೇಲೆ ಕೊಟ್ಟವರು	ಉತ್ಸವ ಸಮಿತಿ ಸದಸ್ಯರು	250 ರೂ
ದಾನಿಗಳು	: 1000ರೂ ಮತ್ತು ಮೇಲೆ ಕೊಟ್ಟವರು	ಪ್ರತಿನಿಧಿ ಶುಲ್ಕ	100 ರೂ

ಸ್ವಯಂ ಪ್ರೇರಣೆಯಿಂದ ಅವರವರ ಶಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡಬಹುದು. ಚೆಕ್ / ಡಿ.ಡಿ ಕಳಿಸುವವರು ಲಿಂಗಾಯತ ಗಣ ಮೇಳ ಉತ್ಸವ ಸಮಿತಿ, ಇಚಲ ಕರಂಜಿ ಶಾಖೆ ಎಂದು ಬರೆಸಬಹುದು. ಅಥವಾ ಬೆಂಗಳೂರು ಶಾಖೆ ಎಂದಾದರೂ ಬರೆಸಬಹುದು.

ಸಂಪರ್ಕಿಸುವ ವಿಳಾಸ :

ಲಿಂಗಾಯತ ಗಣ ಮೇಳ ಉತ್ಸವ ಸಮಿತಿ

ಪ್ರಧಾನ ಸಂಚಾಲಕರು :
ಶರಣೆ.ಮಾಲೂತಾಯಿ ಚಂದ್ರಕಾಂತಸ್ವಾಮಿ
ಅಧ್ಯಕ್ಷೆ, ಮಹಾರಾಷ್ಟ್ರ ರಾಷ್ಟ್ರೀಯ ಬಸವ ದಳ
ಮನೆ.ನಂ.174/9, ಇಂಡಸ್ಟ್ರಿಯಲ್ ಎಸ್ಟೇಟ್
ಇಚಲ ಕರಂಜಿ - 416115
ಜಿ-ಕೊಲ್ಹಾಪುರ, ಮಹಾರಾಷ್ಟ್ರರಾಜ್ಯ
ದೂರವಾಣಿ: 0230-2438361/2439685

ಕಾರ್ಯಾಧ್ಯಕ್ಷರು :
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಮಂಟಪ
2035, 20ನೆಯ ಮುಖ್ಯ ರಸ್ತೆ
ಕಾರ್ಡ್ ರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ: 080-23325335/23322790

ಅಲ್ಲಮ ಪ್ರಭು ಗಿರಿಯಲ್ಲಿ 2006ರ ಮಾರ್ಚ್ 29, 30ರಂದು

ಪ್ರಥಮ ಲಿಂಗಾಯತ ಗಣ ಮೇಳ

ಬರುವವರಿಗೆ ಮಾರ್ಗದರ್ಶನ

★ ಅಲ್ಲಮ ಪ್ರಭು ಗಿರಿಯು ಕೊಲ್ಹಾಪುರ - ಸಾಂಗ್ಲಿ ಹೆದ್ದಾರಿಯ ಮೇಲೆ ಕೊಲ್ಹಾಪುರದಿಂ 22 ಕಿ.ಮೀ ದೂರದಲ್ಲಿದೆ.

★ ಈವರೆಗೂ ಬರುವವರೆಲ್ಲ ರಾಮಲಿಂಗ ಕ್ರಾಸ್ ಎಂಬ 7 ಕಿ. ಮೀ ದೂರದಲ್ಲಿರುವ ಕ್ರಾಸ್‌ದಿಂದಲೇ ಗುಡಿಗೆ ವಾಹನ ತರುತ್ತಾರೆ. ಆದರೆ ಈ ರಸ್ತೆ ತೀರಾ ಕಿರಿದಾಗಿ ಕಡಿದಾಗಿ ಇರುವುದರಿಂದ ಬಸ್ಸು ಬೆಟ್ಟ ಹತ್ತಲಾರವು. ದೊಡ್ಡ ವಾಹನ-ಬಸ್ಸು ಹೆದ್ದಾರಿ ಮೇಲೆ ಬಿಟ್ಟು ಮಿನಿ ಬಸ್ಸು, ಟೆಂಪೋಗಳಲ್ಲಿ ಬೆಟ್ಟಕ್ಕೆ ಬರಬೇಕಾಗುತ್ತದೆ.

★ ಈ ಕಷ್ಟವನ್ನು ನೋಡಿ ಮೊದಲು ಶಾಹು ಮಹಾರಾಜರು ಮಾಡಿಸಿದ ರಸ್ತೆ ಕೆಟ್ಟು ಹೋಗಿದ್ದು, ಅದನ್ನು ಬಸವ ಧರ್ಮಪೀಠದಿಂದ ಅಪಾರ ಹಣ ವ್ಯಯಿಸಿ ಸರಿ ಪಡಿಸಿ ಸಂಚಾರಕ್ಕೆ ಯೋಗ್ಯವಾಗಿ ಮಾಡಿಸಲಾಗಿದೆ. ಮತ್ತು ಕ್ರಾಂತಿಕಾರಿ ವಿಚಾರಶೀಲರಾದ ಶಾಹು ಮಹಾರಾಜರ ಹೆಸರನ್ನೇ ರಸ್ತೆಗೆ ಇಡಲಾಗಿದೆ. ಇಲ್ಲಿಂದ ಅಲ್ಲಮ ಪ್ರಭು ದೇವರ ಗುಡಿಯು 5 ಕಿಲೋ ಮೀಟರ್ ದೂರವಾಗುತ್ತದೆ. ಮತ್ತು ರಸ್ತೆ ಸರಳವಿದೆ. ಈ ಮಾರ್ಗವಾಗಿ ಬಸ್ಸುಗಳು, ಲಾರಿಗಳು ಬರಬಲ್ಲುವು. ಕೊಲ್ಹಾಪುರ ಕಡೆಯಿಂದ ಬರುವವರಿಗೆ ಕೊಲ್ಹಾಪುರದಿಂದ 18ನೇ ಕಿ.ಮೀ ದೂರದಲ್ಲಿ ಈ ಕ್ರಾಸ್ ಮೊದಲು ಸಿಗುತ್ತದೆ. ಮೀರಜ್, ಹಾತ್‌ಕಣಂಗಲೆ ಕಡೆಯಿಂದ ಬರುವವರು ದಯವಿಟ್ಟು ರಾಮಲಿಂಗ ಕ್ರಾಸ್‌ದಿಂದ ಬೆಟ್ಟ ಹತ್ತದೆ, ಮುಂದೆ ಕೊಲ್ಹಾಪುರ ಕಡೆಗೆ ಬಂದು ಅಲ್ಲಮ ಪ್ರಭುದೇವ ಗಿರಿ ಕ್ರಾಸ್‌ದಿಂದ ಶಾಹು ಮಹಾರಾಜ ರಸ್ತೆಯ ಮೂಲಕ ಬೆಟ್ಟ ಹತ್ತಬೇಕು.

★ ಗಾಡಿಗಳು ಎದುರು ಬದುರಾದರೆ ಎರಡು ವಾಹನಗಳಿಗೆ ಸ್ಥಳ ಸಾಕಾಗುವುದಿಲ್ಲವಾದ್ದರಿಂದ ಒಮ್ಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಿರಲಾಗುವುದು. ಆದ್ದರಿಂದ ದಿ.28-3-2006 ರಿಂದ 31-3-2006 ರವರೆಗೆ ಬೆಟ್ಟ ಏರುವಾಗ ಅಲ್ಲಮ ಪ್ರಭು ಗಿರಿ ಕ್ರಾಸ್‌ದಿಂದ ಸಾಗಬೇಕು; ಬೆಟ್ಟ ಇಳಿಯುವಾಗ ರಾಮಲಿಂಗ ಕ್ರಾಸ್‌ದಲ್ಲಿ ಇಳಿಯಬೇಕು. ಎರಡೂ ಸ್ಥಳಗಳಲ್ಲಿ ಶಾಮಿಯಾನಾ ಹಾಕಿ, ಸೂಚನಾ ಫಲಕ ನಿಲ್ಲಿಸಿರಲಾಗುವುದು. ವಿವರ ನೀಡುವ ಸೂಚನಾ ಫಲಕಗಳನ್ನು ಎಚ್ಚರಿಕೆಯಿಂದ ಗಮನಿಸಿರಿ ಮೀರಜ್‌ದಿಂದ ಕೊಲ್ಹಾಪುರಕ್ಕೆ ಟ್ರೇನಿನಲ್ಲಿ ಸಾಗುವಾಗ ಹಾತ್‌ಕಣಂಗಲೆಯಲ್ಲಿ ರೇಲ್ವೆ ನಿಲ್ದಾಣ ಇರುವುದಾದರೂ ಅಲ್ಲಿ ನಿಲ್ಲುವ ಸೌಲಭವಿಲ್ಲ. ರೇಲ್ವೆ ಅಧಿಕಾರಿಗಳಲ್ಲಿ ತಾತ್ಕಾಲಿಕ ನಿಲುಗಡೆ ನೀಡಲು ಮನವಿಯನ್ನು ಸಲ್ಲಿಸಿರಲಾಗುವುದು.

★ ರಾಮಲಿಂಗ ಕ್ರಾಸ್‌ಗೆ ಸಾಂಗ್ಲಿ 25 ಕಿ.ಮೀ, ಹಾತ್ ಕಣಂಗಲೆ 2, ಕೊಲ್ಹಾಪುರ 22 ಕಿ.ಮೀ.

★ ಅಲ್ಲಮ ಪ್ರಭು ಗಿರಿ ಕ್ರಾಸ್ ಮತ್ತು ರಾಮಲಿಂಗ ಮಧ್ಯದ ದೂರ ಹೈವೇ ಮೇಲೆ 3 ಕಿಲೋ ಮೀಟರ್, ಕೊಲ್ಹಾಪುರ ಕಡೆಯಿಂದ ಬರುವವರಿಗೆ ಈ ಕ್ರಾಸ್‌ಗಳು ಎಡಗಡೆಗೆ, ಸಾಂಗ್ಲಿ, ಮೀರಜ್ ಕಡೆಯಿಂದ ಬರುವವರಿಗೆ ಬಲಗಡೆ ಇರುತ್ತವೆ.

ಇಚಲ ಕರಂಜಿಯಿಂದ ಹಾತ್‌ಕಣಂಗಲೆ ಮಾರ್ಗವಾಗಿ ಬಂದಾಗ ಕ್ರಾಸ್‌ಗಳು ಬಲಕ್ಕೆ ಆಗುತ್ತವೆ, ಅತ್ತೀಗಿರಿ ಮೂಲಕ ಬಂದಾಗ ಎಡಕ್ಕೆ ಇರುತ್ತವೆ. ಎರಡೂ ಕ್ರಾಸ್‌ಗಳಲ್ಲಿ ಶಾಮಿಯಾನಾ ಹಾಕಿರುವುದಲ್ಲದೆ ಸೂಚನಾ ಫಲಕಗಳು ಇರುತ್ತವೆ. ಅಲ್ಲಮ ಪ್ರಭು ಗಿರಿ ಕ್ರಾಸ್‌ದಲ್ಲಿ ಸಾಮಾಜಿಕ ಅರಣ್ಯದ ಹಸಿರು ಬೋರ್ಡ್ ಇರುತ್ತದೆ. ಸಂಪರ್ಕಿಸುವ ಮೊಬೈಲ್‌ನಂಬರ್‌ಗಳು: (0) 9850784261, 9850799547, 9822970614, 9822372367.

ಸ್ಥಳ ಪರಿಚಯ

ಅಲ್ಲಮ ಗಿರಿ-ಸಿದ್ಧರಾಮ ಗಿರಿಗಳ ವಿಶೇಷ

- ಮಾತಾಜಿ

ಅತ್ಯಂತ ಸುಂದರವೂ ಮತ್ತು ಮಹತ್ವಪೂರ್ಣವೂ ಆದ ಜಂಗಮ ಕ್ಷೇತ್ರಗಳು ಹೆಚ್ಚಿನ ಜನರ ಗಮನಕ್ಕೆ ಬರದೆ, ಅಭಿವೃದ್ಧಿಯನ್ನು ಕಾಣದೆ ಅಂತೂ ಜೀವ ಹಿಡಿದುಕೊಂಡು ಕ್ಷೀಣ ದನಿಯಿಂದ ಇತಿಹಾಸವನ್ನು ಸಾರುತ್ತಿರುವುದು ವಿಚಿತ್ರವೆನಿಸಿದರೂ ಒಂದು ಸತ್ಯ.

ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಎಂಬ ಗ್ರಾಮದ ಹದ್ದಿನಲ್ಲಿರುವ ಒಂದು ಗುಡ್ಡ ಅಲ್ಲಮ ಪ್ರಭು ಗಿರಿ. ಕೊಲ್ಹಾಪುರ-ಸಾಂಗ್ಲಿ ಹೆದ್ದಾರಿಯ ಮೇಲೆ ಸಾಗುವಾಗ... ಕಿ.ಮೀ ದೂರದಲ್ಲಿ ರಾಮಲಿಂಗ ಕ್ರಾಸ್ ಬರುತ್ತದೆ. ಗುಡ್ಡವನ್ನು ಏರುವಾಗ ಅರ್ಧ ಮಾರ್ಗದಲ್ಲಿ ಧೂಳೋಬಾ ಎಂಬ ಒಂದು ಗುಡಿಗೆ ಹೋಗುವ ಕ್ರಾಸ್ ಬರುತದೆ. ಮುಂದೆ ಸಾಗಿದಾಗ ರಾಮಲಿಂಗೇಶ್ವರ ಎಂಬ ಶಿವದೇವಾಲಯವು ಸಿಗುತ್ತದೆ. ಅಲ್ಲಿಂದಲೂ ಮುಂದೆ ಸಾಗಿದಾಗ ಜೈನ ಧರ್ಮೀಯರ ಕ್ಷೇತ್ರ ಕುಂತವ ಗಿರಿಯ ಕ್ರಾಸ್ ಸಿಗುತ್ತದೆ. ಹಾಗೆಯೇ ಮುದೆ ಸಾಗಿದಾಗ ಅಲ್ಲಮ ಪ್ರಭು ಗಿ (ಡೋಂಗರ್) ಸಿಗುತದೆ.

ಅಲ್ಲಮ ಪ್ರಭು ದೇವರು ಸಂಚಾರಿ ಮಾಡುತ್ತ ಶ್ರೀ ಸಿದ್ಧರಾಮೇಶ್ವರರ ಜೊತೆಗೂಡಿ ಬಂದು ಕೆಲವು ಕಾಲ ಇಲ್ಲಿ ನೆಲೆಸಿದ್ಧಾರೆ. ಮೊದಲ ಸಲ ನಮಗೆ ಈ ಸ್ಥಳವನ್ನು ತೋರಿಸಲು ಇಚಲ ಕರಂಜಿ ಮತ್ತು ಸುತ್ತಮುತ್ತಲಿನ ರಾಷ್ಟ್ರೀಯ ಬಸವ ದಳದ ಶರಣರು 2005ರ ಮೇ 16ರಂದು ಕರೆದೊಯ್ದರು. ಅಲ್ಲಮ ಪ್ರಭು ದೇವರು ಹಚ್ಚಿಟ್ಟ, ನಂದಾದೀಪವಾಗಿ ಉರಿಯುತ್ತಿರುವ ಜ್ಯೋತಿಯೇ ಅಲ್ಲಿ ಮುಖ್ಯ ಶ್ರದ್ಧಾಕೇಂದ್ರ. ಚಿಕ್ಕದೊಂದು ಗೂಡಿನಲ್ಲಿ ಪ್ರಣತಿಯಲ್ಲಿ ಆ ಜ್ಯೋತಿ ಉರಿಯುತ್ತಿದೆ. ಅದಕ್ಕೆ ಸುಮಾರು 8 x 8 ಅಡಿಯ ಒಂದು ಗುಡಿಯನ್ನು ಕಲ್ಲಿನಲ್ಲಿ ಕಟ್ಟಲಾಗಿದೆ. ನಂದರದ ದಿವಗಳಲ್ಲಿ ವಿಸ್ತರಿಸಿ ಒಂದು ರಂಗಮಂಟಪ ಕಟ್ಟಲಾಗಿದೆ. ಚೈತ್ರ ಮಾಸದ ಯುಗಾದಿ ಪಾಡ್ಯದ ದಿವಸ ಅಲ್ಲಮ ಪ್ರಭುದೇವರ ಜಯಂತಿ ಮತ್ತು ವಿಶ್ವವಸು ಸಂವತ್ಸರದ ಚೈತ್ರ ಪ್ರತಿಪದೆ ಯುಗಾದಿ ಸೋಮವಾರದಂದು ಪ್ರಭುದೇವರ ಶೂನ್ಯ ಪೀಠಾರೋಹಣ ಜರುಗಿದ್ದಾಗಿ ಕಾಲಜ್ಞಾನ ವಚನಗಳು ಹೇಳುತ್ತವೆ. ಹೀಗೆ ಪ್ರಭುದೇವರಿಗೂ ಯುಗಾದಿ ಪಾಡ್ಯಕ್ಕೂ ನಿಕಟ ಸಂಬಂಧವಿದೆ. ಎಷ್ಟೋ ಕಡೆ ಅಂದು ಪ್ರಭುದೇವರ ಜಾತ್ರಾ ಮಹೋತ್ಸವ ನಡೆಯುತ್ತವಂತೆ.

ನಂದಾದೀಪದ ಮೇಲೆ ಸೂರ್ಯ ಪ್ರಕಾಶ

ಅಲ್ಲಮ ಪ್ರಭುದೇವರ ದಿವ್ಯಾಲಯ ದ್ವಾರವು ಪೂರ್ವ ದಿಕ್ಕಿಗೆ ಅಭಿಮುಖವಾಗಿ ಇದೆ. ಮುಂದೆ ಮಹಾದ್ವಾರ ಕಟ್ಟಲಾಗಿದೆ. ಆ ದ್ವಾರದ ಮೇಲೆ ಒಂದು ಕೋಣೆ ಇದ್ದು, ಅದಕ್ಕೆ ಚಿಕ್ಕ ಕಿಂಡಿ ಇದೆ. ಯುಗಾದಿ ಪಾಡ್ಯದಂದು ಸೂರ್ಯಕಿರಣಗಳು ಆ ಕಿಂಡಿಯ ಮೂಲಕ ಹಾಯ್ದು ಪ್ರಭುದೇವ ದಿವ್ಯಾಲಯದ ಚಿಕ್ಕ ಬಾಗಿಲು ದಾಟಿ, ನೇರವಾಗಿ ಆ ನಂದಾದೀಪದ ಮೇಲೆ ಬೀಳುತ್ತವಂತೆ. ಆಗ ಒಮ್ಮೆ ಆ ಜ್ಯೋತಿ ದಿವ್ಯ ಬೆಳಕಿನಿಂದ ಬೆಳಗುವುದು ಎಂದು ಗುಡಿಯ ಪೂಜಾರಿಗಳು ಹೇಳಿದ್ದಾರೆ. ಈ ವರ್ಷ ದ ಯುಗಾದಿಯಂದು ಈ ದೃಶ್ಯವನ್ನು ನೋಡಲು ನಾವೂ ಬಹಳ ಉತ್ಸುಕರಾಗಿದ್ದೇವೆ.

ಸಿದ್ಧರಾಮೇಶ್ವರ ದಿವ್ಯಾಲಯ

ಆಖ್ಯಾಯಿಕೆಗಳು ಕೆಲವೊಮ್ಮೆ ವಿಡಂಬನೆ ಮಾಡಬೇಕು ಎನ್ನುವಂತೆ ಕಂಡರೂ ಅವುಗಳನ್ನು ವಿಮರ್ಶಿಸಿದಾಗ, ವಿಶ್ಲೇಷಿಸಿದಾಗ ಎಲ್ಲೋ ಒಂದು ಕಡೆ ಇತಿಹಾಸದ ಕಾಲುದಾರಿ ಲಭ್ಯವಾಗುತ್ತದೆ. ಮಾರ್ಚ್ 29 ಮತ್ತು 30ರಂದು ನಡೆಯಲಿರುವ ಪ್ರಥಮ ಲಿಂಗಾಯತ ಗಣ ಮೇಳದ ಬಗ್ಗೆ ಚರ್ಚಿಸಲು, ಸ್ವಾಗತ ಸಮಿತಿ ರಚಿಸಲು ಅಲ್ಲಮ ಪ್ರಭುಗಿರಿಯಲ್ಲಿ ಒಂದು ಸಭೆ ಕರೆದಿದ್ದು ನಾನು ಮತ್ತು ಅಮೇರಿಕಾದಿಂದ ಆಗಮಿಸಿ ಅಲ್ಲಮ ಪ್ರಭು ಗಿರಿ ನೋಡಲು ಉತ್ಕಟ ಆಸಕ್ತಿ ಹೊಂದಿದ ಯೋಗೀಶ್ವರಿ ಉಭಯತರೂ ಬೆಂಗಳೂರಿನಿಂದ ಬೆಳಗಾವಿಗೆ ವಿಮಾನದಲ್ಲಿ ಹೋದೆವು. ಇಚಲ ಕರಂಜಿಯ ಬಸವ ಮಂಟಪದಲ್ಲಿ

ಇರುವ ಮಾತೆ ಜ್ಞಾನೇಶ್ವರಿ ಕಾರು ತೆಗೆದುಕೊಂಡು ಬೆಳಗಾವಿಯ ವಿಮಾನ ನಿಲ್ದಾಣಕ್ಕೆ ಬಂದರು. ಬೆಳಗಾಂ ರಾಷ್ಟ್ರೀಯ ಬಸವ ದಳದ ಶರಣರೂ ಬಂದು ಸ್ವಾಗತಿಸಿದರು. ದಿ.24 ಮೀಟಿಂಗ್, ದಿ.26ರಂದು ಅಲ್ಲಮ ಪ್ರಭು ಗಿರಿಯ ಮೇಲೆ ಶರಣ ಗಣ ಮೇಳ ಆಚರಿಸಿದೆವು.

ಗುಡಿಯ ಪೂಜಾರಿಗಳ ಜೊತೆ ಮಾತನಾಡುತ್ತ ಅವರು ಮುಗ್ಧವಾಗಿ(ಪೆದ್ದು ಪೆದ್ದಾಗಿ) ಹೇಳುವ ಸಂಗತಿಗಳನ್ನೆಲ್ಲ ಚಿಂತನೆ ಮಾಡಿದೆ.

1. ಅಣ್ಣ-ತಮ್ಮ ಇಬ್ಬರೂ ಬಂದಿದ್ದರು. ಒಂದು ಅಣ್ಣನ ಗುಡಿ, ಇನ್ನೊಂದು ತಮ್ಮನ ಗುಡಿ
2. ಗುಡಿಯ ಹಿಂದೆ ಒಂದು ಚಿಕ್ಕ ಗುಡಿ ಇದೆ. ಅದರಲ್ಲಿ ಕುದುರೆಯ ಪಾದಗಳು ಇವೆ.
3. ಅಲ್ಲಮ ಪ್ರಭು ಗುಡಿಯಿಂದ ಸುಮಾರು 1 ಕಿ.ಮಿ ದೂರದಲ್ಲಿ ಸಿದ್ಧರಾಮ ಗಿರಿ (ಮರಾಠಿಯಲ್ಲಿ ಸಿದ್ದೋಬಾ ಡೋಂಗರ್) ಕಡೆಗೆ ಹೋಗುವಾಗ ತಿರುಗುತ್ತಿ ಎಂಬ ತಾಣವಿದೆ. ಅಲ್ಲಿ ಉಭಯತರೂ ಬೇರೆಯಾದರು.
4. ಸಿದ್ಧರಾಮ ಗಿರಿ ಬಹಳ ಎತ್ತರವಾದ ಬೆಟ್ಟ, ಅಲ್ಲಿ ಸಿದ್ದೋಬಾ ಗುಡಿ ಇದ್ದು ಬೆನ್ನಿಗೆ ಪೂಜೆ ನಡೆಯುತ್ತದೆ.
5. ಈ ಇಬ್ಬರೂ ಬಸವ ಕಲ್ಯಾಣದ ಕಡೆಯಿಂದ ಬಂದವರು.

ಇಷ್ಟು ವಿಷಯವನ್ನು ಅಲ್ಲಿಯು ಪೂಜಾರಿಗಳು, ಸುತ್ತಲಿನ ಜನರು ಹೇಳುತ್ತಾ ಬಂದಿದ್ದಾರೆ. ಗಿರಿಯ ಸುತ್ತಲೂ ಗ್ರಾಮಗಳಿದ್ದು ಆ ಗ್ರಾಮಗಳ ಜನರು ಅಲ್ಲಮ ಪ್ರಭು "ಮನೆ ದೇವರು" ಎಂದು ನಂಬಿದ್ದಾರೆ. ಆಶ್ಚರ್ಯದ ಸಂಗತಿ ಎಂದರೆ ಗ್ರಾಮಗಳಲ್ಲಿ ಲಿಂಗಾಯತರು ಅಧಿಕ ಸಂಖ್ಯೆಯಲ್ಲಿದ್ದಾರೆ. ತಾವು ಲಿಂಗಾಯತ ಜಾತಿಯವರು ಎಂದು ನಂಬಿದ್ದಾರೆ; ಧಾರ್ಮಿಕ ಜ್ಞಾನ ಅಷ್ಟಾಗಿ ಇಲ್ಲ.

ಅಲ್ಲಮ ಪ್ರಭು ದೇವರು ವಿಶ್ವವಸು ಸಂವತ್ಸರ ಚೈತ್ರ ಪ್ರತಿಪದೆ ಸೋಮವಾರದಂದು, ರೇವತಿ ನಕ್ಷತ್ರದಲ್ಲಿ ಪೀಠಾರೋಹಣ ಮಾಡುತ್ತಾರೆ. ಸ್ವಲ್ಪ ಕಾಲದ ನಂತರ ಧರ್ಮ ಪ್ರಚಾರಾರ್ಥ ಸಂಚಾರ ಹೊರಡುತ್ತಾರೆ. ಮಹಾರಾಷ್ಟ್ರ ರಾಜ್ಯದಲ್ಲಿ ಲಿಂಗಾಯತ ಧರ್ಮೀಯರ ಸಂಖ್ಯೆ ಹೆಚ್ಚು ಇರಲು ಪ್ರಮುಖವಾಗಿ ಕಾರಣರು. 1.ಸಿದ್ಧರಾಮೇಶ್ವರರು 2.ಅಲ್ಲಮ ಪ್ರಭು ದೇವರು 3.ಕಪಿಲ ಧಾರಾದ ಮನ್ಮಥ ಸ್ವಾಮಿ 4.ಗುಡ್ಡಾಪುರದ ದಾನಮ್ಮ 5.ಕಾಡಸಿದ್ಧೇಶ್ವರರು.ಸ ಇನ್ನು ಕೆಲವರು ನಂತರದ ದಿನಮಾನಗಳಲ್ಲಿ ಆಗಿ ಹೋಗಿರಬಹುದು. ಅಲ್ಲಮ -ಸಿದ್ಧರಾಮರು ಅಶ್ವಾರೂಢರಾಗಿ ಸಂಚರಿಸುತ್ತ ಬಂದು ಇಲ್ಲಿ ನೆಲೆಸಿದ್ದಾರೆ. ಒಂದು ಅಲ್ಲಮ ಪ್ರಭು ದೇವರ ದಿವ್ಯಾಲಯ, ಇನ್ನೊಂದು ಸಿದ್ಧರಾಮೇಶ್ವರ ದಿವ್ಯಾಲಯ; ಇದರ ಅಡಿಯಲ್ಲಿ ಉಭಯತರು ತ್ರಾಟಕ ಯೋಗ ಮಾಡುತ್ತಿದ್ದ ಒಂದು ಸುಂದರ ಗವಿ ಇದೆ. ಯಾರೂ ಬಳಸದೆ ಅದು ಕೊಳಕಾಗಿದ್ದು, ಈಗ ಅದನ್ನು ಸ್ವಚ್ಛ ಮಾಡಿಸಲು ವ್ಯವಸ್ಥೆ ಮಾಡಿದ್ದೇವೆ. ಆ ಪ್ರಾಂತ್ಯದಲ್ಲಿ ಸಂಚರಿಸಿ, ದೀಕ್ಷೆ ನೀಡಿ ಲಿಂಗಾಯತ ಧರ್ಮವನ್ನು ಬೆಳೆಸಿದ್ದಾರೆ. ಕೆಲವು ಕಾಲದ ನಂತರ ನಿರಾಭಾರಿ ಜಂಗಮ ಅಲ್ಲಮ ಪ್ರಭುದೇವರು ಸಂಚಾರವನ್ನು ಮುಂದುವರಿಸಲು ಬಯಸುತ್ತಾರೆ. ಆದರೆ ಸಾಭಾರಿ ಜಂಗಮರಾದ ಅಂದರೆ ಸಂಸ್ಥೆಯ ಜವಾಬ್ದಾರಿ ಇದ್ದ ಶ್ರೀ ಸಿದ್ಧರಾಮೇಶ್ವರರು ವಾಪಸ್ಸು ಸೊಲ್ಲಾಪುರಕ್ಕೆ ಹೊರಟು ನಿಲ್ಲುತ್ತಾರೆ; ಉಭಯತರೂ ಅಗಲುವುದು ಕಷ್ಟಸಾಧ್ಯವೆನಿಸುತ್ತದೆ. ರಕ್ತ ಸಂಬಂಧಕ್ಕಿಂತಲೂ ಭಕ್ತಿ ಸಂಬಂಧ ಬಹಳ ಗಾಢವಷ್ಟೆ, ಸಿದ್ಧರಾಮೇಶ್ವರರನ್ನು ಕಳಿಸಿಕೊಡಲು ಒಂದು ವಿಶಿಷ್ಟ ಜಾಗದವರೆಗೆ ಪ್ರಭುದೇವರು ಬರುತ್ತಾರೆ. ಆ ಸ್ಥಳವೇ "ತಿರುಗುತಿ" ಅಲ್ಲಮ ಪ್ರಭು ಗಿರಿಯ ಮೇಲೆ ಬರುವ ಎತ್ತರದ ದಿಬ್ಬ, ಅಲ್ಲಿಂದ ಬೀಳ್ಕೊಡುತ್ತಾರೆ. ಉಭಯತರೂ ಪರಸ್ಪರ ನೋಡುತ್ತಲೇ ಇರುವಂತೆ ಸಿದ್ಧರಾಮೇಶ್ವರರು ಎದುರಾದ ಎತ್ತರದ ಬೆಟ್ಟದ ಮೇಲೆ ನಿಂತು ಕೈ ಬೀಸುತ್ತಾರೆ. ಪ್ರಯಾಣ ಮುಂದುವರಿಸಿದ ಸಿದ್ಧರಾಮೇಶ್ವರರ ಬೆನ್ನು ಕಾಣುತ್ತ ಮುಂದೆ ಅವರು ಬೆಟ್ಟ ಇಳಿದು ಕಾಣದಾಗುತ್ತಾರೆ. ಅಲ್ಲಮ ಪ್ರಭು ದೇವರು "ತಿರುಗುತಿ" ಯಿಂದ ವಾಪಸ್ಸಾಗಿ, ನಂತರ ಸಂಚಾರ ಮುಂದುವರಿಸುತಾರೆ.

ದಿ.25ರಂದು ಆ ಸ್ಥಳದ ಮೇಲೆ ನಿಂತು ಅಲ್ಲಮ ಪ್ರಭು ಮತ್ತು ಸಿದ್ಧರಾಮೇಶ್ವರರು ಪರಸ್ಪರ

ಬೀಳ್ಕೊಡುವ ದೃಶ್ಯವನ್ನು ಕಲ್ಪಿಸಿಕೊಂಡಾಗ ಹರ್ಷದಿಂದ ನನ್ನ ಕಣ್ಣುಗಳು ಹನಿದುಂಬಿದವು. ಹೃದಯದಲ್ಲಿನ ಆನಂದ ವಿಷಾದವಾಗಿ ತಿರುಗಿತು. ಬಡವನಾದ ತಂದೆಯ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಕಾಯಕ ನಿಷ್ಠೆ - ಪರಿಶ್ರಮದಿಂದ ದುಡಿದು ತಂದೆಯ ಹೆಸರನ್ನು ಮೆರೆಸುವ ಬಗೆ ಒಂದು ತರಹ; ತಂದೆ ದುಡಿದು ಮಾಡಿದ ಆಸ್ತಿಯನ್ನು ಹೆಚ್ಚು ಮಾಡದೆ ಕಡಿಮೆ ಮಾಡದೆ ಹಾಗೆಯೇ ಉಳಿಸಿಕೊಂಡು, ತಿನ್ನುತ್ತ ಹೋಗುವ ಮಕ್ಕಳು ಇನ್ನೊಂದು ಬಗೆ. ತಂದೆ ಮಾಡಿಟ್ಟ ಆಸ್ತಿಯನ್ನು ಕಳೆದು ತಂದೆಯ ಹೆಸರನ್ನು ಕೆಡಿಸಿ ತಾವೂ ದಾರಿದ್ರ್ಯದಲ್ಲಿ ಬಳಲುವುದು ಇನ್ನೊಂದು ಬಗೆ.

ಏಸುಕ್ರಿಸ್ತ ಕೊಟ್ಟದ್ದು ಸ್ವಲ್ಪ. ಆದರೆ ಆತನ ಬಲಿದಾನವನ್ನೇ ಮುಖ್ಯ ಅಂಶವನ್ನಾಗಿ ಇಟ್ಟುಕೊಂಡು ಕ್ರಿಸ್ತನ ತತ್ತ್ವಗಳನ್ನು ಉಳಿಸಿಕೊಂಡದ್ದು ಮಾತ್ರವಲ್ಲದೆ ಬೆಳೆಸಿದುದ್ದು ಕ್ರೈಸ್ತರ ಹಿರಿಮೆ. ಮೊಹಮ್ಮದ್ ಪೈಗಂಬರ, ಜೈನ ತೀರ್ಥಂಕರರು, ಗೌತಮ ಬುದ್ಧ, ಗುರುನಾನಕರು ಕೊಟ್ಟುದನ್ನು ಯಥಾವತ್ತಾಗಿ ಬಳಸಿಕೊಳ್ಳುತ್ತ ಮುಸಲೀಮರು, ಜೈನರು, ಬೌದ್ಧರು, ಸಿಖ್ಖರು ಮುಂದುವರಿದುದು ಇನ್ನೊಂದು ಬಗೆ. ಧರ್ಮಗುರು ಬಸವಣ್ಣನವರು ಮಾತ್ರವಲ್ಲ ಅಲ್ಲಮ ಪ್ರಭು, ಸಿದ್ಧರಾಮೇಶ್ವರ, ಚನ್ನಬಸವಣ್ಣ ಮುಂತಾದ ದಾರ್ಶನಿಕ ದಿಗ್ಗಜರು ಸಂಪಾದಿಸಿಕೊಟ್ಟ ವಚನ ವಾಙ್ಮಯದ ಸಿರಿವಂತಿಕೆಯನ್ನು ಬಳಸಿಕೊಳ್ಳದೆ, ಬೆಳೆಸಿಕೊಳ್ಳದೆ ಬೌದ್ಧಿಕ ದಾರಿದ್ರ್ಯ, ಅಸಂಘಟನೆಯಿಂದ ಬಳಲುತ್ತ ಧರ್ಮಗುರು ಬಸವಣ್ಣನವರಿಗೂ ಅಪಕೀರ್ತಿ ತರುವಂತೆ ಲಿಂಗಾಯತ ಧರ್ಮಕ್ಕೆ ಜಾತಿಯ ಚೌಕಟ್ಟು ಹಾಕಿಟ್ಟುಕೊಂಡು ಲಿಂಗಾಯತ ಮಠಾಧೀಶರನ್ನು ಕಂಡಾಗ ಏಕೆ ದುಃಖ ಉಂಟಾಗಲಾರದು? -ಮಾತಾಜಿ

ಸೊಲ್ಲಾಪುರ ನಗರದ ಭವಾನಿ ಪೇಟೆಯಲ್ಲಿರುವ



ಜೈ ಭವಾನಿ ಬಗೀಚಾದಲ್ಲಿ

ದಿ.26-1-2006 ಗುರುವಾರದಿಂದ ನೆಡೆಯುತಿರುವ

ವಿಶ್ವಧರ್ಮ ಪ್ರವಚನ ಮಂಗಲ ಕಾರ್ಯಕ್ರಮ

ದಿವ್ಯ ಸನ್ನಿಧಿ:

ಅಪೂರ್ವ ವಾಗ್ಮಿ ಕೂಡಲ ಸಂಗಮದ ಬಸವ ಧರ್ಮದ
ಮಹಾಜಗದ್ಗುರು ಪೀಠದ ದ್ವಿತೀಯ ಪೀಠಾಧೀಶರಾದ

ಪೂಜ್ಯ ಶ್ರೀ ಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ

ಪೂಜ್ಯ ಮಾತಾಜಿಯವರ ಕರಕಮಲ ಸಂಜಾತರಾಗಿ ಕಿರದಾದ ವಯಸ್ಸಿನಲ್ಲಿಯೇ ಹಿರಿದಾದ ಜ್ಞಾನಗಳಿಸಿ ಸಮಾಜದ ಸರ್ವಾಂಗೀಣ ಉದ್ಧಾರಕ್ಕಾಗಿ ತಮ್ಮ ಜೀವನವನ್ನು ಧರ್ಮಪ್ರಚಾರಕ್ಕೆಂದು ಮೀಸಲಿಟ್ಟು ವಿರಕ್ತಾಶ್ರಮ ಸ್ವೀಕರಿಸಿ, ನಿರಂತರವಾಗಿ ಸಂಚರಿಸುತ್ತಿರುವ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಹಿಳಾ ಪೀಠದ ದ್ವಿತೀಯ ಪೀಠಾಧೀಶರಾದ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ

ಅವರು ಗುರು(ಪ್ರಭು)ವಾರ, ದಿ.26-01-2006 ರಿಂದ ಪ್ರತಿನಿತ್ಯ ಸಂಜೆ 6-30 ರಿಂದ 8-30 ರ ವರೆಗೆ ಅಖಂಡವಾಗಿ ಅವ್ಯಾಹತವಾಗಿ ವಿಶ್ವಧರ್ಮ ಪ್ರವಚನವನ್ನು ಮಾಡುತ್ತಿರಷ್ಟೇ ಪ್ರಸ್ತುತ ಕಾರ್ಯಕ್ರಮವು ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ದೇವ(ಭಾನು)ವಾರ ದಿ.26-3-2006ರಂದು ಮಂಗಲಗೊಳ್ಳಲಿದೆ.

ಸಂಪಾದಕೀಯ :

1. ನಿರಾಶೆ ತಂದ (ಬಸವ ಸಮಿತಿ) ಅಧ್ಯಕ್ಷರ ನುಡಿ

-ಮಾತಾಜಿ

ಬಸವ ಪಥದ ಮಾರ್ಚ್ ಸಂಚಿಕೆ ಕೈ ಸೇರಿತು. ಕಲ್ಯಾಣ ಕಿರಣವು ಎತ್ತಿದ ಅನೇಕ ಪ್ರಶ್ನೆಗಳಿಗೆ ಉತ್ತರ ನಿರೀಕ್ಷಿಸಿದ್ದ ನಮಗೆ ಮತ್ತು ಅನೇಕ ಕುತೂಹಲಿಗಳಾದ ಓದುಗರಿಗೆ ಅಧ್ಯಕ್ಷರ ನುಡಿಯಲ್ಲಿ ಉತ್ತರ ಸಿಗದೆ ನಿರಾಶೆಯುಂಟಾಯಿತು.

1. ಮಾರ್ಚ್ ಸಂಚಿಕೆಯ ಮುಖ ಪುಟದಲ್ಲಿ ಮಧುವರಸ ಚಮ್ಮಾವುಗೆ ಮೆಟ್ಟುವ ಪ್ರಸಂಗ ಚಿತ್ರಣಗೊಂಡಿದೆ. ಮಧುವರಸ ಆಗಿನ್ನೂ ಭವಿ. ಹೇಗಿದ್ದರೂ ನಡೆಯುತ್ತದೆ. ಮತ್ತು ಅವನ ಪಾತ್ರಕ್ಕೆ ತಕ್ಕಂತೆ ಚಿತ್ರಿಸಲಾಗಿದೆ. ಆದರೆ ಹರಳಯ್ಯ ಅದಕ್ಕಿಂತ ಹೆಚ್ಚು ಕಲ್ಯಾಣಮ್ಮನ ಮುಖ ಅತಿ ಭಯಂಕರವಾಗಿದೆ; ಅಲ್ಲಿ ಶರಣರ ಲಕ್ಷಣ ಎಷ್ಟೂ ಕಾಣುತ್ತಿಲ್ಲ. ಚಮ್ಮಾವುಗೆ ಮಾಡುವ ಹೊತ್ತಿಗೆ ಅವರಿಬ್ಬರೂ ಶ್ರೇಷ್ಠ ಮಟ್ಟದ ಶರಣರಾಗಿದ್ದರು. ಅದು ಮುಖದ ಮೇಲೆ ಎಷ್ಟೂ ಕಾಣದಿರುವುದು; ಈ ಭಯಂಕರ ರೂಪದಲ್ಲಿ ನಮ್ಮ ಅಚ್ಚುಮೆಚ್ಚಿನ ಶರಣರನ್ನು ನೋಡಲು ಬಹಳ ದುಃಖವೆನಿಸುತ್ತದೆ.
2. 2ನೆಯ ಪುಟದಲ್ಲಿ ಸಂಪಾದಕರು / ಸಂಪಾದಕ ಮಂಡಳಿ ಬಹುದೊಡ್ಡ ಜವಾಬ್ದಾರಿಯನ್ನು ಸುಲಭವಾಗಿ ತಪ್ಪಿಸಿಕೊಳ್ಳುವ ದಾರಿ ಹುಡುಕಿ, "ಲೇಖಕರ ಅಭಿಪ್ರಾಯಗಳು ಬಸವ ಸಮಿತಿಯ ಅಭಿಪ್ರಾಯಗಳಲ್ಲ." ಎಂದು ಪ್ರಕಟಿಸಿದ್ದಾರೆ. ಈ ಮಾತುಗಳನ್ನು ಸುದ್ದಿ ಬಿತ್ತರಿಸುವ ವಾರ್ತಾಪತ್ರಿಕೆಗಳು ಜಾಹಿರಾತು ವಿಭಾಗದಲ್ಲಿ "ಜಾಹಿರಾತು ವಿವರಗಳು ಪತ್ರಿಕೆ ಸಂಬಂಧಿಸಿಲ್ಲ." ಎಂದು ವರ್ಗೀಕೃತ ಜಾಹಿರಾತು ವಿಭಾಗದಲ್ಲಿ ಪ್ರಕಟಿಸುತ್ತಾರೆ. ಈ ಪಲಾಯನ ವಾದವನ್ನು ಬಸವ ಸಮಿತಿ ಪಠಿಸಲು ಬರೆದು. ಏಕೆಂದರೆ ಇಲ್ಲಿ ಧರ್ಮವು ನಂಬಿಕೆಯ ಪ್ರಶ್ನೆ. ಲೇಖನಗಳು ಓದುಗರ ಮೇಲೆ ಪ್ರಭಾವ ಬೀರಿ ಅಭಿಪ್ರಾಯ ರೂಪಿಸುತ್ತವೆ. ಬಸವ ಸಮಿತಿಯ ಪ್ರಕಟಣೆಯಲ್ಲಿ ಮುದ್ರಣಗೊಂಡಿದೆ ಎಂದರೆ ಅದು ಅಧಿಕೃತ ಎಂದು ಭಾವಿಸುತ್ತಾರೆ. ಆದ್ದರಿಂದ ಸಂಪಾದಕರು ಇಷ್ಟು ಸುಲಭವಾಗಿ ಜವಾಬ್ದಾರಿ ತಪ್ಪಿಸಿಕೊಳ್ಳದೆ ಚಿತ್ರಗಳು, ಲೇಖನ ಮುಂತಾದುವನ್ನು ಪರಾಮರ್ಶೆ ಮಾಡಿ ತತ್ತ್ವಕ್ಕೆ ಚ್ಯುತಿ ಬರದಂತೆ ಪ್ರಕಟಿಸಬೇಕು.
3. ಲಿಂಗಾಯತ ಧರ್ಮದ ಸೃಷ್ಟಿಕರ್ತನು ಲಿಂಗದೇವ ಎಂಬುದು ಸೂಕ್ತ ಎಂಬುದನ್ನು ಅಧ್ಯಕ್ಷರು ಸುತ್ತಿ ಬಳಸಿ ಒಪ್ಪಿದ್ದಾರೆ. ಆದರೆ ಲೋಕಾರೂಢಿಯಂತೆ. ಲೌಕಿಕ ನಿಯಮ, ಶಿಷ್ಟಾಚಾರಕ್ಕೆ ಅನುಗುಣವಾಗಿ ವಚನಾಂಕಿತ ಬದಲಿಸುವುದು ಸೂಕ್ತವಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ; ಆದರೆ ಕೆಲವೊಮ್ಮೆ ಆ ಚೌಕಟ್ಟು ಸರಿ ಇಲ್ಲ ಎಂದು ಕೆಲವರ ಅಂತರಾತ್ಮ ನುಡಿಯುತ್ತದೆ. ಅವರು ಉತ್ತಮವಾದ ಪರ್ಯಾಯ ವ್ಯವಸ್ಥೆಯನ್ನು ಹೇಳಿದರೂ ಸಹಜಗತಿಯಲ್ಲಿ ಲೋಕಾಚಾರಕ್ಕನುಗುಣವಾಗಿ ನಡೆವ ಸಂಪ್ರದಾಯ ಬದ್ಧ ಸಮಾಜವು ಒಪ್ಪಿಕೊಳ್ಳುವುದಿಲ್ಲ. ಆಗ ವ್ಯವಸ್ಥೆಯೊಡನೆ ಆ ವ್ಯಕ್ತಿ ರಾಜಿ ಮಾಡಿಕೊಂಡರೆ ಏನೂ ಸಂಘರ್ಷ ಉಂಟಾಗುವುದಿಲ್ಲ. ವ್ಯವಸ್ಥೆಯೊಡನೆ ರಾಜಿ ಮಾಡಿಕೊಳ್ಳದೆ ವ್ಯಕ್ತಿಯು ತನ್ನ ಅಂತರಾತ್ಮದ ಧ್ವನಿಯನ್ನೇ ಗಟ್ಟಿಗೊಳಿಸಿದರೆ ಸಂಘರ್ಷ ಬಹಳ ಸ್ವಾಭಾವಿಕ.

1. ಶೂದ್ರ, ಅಸ್ಪೃಶ್ಯರು ಸಂಸ್ಕಾರಕ್ಕೆ ಅರ್ಹರಲ್ಲ ಎಂಬ ನಂಬಿಕೆಯನ್ನು ವೈದಿಕ ಶಾಸ್ತ್ರಗಳನು ಜನರ ಮನದಲ್ಲಿ ದೃಢಪಡಿಸಿದ್ದವು. ಈ ನಂಬಿಕೆ ಶೋಷಕರಾದ ಸವರ್ಣೀಯರಲ್ಲಷ್ಟೆ ಗಟ್ಟಿಗೊಂಡಿರಲಿಲ್ಲ ಶೋಷಿತರಾದ ದಲಿತರಲ್ಲೂ ನಾವು ಅರ್ಹರಲ್ಲ ಎಂಬ ಭಾವ ಬೇರು ಬಿಟ್ಟಿತ್ತು. ಇಬ್ಬರ ಚಿಂತನೆಯ ದಿಕ್ಕನ್ನು ಬದಲಿಸುವ, ಸವರ್ಣೀಯರಲ್ಲಿದ್ದ ಮೇಲರಿಮೆ ಕುಲಮದವನ್ನು, ದಲಿತರಲ್ಲಿದ್ದ ಕೀಳರಿಮೆಯನ್ನು ಬಸವಾದಿ ಪ್ರಮಥರು ತೊಡೆದು ಹಾಕಲು ಎಷ್ಟು ಕಷ್ಟ ಪಡಬೇಕಾಯಿತು? ಆಗ ಬಸವಣ್ಣನವರು ವೇದ-ಆಗಮಗಳನ್ನು ಉಲ್ಲಂಘಿಸಿದ್ದು ಅಪರಾಧವೇ?

★ ಸ್ವಾಮಿ, ಸ್ವಾಮಿ ಭವಿಯ ಭಕ್ತನ ಮಾಳ್ಪುದು
ಯೋಗ್ಯವೋ ಅಯೋಗ್ಯವೋ?
ಆಗಮ ವಿಚಾರದಿಂದ ಆಗದಿಹುದೆಂಬ ಸಿದ್ಧಾಂತ
ಇಲ್ಲಿಯೋ ಪರಮ ಗುರು ಸಂಗನ ಬಸವಣ್ಣನು
ಸರ್ವಜಾತಿಯ ಲಿಂಗದ ರಾಶಿಯ ಮಾಡಿದ ಸಿದ್ಧಾಂತ!
ಕಪಿಲ ಸಿದ್ಧ ಮಲ್ಲಿಕಾರ್ಜುನಾ

★ ನಾಲಗೆ ತಾಗಿದ ರುಚಿಗೆ ಮನವೇ ಸಾಕ್ಷಿ ಸಾಲದೆ ಅಯ್ಯಾ?
ಮಾಲೆಗಾರನ ಕೇಳಿ ನನೆ ಅರಳುವುದೇ
ಆಗಮವನಿದಿರಿಂಗೆ ತೋರುವುದು ಆಚಾರವೇ ಅಯ್ಯಾ?

-ಧರ್ಮಪಿತ ಬಸವಣ್ಣನವರು

ಬೇರೆ ಬೇರೆ ವರ್ಣಗಳವರ ಮಧ್ಯೆ ವಿವಾಹ ಧರ್ಮಬಾಹಿರ, ಶಾಸ್ತ್ರವಿರೋಧಿ ಎಂದೇ ನಂಬುಗೆ ಇದ್ದಾಗ ಧರ್ಮಪಿತರು ಬ್ರಾಹ್ಮಣ-ಅಸ್ಪೃಶ್ಯರು ಉಭಯತರೂ ಪೂರ್ವಾಶ್ರಮ ಕಳಚಿಕೊಂಡಾಗ ವಿವಾಹ ಮಾಡಿಸಿದರು. ಅಂದಿನ ಸಂಪ್ರದಾಯದ ದೃಷ್ಟಿಯಲ್ಲಿ ಅದು ಘೋರ ಅಪರಾಧ. ಆದರೆ ಅದೇ ಕ್ರಿಯೆ ಇಂದು ಬಸವಣ್ಣನವರನ್ನು ಮಹಾಕ್ರಾಂತಿಕಾರಿಯನ್ನಾಗಿ ಮಾಡುತ್ತಲಿದೆ. ಸ್ಥಾವರ ಲಿಂಗೋಪಾಸನೆಯಿಂದ ಇಷ್ಟಲಿಂಗೋಪಾಸನೆ, ಏಕದೇವೋಪಾಸನೆಯತ್ತ ಸಾಗಿ ಅದನ್ನೇ ಬೋಧಿಸಿದ ಬಸವಣ್ಣನವರು ಸಾಕ್ಷಾತ್ಕಾರದ ನಂತರದ ವಚನಗಳಲ್ಲಿ ಕೂಡಲ ಸಂಗಮದೇವ ಬದಲಿಸಿರಲೇಬೇಕು; ಲಿಂಗದೇವ ಅಳವಡಿಸಿರಲೇಬೇಕು. ಆದ್ದರಿಂದಲೇ ಶರಣ ಹರ್ಡೇಕರ್ ಮಂಜಪ್ಪನಂಥ ಅನುಭಾವಿಗಳು ಕೂಡಲ ಸಂಗಮ ದೇವದ ಬದಲು ವ್ಯಾಖ್ಯಾನದಲ್ಲಿ ಲಿಂಗದೇವ ಬಳಸಿದ್ದಾರೆ. ನಾನು ಸುತ್ತು ಬಳಸಿನ ಹಾದಿ ಬೇಡ ಎಂದು ನೇರವಾಗಿ ಸತ್ಯವನ್ನು ಪ್ರಕಾಶಗೊಳಿಸಿದ್ದೇನೆ.

ಇಂದು ಕೆಲವರಿಗೆ ಅರ್ಥವಾಗದಿದ್ದರೂ, ಕೆಲವರಿಗೆ ಅರ್ಥವಾದರೂ ಸತ್ಯವನ್ನು ಅರಗಿಸಿಕೊಳ್ಳುವ ಧೈರ್ಯವಿಲ್ಲದಿದ್ದರೆ ಯಾರೇನು ಮಾಡಲು ಸಾಧ್ಯ? ಇನ್ನು ಕೆಲವರಿಗೆ ವೈಯಕ್ತಿಕ ಮತ್ಸರವು ಇರುತ್ತದೆ. ಇಂಥವರೆಲ್ಲರನ್ನು ತೃಪ್ತಿ ಮಾಡಲು ಒಂದು ಮಹತ್ತರ ಸಂಶೋಧನೆಯನ್ನು ಕೈ ಬಿಡಲು ಬರುತ್ತದೆಯೆ? ಲಿಂಗಾಯತ ಸಮಾಜದ ಸಾಂಪ್ರಾದಾಯಿಕ ಭಾಗ ಎಂದೂ ನಮ್ಮ ತ್ಯಾಗವನ್ನಾಗಲೀ, ಪರಿಶ್ರಮವನ್ನಾಗಲೀ ಅರ್ಥಮಾಡಿಕೊಂಡಿಲ್ಲ, ಮೆಚ್ಚಿಕೊಂಡಿಲ್ಲ, ಸಹಕರಿಸಿಲ್ಲ. ಸತ್ಯವನ್ನೇ ಅವಲಂಬಿಸಿಕೊಂಡು ಮುಂದೆ ಸಾಗಿರುವುದಷ್ಟೇ ಅಂತರಾತ್ಮಕ್ಕೆ ತೃಪ್ತಿ ನೀಡಿರುವ ಸಂಗತಿ ಮುಂದೊಂದು ದಿನ ಲಿಂಗದೇವದ ಪರಿಕಲ್ಪನೆಯಿಂದ ಧರ್ಮಪಿತರ ಸಂದೇಶ ಲೋಕೋತ್ತರ ಕೀರ್ತಿಪಡೆದಾಗ ಯಾರಿಗಾದರೂ ನಮ್ಮ ಸಂಶೋಧನೆಯ ಮಹತ್ವ ಅರ್ಥವಾದರೆ ಅಷ್ಟೆ ಸಾಕು!

- ಗೌರವ ಸಂಪಾದಕರು, ಕಲ್ಯಾಣ ಕಿರಣ

ಕಲ್ಯಾಣ ಕ್ರಾಂತಿ 810ನೆಯ ಸಂಸ್ಮರಣೆ

1. ವರ್ಣಾಂತರ ವಿವಾಹ	10-3-2006
2. ಧರ್ಮಪಿತರ ಗಡಿಪಾರು	11-3-2006
3. ಶರಣರ ಬಂಧನ ವಿಚಾರಣೆ	12-3-2006
4. ಶರಣರ ವಧೆ-ಎಳೆಹೂಟೆ	13-3-2006
5. (ಹೋಳಿ ಹುಣ್ಣಿಮೆ) ಬಿಜ್ಜಳನ ವಧೆ	14-3-2006
6. ಚನ್ನಬಸವಣ್ಣನವರ ಕಲ್ಯಾಣ ನಿರ್ಗಮನ	15-3-2006
7. ಕಲ್ಯಾಣ ಕ್ರಾಂತಿ ಸಂಸ್ಮರಣ	16-3-2006

2. ದೇಶದ ಅಂತಃಸಾಕ್ಷಿ ಬದುಕಿದೆಯೆ ? ಸತ್ತು ಹೋಗಿದೆಯೆ ?

ಏಳು ವರ್ಷಗಳ ಹಿಂದೆ ರೂಪದರ್ಶಿ ಜೆಸ್ಸಿಕಾಲಾಲ್‌ಳ ಹತ್ಯೆ ಇಡೀ ನವ ದೆಹಲಿಯನ್ನು ಮಾತ್ರವಲ್ಲದೆ ದೇಶವನ್ನೇ ನಡುಗಿಸಿತು. ದೆಹಲಿಯ ಕುತುಬ್ ಮಿನಾರ್ ಮುಂದಿನ ರಸ್ತೆಯಲ್ಲಿರುವ "ಟಾಮರಿಂಡ್ ಕೋರ್ಟ್" ಎಂಬ ಸಿರಿವಂತರ ರೆಸ್ಟುರೆಂಟ್ / ಬಾರ್‌ಗೆ ಹಿಂಬಾಲಕರೊಡನೆ ನುಗ್ಗಿದ ಮನು ಶರ್ಮ ಎಂಬ ಪ್ರಭಾವಿ ಕಾಂಗ್ರೆಸ್ ರಾಜಕಾರಣಿ ವಿನೋದ್ ಶರ್ಮರ ಮಗ ಮದ್ಯವನ್ನು ಕೊಡಬೇಕೆಂದು ಬೇಡಿಕೆ ಇಟ್ಟಾಗ ಬಾರ್ ಅಟೆಂಡರ್ ಆಗಿದ್ದ ಜೆಸ್ಸಿಕಾ ಲಾಲ್ ಎಂಬ ತರುಣಿ ಸಮಯ ಮೀರಿದ್ದರಿಂದ ಕೊಡಲು ನಿರಾಕರಿಸಿದಳು. ಆಗ ಮನು ಶರ್ಮ ಪಿಸ್ತೂಲಿನಿಂದ ಗುಂಡಿಟ್ಟು ಕೊಂದನು. ಆ ಸಮಯದಲ್ಲಿ ಐದು ನೂರಕ್ಕೂ ಮಿಕ್ಕಿ ಗಣ್ಯಾತಿಗಣ್ಯರು ಹೋಟೆಲಿನಲ್ಲಿದ್ದು ಪ್ರತ್ಯಕ್ಷವಾಗಿ ಘಟನೆಯನ್ನು ಕಂಡರು. ಸಾಕ್ಷಿ ಹೇಳಲು ಯಾರೂ ಮುಂದಾಗಲಿಲ್ಲ. ಆದರೆ ಶಯನ್ ಮುನ್ಷಿ ಎಂಬ ವ್ಯಕ್ತಿ ಪ್ರತ್ಯಕ್ಷದರ್ಶಿಯಾಗಿದ್ದು ಪ್ರಮುಖ ಸಾಕ್ಷಿಯಾಗಿ ನಿಂತನು. ಪ್ರಮುಖ ಆರೋಪಿ ಮನು ಶರ್ಮ, ಆತನ ಹಿಂಬಾಲಕರು ಸೇರಿ ಒಂಬತ್ತು ಜನರನ್ನು ಬಂಧಿಸಲಾಯಿತು. ನಂತರ ಜಾಮೀನಿನ ಮೇಲೆ ಹೊರ ಬಂದು ಹೊರಗೇ ಅವರು ಕ್ರಿಯಾಶೀಲ (?) ರಾಗಿದ್ದರು; ಏಳು ವರ್ಷಗಳ ಕಾಲ ವಿಚಾರಣೆ ನಡೆಯಿತು.

ನ್ಯಾಯಾಧೀಶ ಎಸ್.ಎಲ್.ಭಯಾನಾ ಅವರು ಒಂಬತ್ತೂ ಜನರನ್ನು ಆರೋಪ ಮುಕ್ತರನ್ನಾಗಿ ಮಾಡಿದ್ದಾರೆ. ಇದು ದೇಶದಾದ್ಯಂತ ವಿವಾದವನ್ನು ಉಂಟು ಮಾಡಿರುವುದಲ್ಲದೆ ವಿಚಾರಶೀಲರಲ್ಲಿ ತಳಮಳವನ್ನು ಉಂಟು ಮಾಡಿದೆ. ಪ್ರಮುಖ ಸಾಕ್ಷಿ ಶಯನ್ ಮುನ್ಷಿ ಸಾಕ್ಷ್ಯವನ್ನು ಬದಲಿಸಿದ್ದರಿಂದ ಪೋಲೀಸರು "ನಿಸ್ಸಹಾಯಕ" ರಾದರು. ಹಣ ಮತ್ತು ಅಧಿಕಾರ ಏನು ಬೇಕಾದರೂ ಮಾಡಬಹುದು ಎಂಬ ಗೂಂಡಾ ರಾಜಕಾರಣಿಗಳ ಸಿದ್ಧಾಂತಕ್ಕೆ ಮತ್ತಷ್ಟು ಬಲ ಬಂದಿತು. ಇನ್ನು ನ್ಯಾಯವನ್ನು ನಿರೀಕ್ಷಿಸಲು ಸಾಧ್ಯವೆ? ನ್ಯಾಯ, ನೀತಿಯ ಬಗ್ಗೆ ಎಲ್ಲ ಭರವಸೆಯನ್ನು ಕಳೆದುಕೊಂಡವರಿಗೆ ಭಾರತ ದೇಶದಲ್ಲಿ ಇದ್ದ ಆಶಾ ಕಿರಣ ಒಂದೇ ಒಂದು "ನ್ಯಾಯಾಲಯ" ಅದೂ ಅಡ್ಡದಾರಿ ಹಿಡಿದರೆ ಇನ್ನು ನೀತಿ, ನ್ಯಾಯವನ್ನು ಉಳಿಸುವವರಾರು?

ಲಜ್ಜೆಗೇಡಿ ವ್ಯವಸ್ಥೆ

ಆಳುವ ಸರ್ಕಾರಗಳಿಗೆ ಅಂಥ ನ್ಯಾಯಾಧೀಶರಿಗೆ ಭಡ್ತಿ ಕೊಡಲು ಇರುವ ಆತುರ ಜನಸಾಮಾನ್ಯರಲ್ಲಿ ಎಂಥ ಜಿಗುಪ್ಸೆಗೆ ಕಾರಣವಾಗಬಹುದು ಎಂಬ ಪರಿವೆ ಸಹ ಇಲ್ಲದೆ ಕಾನೂನು ಸಚಿವರು ಜೆಸ್ಸಿಕಾಲಾಲ್ ಕೊಲೆ ಪ್ರಕರಣದ ಎಲ್ಲ ಒಂಬತ್ತು ಆರೋಪಿಗಳನ್ನು ಖುಲಾಸೆಗೊಳಿಸಿದ ನ್ಯಾಯಾಧೀಶ ಎಸ್.ಎಲ್.ಭಯಾನ್ ಅವರಿಗೆ ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಗಳನ್ನಾಗಿ ಭಡ್ತಿ ನೀಡಿದ್ದು ನಮ್ಮ ದೇಶದ ಸಾಮಾಜಿಕ, ನ್ಯಾಯಿಕ ವ್ಯವಸ್ಥೆಯ ಬಗ್ಗೆ ವಾಕರಿಕೆ ಬರುವಂತೆ ಮಾಡುತ್ತಿದೆ.

ಬಸವ ಕಲ್ಯಾಣದಲ್ಲಿ ನಾವು 3 ಎಕರೆ ಜಾಗವನ್ನು 2001ರ ಡಿಸೆಂಬರ್‌ದಲ್ಲಿ ತೆಗೆದುಕೊಂಡೆವಷ್ಟೆ, ಅಧಿಕೃತವಾಗಿ ನೋಂದಣಿ ಸಹ ಮಾಡಲಾಯಿತು. ನಾವು ಜಮೀನು ಖರೀದಿಸಿದ ವಿಚಾರ ನಂತರ ಚಿತ್ರದುರ್ಗದ ಶ್ರೀಗಳಿಗೆ ಬಸವ ಕಲ್ಯಾಣದ ಕೆಲವರ ಮೂಲಕ ತಿಳಿದು 20 ರೂ ಛಾಪಾ ಕಾಗದದ ಮೇಲೆ ಒಂದು ಫೋರ್ಜರಿ ಸಹಿ ಮಾಡಿದ ಕೊಡುಗೆ ಪತ್ರ ಸಿದ್ಧವಾಯಿತು ಅದು ಕೈಯಲ್ಲಿ ಮುಟ್ಟಲು ಸಹ ಅರ್ಹವಿರಲಿಲ್ಲ. ಅಂದು ಅಲ್ಲಿ ನ್ಯಾಯಾಧೀಶರ ಕೈ ಬೆಚ್ಚಗೆ ಮಾಡಿದ್ದರಿಂದ ಅಂಥ ಖೋಟಾ ಕಾಗದ ಗಣನೆಗೆ ತೆಗೆದುಕೊಂಡು ಆತ ಸ್ಟೇಟಸ್‌ಕೋ ಎಂಬ ಹಲ್ಲಿಲ್ಲದ ಹಾವನ್ನು ಬಿಟ್ಟು ತೊಂದರೆಗೆ ಕಾರಣರಾದರು. ಆ (ಅ) ನ್ಯಾಯಾಧೀಶ ಬಹಳ ಲಂಚಕೋರ ಎಂದು ಎಲ್ಲರೂ ಮಾತನಾಡುತ್ತಿದ್ದರು. ವಿರುದ್ಧ ಮಾತನಾಡಿದರೆ ನ್ಯಾಯಾಂಗ ನಿಂದನೆ ಎಂಬ ಅಂಕುಶ ಬೇರೆ. ಹೀಗಾಗಿ ಜನರು ಸಹಿಸಿಕೊಂಡಿದ್ದರು. ಸ್ಟೇಟಸ್‌ಕೋ ಎಂಬ ಪೇಪರ್ ಹುಲಿಯನ್ನು ತೋರಿಸುತ್ತ ಪೋಲೀಸ್ ಇಲಾಖೆ ಕೊಡಬಾರದ ಕಿರುಕುಳ ಕೊಟ್ಟಿತು. ಮೊದಲನೆ ಕಲ್ಯಾಣ ಪರ್ವದಲ್ಲಿ ತೊಂದರೆ ಕೊಟ್ಟದ್ದು ಮಾತ್ರವಲ್ಲ

ಒಂದೂ ಕೆಲಸ ಮಾಡಗೊಡದಂತೆ ಕಿರುಕುಳ ಕೊಡುತ್ತಿದ್ದರು. ಈ ಸ್ಟೇಟಸ್‌ಕೋಗೆ ಮೊದಲು ಒಂದು ತಗಡಿನ ಶೆಡ್‌ದಲ್ಲಿ ಬೆಂದು ಹೋದರೂ ಚಿಂತೆಯಲ್ಲ ಧರ್ಮಪೀಠ ಅಲ್ಲಿ ನೆಲೆ ನಿಲ್ಲಲ್ಲು ಸಿಮೆಂಟ್ ಇಡುತ್ತಿದ್ದ ಶೆಡ್ ನಮ್ಮ ವಾಸಸ್ಥಾನವಾಗಿತ್ತು.

ಈಗೊಂದು 2 ತಿಂಗಳ ಹಿಂದೆ ಪೇಪರಿನಲ್ಲಿ ಬಂದಿತ್ತು "ಕೆಲವು ನ್ಯಾಯಾಧೀಶರನ್ನು ಅನರ್ಹಗೊಳಿಸಲಾಗಿದೆ; ಅವರ ಅಸಮರ್ಪಕ (ನಮ್ಮ ದೃಷ್ಟಿಯಲ್ಲಿ ನ್ಯಾಯ ಬಾಹಿರ) ಕರ್ತವ್ಯ ನಿರ್ವಹಣೆಗಾಗಿ" ಎಂದು. ಆ ಪಟ್ಟಿಯಲ್ಲಿ ಕಾಶೀಮಠ ಅವರ ಹೆಸರು ನೋಡಿದಾಗ, "ಪರವಾಗಿಲ್ಲ ಈ ದೇಶದಲ್ಲಿ ಅಂತಸಾಕ್ಷಿ ಪೂರಾ ಸತ್ತಿಲ್ಲ; ಇನ್ನೂ ಕುಟುಕುಟು ಎಂದು ಜೀವ ಹಿಡಿದುಕೊಂಡಿದೆ." ಎಂದೆನಿಸಿತು. ಆ ವ್ಯಕ್ತಿಯ ಆದೇಶದಿಂದ ನಮಗೆ, ನಮ್ಮ ಜನರಿಗೆ ಆದ ತೊಂದರೆ ಹೇಳಲಸದಳ.

ಈಗ ಜೆಸ್ಸಿಕಾಲಾಲಳ ಹತ್ಯೆಯ ಆರೋಪಿಗಳ ಬಿಡುಗಡೆ ಮತ್ತು ಇಂಥ ವಿಶೇಷ(?) ತೀರ್ಪು ನೀಡಿದ (ಅ)ನ್ಯಾಯಮೂರ್ತಿ ಎಸ್.ಎಲ್.ಭಯಾನಾರ ಭಟ್ಟಿ ಮತ್ತೊಮ್ಮೆ ಈ ದೇಶದ ನ್ಯಾಯಾಂಗ ವ್ಯವಸ್ಥೆಯಲ್ಲಿ ಅಂತಃಸಾಕ್ಷಿ ಎಂಬುದು ಇದೆಯೆ, ಸತ್ತಿದೆಯೆ? ಎಂಬ ಪ್ರಶ್ನೆಯನ್ನು ನನ್ನ ಮನದಲ್ಲಿ ಹುಟ್ಟು ಹಾಕಿದೆ. ಏನಾದರೂ ಪುನರ್ವಿಚಾರಣೆ ನಡೆದು ತಪ್ಪಿತಸ್ಥರಿಗೆ ಶಿಕ್ಷೆಯಾದರೆ ಮಾತ್ರ, ಈ ಪುಣ್ಯ ಭೂಮಿ(?) ಭಾರತದಲ್ಲಿ ಅಂತಃಸಾಕ್ಷಿ ಇನ್ನೂ ಸತ್ತಿಲ್ಲ ಎಂದು ನಿರ್ಧರಿಸಬಹುದಾಗಿದೆ.

ಹೆಣ್ಣಿನ ಸ್ಥಾನವೇನು ?

"ಭಾರತೀಯರು ತಮಗಾಗಿ ಬದುಕರು, ಇತರರಿಗಾಗಿ ಬದುಕುವರು." ಈ ಮಾತನ್ನು ನಾನು ನಿಸ್ವಾರ್ಥ ಜೀವನದ ದೃಷ್ಟಿಯಿಂದ ಒಂದು ಆದರ್ಶವನ್ನಾಗಿ ಹೇಳುತ್ತಿಲ್ಲ; ವಿಡಂಬನಾತ್ಮಕವಾಗಿ ಹೇಳುತ್ತಿದ್ದೇನೆ. ಒಂದು ದಿವಸ ಓರ್ವ ಮಹಿಳೆ ಬಂದರು. ಬಹಳ ವರ್ಷಗಳಾಗಿದ್ದವು ಬಂದೇ ಇರಲಿಲ್ಲ. ಯಜಮಾನರು ಅನಾರೋಗ್ಯದಿಂದ ತೀರಿಕೊಂಡಿದ್ದರು. ಜೊತೆಗೆ ಮದುವೆ ಮಾಡಿಕೊಟ್ಟ ಮಗಳ ಬದುಕು ಸುಖವಾಗಲಿಲ್ಲ ಎಂಬ ಕೊರಗೂ ಸೇರಿ ಅಕಾಲ ಮೃತ್ಯುವಿಗೆ ತುತ್ತಾಗಿದ್ದರು. ಈ ನೋವನ್ನು ಅರಗಿಸಿಕೊಳ್ಳುವಷ್ಟರಲ್ಲೇ ಮತ್ತೊಂದು ಘೋರ ಸುದ್ದಿ ಬಂದಿತ್ತು. ಅದೆಂದರೆ ಗಂಡನ ಮನೆಯವರು ಮಗಳಿಗೆ ಬೆಂಕಿ ಹಚ್ಚಿ ಸುಟ್ಟಿದ್ದರು. ಯಾರೋ ಎದುರು ಮನೆಯವರು ಸುದ್ದಿ ತಿಳಿಸಿದಾಗ ತಾಯಿ ಓಡಿ ಹೋಗಿ ಇನ್ನೂ ಜೀವಂತವಿದ್ದ ಮಗಳನ್ನು ಬೆಂಗಳೂರಿನ ಆಸ್ಪತ್ರೆಗೆ ಸೇರಿಸಿದರು. 80% ದೇಹ ಸುಟ್ಟಿತ್ತು. ಮಂಚಕ್ಕೆ ಕಟ್ಟಿ ಹಾಕಿ, ತಪ್ಪಿಸಿಕೊಳ್ಳಲೂ ಆಸ್ಪದವಿಲ್ಲದಂತೆ ಮಾಡಿ ಗಂಡ, ಅತ್ತೆ ಮುಂತಾದವರು ಆ ಹುಡುಗಿಯನ್ನು ಸುಟ್ಟಿದ್ದರು. 2 ದಿನದ ಮೇಲೆ ಹುಡುಗಿ ಬದುಕಿ ಉಳಿಯಲಿಲ್ಲ ಫೋಟೋಗಳನ್ನು ಪೋಲೀಸರು ತೆಗೆಸಿದ್ದು ಆ ಹುಡುಗಿಯ ತಾಯಿ ತೋರಿಸಿದರು. ನೋಡಿ ಬೆಚ್ಚಿ ಬೀಳುವಂತೆ ಆಗಿ, ಕರುಳು ಮಿಡಿಯಿತು, ಕಣ್ಣುಗಳು ಹನಿಗೂಡಿದವು

ಈ ದೇಶದಲ್ಲಿ ಹೆಣ್ಣು ಮಕ್ಕಳ ಸ್ಥಿತಿ ಎಷ್ಟು ಶೋಚನೀಯ. ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿ ತೀರಾ ಭಯಂಕರ; ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವುದಿಲ್ಲ, ಸ್ವಾವಲಂಬನೆ ಕಲಿಸುವುದಿಲ್ಲ ಅಪಾರ ಹಣ ವ್ಯಯ ಮಾಡಿ ಮದುವೆ ಮಾಡುತ್ತಾರೆ. ಧನದಾಹಿಗಳಾದ ಗಂಡನ ಮನೆಯವರು ಎಲ್ಲ ಕಿತ್ತುಕೊಂಡು ತೌರಿಗಾದರೂ ಅಟ್ಟುತ್ತಾರೆ; ಇಲ್ಲವೇ ಕೊಲ್ಲುತ್ತಾರೆ. "ದುಡ್ಡಿದ್ದೆ ಬೀಸಾಡಿದರೆ ಆಯಿತು; ಪೋಲೀಸರು ನಿಷ್ಕ್ರಿಯರಾಗುತ್ತಾರೆ, ಸಾಕ್ಷ್ಯಾಧಾರವಿಲ್ಲದೆ ಕಾನೂನು ತಲೆ ತಗ್ಗಿಸಿ ಮೌನ ತಾಳುತ್ತದೆ." ಎಂಬ ಠೇಂಕಾರದ ಮಾತು ಆ ನರಭಕ್ಷಕರಿಂದ ಬರುತ್ತದೆ. ಆ ತಾಯಿ ಹೇಳಿದಳು, ಸಾಯುವುದಕ್ಕೆ ಒಂದು ವಾರದ ಮೊದಲು ಮಗಳು ತೌರಿಗೆ ಬಂದಿದ್ದಳಂತೆ. "ನಾನು ಗಂಡನ ಮನೆಗೆ ಹೋಗುವುದಿಲ್ಲ; ಅವರು ನನಗೆ ಬಹಳ ಹಿಂಸೆ ಕೊಡುತ್ತಾರೆ. ಎಲ್ಲಾದರೂ ಕೂಲಿ ಮಾಡಿ ಮಗಳನ್ನು ಸಾಕುತ್ತೇನೆ. ನನ್ನನ್ನು ಸಾಯಿಸಿ ಬಿಡುತ್ತಾರೆ." ಎಂದು ಅತ್ತಳಂತೆ. ಆಗ ಊರಿನ ಹಿರಿಯರು ಸೇರಿ ಪಂಚಾಯಿತಿ ಮಾಡಿ ತೌರಿನಲ್ಲಿ ಉಳಿಯಬಾರದು ಎಂದು ಬೋಧೆ ಮಾಡಿ ಒತ್ತಾಯದಿಂದ ಗಂಡನ ಮನೆಗೆ ಬಿಟ್ಟು ಬಂದರಂತೆ. ಒಂದು ವಾರದಲ್ಲಿ ಸುಟ್ಟು ಹಾಕಿ ಬಿಟ್ಟರು." ಎಂದು ತಾಯಿ ಗೋಳಾಡಿದಳು.

"ಗೊತ್ತಿದ್ದೂ ಸಹ ನೀನು ಏಕೆ ಕಳಿಸಿದೆ? ನಿನ್ನ ಮಗಳು ನಿನಗೆ ಭಾರವಾಗುತ್ತಿದ್ದಳೆ?" ಎಂದು ನಾನು ಆಕ್ಷೇಪಿಸಿದೆ. "ಯಜಮಾನರು ತೀರಿದ ಮೇಲೆ ನಾನೂ ಮನೆಯಲ್ಲಿ ಒಬ್ಬಳೇ, ಜೊತೆಗೆ ಇರುತ್ತಾಳೆ." ಎಂದು ನಾನು ಅಂದು ಕೊಂಡೆ. ಊರಿನ ಜನ ಬಿಡಲಿಲ್ಲ. ಪಂಚಾಯಿತಿ ಮಾಡಿ, ಹೋಗಿ ಬಿಟ್ಟು ಬಂದರು." ಎಂದು ಆಕೆ ನುಡಿದಳು.

ಇನ್ನೊಬ್ಬರ ಜೀವನದಲ್ಲಿ ಕೈ ಹಾಕುವುದು, ಆಡಿ ಕೊಳ್ಳುವುದು ಮುಂತಾದ ಕೀಳು ನಡತೆ ಭಾರತೀಯರಲ್ಲಿ ಬಹಳ. ಹತ್ತು ಹೆಂಡಿರನ್ನು ಸಾಲಾಗಿ ಕೊಂದರೂ ಗಂಡಸಿಗೆ ಹೆಣ್ಣು ಕೊಡುವ ತಾಯಿ ತಂದೆಯುಂಟು; ಏಕೆಂದರೆ ಹೆಣ್ಣು ಅಷ್ಟು ಅಗ್ಗವಾದ ಸರಕು. ಮದುವೆಯೊಂದೇ ಬದುಕಿನ ಪರಮ ಗುರಿ. ಮದುವೆ, ಮಕ್ಕಳು, ಒಡವೆ ಎಂಬ ಸಂಪತ್ತಿನ ಹೊರತು ಬೇರಾವ ಆದರ್ಶವನ್ನೂ ರೂಪಿಸಿಕೊಳ್ಳದಂತೆ ಮಕ್ಕಳನ್ನು ಬೆಳೆಸಲಾಗುವುದು. ಮಧ್ಯಮ ವರ್ಗದವರು ಮತ್ತು ಗ್ರಾಮೀಣ ಪ್ರದೇಶದ ಚಿಂತನೆ ಈ ದಿಕ್ಕಿನಲ್ಲಿ ಹರಿದರೆ ಆಧುನಿಕ ಭಾರತೀಯ ಮಹಿಳೆ- ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ ಬಿದ್ದವರ ಆದರ್ಶ(?)ವೇ ಬೇರೆ. ಸ್ವಚ್ಛಂದ ಜೀವನ, ಅಂಗಾಂಗ ಪ್ರದರ್ಶನ, ಮೋಜಿನ ಜೀವನದ ಸಲುವಾಗಿ ದೇಹದ ವ್ಯಾಪಾರ. ಇವರಿಗೆ ವಿವಾಹ ಮುಂತಾದ ಯಾವ ನೈತಿಕ ಚೌಕಟ್ಟೂ ಬೇಡ. ಸ್ವಾತಂತ್ರ್ಯ, ಸ್ವಾಭಿಮಾನ, ಸ್ವಾವಲಂಬನೆ ಮುಂತಾದ ಆದರ್ಶಗಳನ್ನು ಮೊದಲನೆಯ ವರ್ಗದ ಮಹಿಳೆಯರಿಗೆ, ನೈತಿಕ ಜೀವನ ಅಧ್ಯಾತ್ಮಿದ ಮೌಲ್ಯಗಳನ್ನು ಎರಡನೆಯ ವರ್ಗದ ಮಹಿಳೆಯರಿಗೆ ರೂಢಿಸಿ ಒಂದು ಸ್ವಸ್ಥ ಮತ್ತು ಸುಂದರ ಸಮಾಜವನ್ನು ರೂಪಿಸುವುದು ಇಂದು ಅತ್ಯಗತ್ಯವಾಗಿದೆ.

ಮನೆ ನೋಡಾ ಬಡವರು ಮನ ನೋಡಾ ಸಂಪನ್ನರು

ಒಂದು ದಿವಸ ಓರ್ವ ಶರಣ ದಂಪತಿಗಳು 1001 ರೂ ಕಾಣಿಕೆ ಕೊಟ್ಟಾಗ ಆಶ್ಚರ್ಯವಾಯಿತು. ತುಂಬಾ ಸಣ್ಣ ಕಾಯಕದವರು. ಶರಣ ಮೇಳಕ್ಕೆ 1001 ಕೊಟ್ಟಿದ್ದರು. ನನಗೆ ಸಂಕೋಚವೆನಿಸಿ, "ಏಕೆ ಹೀಗೆ ಕೊಡುತ್ತೀರಿ? ನಿಮ್ಮ ಅಗತ್ಯಕ್ಕೆ ಬರುತ್ತದೆ." ಎಂದು ಹೇಳಿದೆ. "ಇಲ್ಲ, ನಮಗೆ ಭಾರವೆನಿಸದ್ದು, ದಿನಾಲೂ ಕಾಯಕ ಮುಗಿದ ಮೇಲೆ ಧರ್ಮಕ್ಕಾಗಿ ಎಂದು ಹುಂಡಿಯಲ್ಲಿ 10ರೂ ಹಾಕಿಬಿಡುತ್ತೇವೆ. ಶರಣ ಮೇಳಕ್ಕೆ ಒಂದು ಸಾವಿರ, ಕಲ್ಯಾಣ ಪರ್ವಕ್ಕೆ ಒಂದು ಸಾವಿರ, ನಿಮ್ಮ ಹುಟ್ಟು ಹಬ್ಬಕ್ಕೆ ಒಂದು ಸಾವಿರ. ಆಗಾಗ ನಡೆಯುವ ಕಾರ್ಯಕ್ರಮಗಳಿಗೆ ಉಳಿದುದು. ಹೀಗಾಗಿ ನಮಗೆ ಭಾರವೆನಿಸದು" ಎಂದರು. ಕೇಳಿ ನನಗೆ ಆಶ್ಚರ್ಯ ಮತ್ತು ಆನಂದವಾಯಿತು. ಸರ್ವಜ್ಞ ಹೇಳುತ್ತಾನೆ. "ಸೊಡರಿನ ಎಣ್ಣೆ ತೀರಿದರೆ ಕೊಡದಿಂದ ಹಾಕುವುದಿಲ್ಲ; ಚಿಕ್ಕ ಚಮಚೆಯಿಂದ ಸ್ವಲ್ಪ ಸ್ವಲ್ಪ ಹಾಕುತ್ತಾರೆ. ಹಾಗೆ ಬಡವ ಎಂದು ದಾನ ಧರ್ಮ ಮಾಡದೆ ಇರಬೇಡ. ಕೈಲಾದಷ್ಟು ಮಾಡುತ್ತಿರಬೇಕು." ಈ ಶರಣ ದಂಪತಿಗಳಂತೆ ಎಲ್ಲರೂ ಅವರವರ ಶಕ್ತ್ಯಾನುಸಾರ ದಾಸೋಹ ನಿಧಿಯ ಹುಂಡಿ ಮಾಡಿ, ದಿನಾಲೂ ಹಾಕುತ್ತಾ ಹೋದರೆ ಎಷ್ಟು ಬೇಗನೆ ಧರ್ಮ ಪ್ರಚಾರ ಆಗಬಹುದಲ್ಲವೆ?

ಮಾರ್ಚ್ - ಏಪ್ರಿಲ್ ತಿಂಗಳ ಹಬ್ಬಗಳು

1. ಅಲ್ಲಮ ಪ್ರಭು ಜಯಂತಿ	ಮಾರ್ಚ್ 30
2. ಅಕ್ಕಮಹಾದೇವಿ ಜಯಂತಿ	ಏಪ್ರಿಲ್ 13
3. ಬಸವ ಜಯಂತಿ	ಏಪ್ರಿಲ್ 30

3. ಮಾಂಸಾಹಾರ ಪಾಪಮಯ

ಈ ತಿಂಗಳು ಪೂರ್ತಿ ಕೋಳಿಗಳ ಮಾರಣ ಹೋಮದ ಸುದ್ದಿ. ಅತ್ಯಂತ ನಿರ್ದಯವಾಗಿ ಕೋಳಿಗಳನ್ನು ಲಕ್ಷಾಂತರ ಸಂಖ್ಯೆಯಲ್ಲಿ ನಾಶಪಡಿಸಲಾಯಿತು. ಸೃಷ್ಟಿಕರ್ತನಾದ ಪರಮಾತ್ಮನು ಮಾನವನು ಬದುಕಲು ಬೇಕಾದ ತರಕಾರಿ, ಹಣ್ಣು, ಗೆಡ್ಡೆ ಗೆಣಸು, ಸೊಪ್ಪು ಇತ್ಯಾದಿ ಕೊಟ್ಟಿದ್ದರೂ ಮನಷ್ಯನ ನಿರ್ದಯ ಸ್ವಭಾವ ಮತ್ತು ನಾಲಿಗೆಯ ಚಪಲ ಬದುಕಲು ಇಚ್ಛಿಸುವ ಅನೇಕ ಪ್ರಾಣಿಗಳ ಜೀವಿಸುವ ಹಕ್ಕನ್ನು ಕಿತ್ತುಕೊಂಡು ಅವುಗಳನ್ನು ಕೊಂದು ತಿನ್ನುವನು. ಮಾಂಸಾಹಾರ ಅನಾರೋಗ್ಯಕರ. ಭೂಮಿಯ ಮೇಲಿನ ಕೆಲವೊಂದು ಜನರಿಗೆ ಸಸ್ಯಾಹಾರದ ವಿಧಾನ ಸಹ ತಿಳಿದಿರದ ಕಾಲವೊಂದಿತ್ತು. ಕೆಲವು ಪ್ರದೇಶಗಳಲ್ಲಿ ಗಿಡ ಮರಗಳು ಬೆಳೆಯದಂತಹ ವಾತಾವರಣ. ಹೀಗಾಗಿ ಮಾಂಸಾಹಾರವು ಒಂದು ಅನಿವಾರ್ಯ ಅಗತ್ಯವಾಗಿ ಬಂದಿತು. ಭಾರತ ದೇಶದಲ್ಲಿ ಹತ್ತು ಸಾವಿರ ವರ್ಷಗಳಿಗೂ ಪೂರ್ವದಲ್ಲಿ ಆಗಿ ಹೋದ ಯೋಗಿರಾಜ ಶಿವನ ಕಾಲದಿಂದಲೂ ಸಸ್ಯಾಹಾರ ಪದ್ಧತಿ, ಯೋಗ-ಧ್ಯಾನ ಮುಂತಾದುವು ಬೆಳೆದು ಬಂದವು.

ಆರೋಗ್ಯ ದೃಷ್ಟಿಯಿಂದಲೂ ಸಸ್ಯಾಹಾರ ಅತ್ಯುತ್ತಮ ಎಂಬ ಭಾವನೆ ಸಾರ್ವತ್ರಿಕವಾಗುತ್ತ ಅಮೇರಿಕಾ, ಇಂಗ್ಲೆಂಡ್‌ದಂತಹ ದೇಶಗಳಲ್ಲಿ ಸಹ ಸಸ್ಯಾಹಾರ ಜನಪ್ರಿಯವಾಗುತ್ತಿದೆ. ಭಾರತ ದೇಶದಲ್ಲಿ ಪಾಶ್ಚಿಮಾತ್ಯರ ಪ್ರಭಾವದಿಂದ ಮತ್ತು ಆಧುನಿಕತೆಯ ಸೋಗಿನಲ್ಲಿ ಮಾಂಸಾಹಾರಕ್ಕೆ ವ್ಯಾಪಕ ಪ್ರಚಾರ ಕೊಡಲಾಗುತ್ತಿದೆ.

ಬಹುರಾಷ್ಟ್ರೀಯ ಕಂಪೆನಿಗಳ ಮೋಸದಾಟವೇ ಇರಲಿ ಏನೇ ಇರಲಿ ಕೋಳಿ ಜ್ವರ ಬಂತೆಂದು ಲಕ್ಷಾಂತರ ಕೋಳಿಗಳನ್ನು ಸಾಯಿಸುವ, ಸುಡುವ ಭಯಂಕರ ಕ್ರೌರ್ಯವನ್ನು ಕಾಣುತ್ತಿದ್ದೇವೆ. ಲಾಭದಾಸೆಗಾಗಿ ಅವನ್ನು ಸಾಕುವುದು ನಂತರ ಕೊಲ್ಲುವುದು ಮೊದಲೇ ಪಾಪಕಾರ್ಯ. ಕೋಳಿ ಸಾಕಾಣಿಕೆಯೇ ಅತ್ಯಂತ ಪಾಪಮಯ ವೃತ್ತಿ. ಕೆಲವು ಲಿಂಗಾಯತರು ಸಹ ತಮ್ಮ ಧಾರ್ಮಿಕ ಚೌಕಟ್ಟು ಮೀರಿ ಇಂಥ ಪಾಪಮಯ ಉದ್ಯಮಕ್ಕೆ ತೊಡಗಿಸಿಕೊಳ್ಳುತ್ತಾರೆ. ಕೊಂದ ಕೊಲೆಯ ಪಾಪ ಎಂದಿಗೂ ಬೆನ್ನು ಬಿಡದು. ಹಣದ ಆಸೆಗಾಗಿ ನಿತ್ಯವೂ ಜೀವ ಹಿಂಸೆ ಮಾಡುವ ಕೋಳಿ ಫಾರಂದಿಂದ ಅಷ್ಟಿಷ್ಟು ಲಾಭಗಳಿಸಬಹುದಾದರೂ ಭವಿಷ್ಯದಲ್ಲಿ ಅವರ ಮಕ್ಕಳು ಮರಿ ಆ ಪಾಪದ ಫಲವನ್ನು ಅನುಭವಿಸಲೇ ಬೇಕು. ಧರ್ಮಪಿತರು ಹೇಳುವಂತೆ,

1. "ಕುರಿ ಸತ್ತು ಕಾವುದೆ ಹರ ಮುಳಿದವರ ?"
2. ಮಾತಿನ ಮಾತಿಂಗೆ ನಿನ್ನ ಕೊಂದಿಹರೆಂದು
   ಎಲೆ ಹೋತೆ ಅಳು ಕಂಡೆಯ
   ವೇದವನೋದುವವರ ಮುಂದೆ ಅಳು ಕಂಡೆಯಾ!
   ಶಾಸ್ತ್ರವ ಕೇಳುವವರ ಮುಂದೆ ಅಳು ಕಂಡೆಯಾ!
   ನೀನತ್ತುದಕ್ಕೆ ತಕ್ಕುದ ಮಾಡುವ ನಮ್ಮ ಕೂಡಲ ಸಂಗಮದೇವ

[ಈ ವಚನವನ್ನು ಬಾಲ್ಯದಲ್ಲಿ ಅಜ ಯಜ್ಞವನ್ನು ನೋಡಿ ಸಂಕಟ ಅನುಭವಿಸಿ, ಧರ್ಮಪಿತರು ಬರೆದಿದ್ದಾರೆ.]

ಒಬ್ಬರು ಒಂದು ಗಂಡು ಮಗು ಬೇಕು ಎಂದು ದತ್ತು ಕೇಳಿದ್ದರು. ಅವರ ತಂದೆ ಮಾತ್ರ ಇಷ್ಟಲಿಂಗಧಾರಿಯಾಗಿ ಶರಣರಾಗಿದಾರೆ. ಕಟ್ಟುನಿಟ್ಟಾಗಿ ಲಿಂಗಾಯತ ಧರ್ಮವನ್ನು, ಸಸ್ಯಾಹಾರವನ್ನು ಪಾಲಿಸುತ್ತಾರೆ. ಅವರ ಮಗಳಿಗೆ ಮಗು ಬೇಕಿತ್ತು. ಆದರೆ ಆಕೆ, ಅವರ ತಾಯಿ ಮುಂತಾದವರು ಅವರ ಜಾತಿ ಸಂಸ್ಕಾರಕ್ಕೆ ಅನುಗುಣವಾಗಿ ಇನ್ನೂ ಮಾಂಸಾಹಾರಿಗಳೇ. ಒಬ್ಬ ಮುದುಕಿ ತನ್ನ ಮೊಮ್ಮಗನನ್ನು ಕರೆದುಕೊಂಡು ಬಂದು " ಇದರ ತಾಯಿ ಬೇರೊಬ್ಬನ ಸಂಗಡ ಹೋಗಿಬಿಟ್ಟಿದ್ದಾಳೆ. ತಂದೆ ಬೇರೆ ಮದುವೆಯಾಗಿದ್ದಾನೆ. ನಾನು ಸಾಕಲಾರೆ ಮುಪ್ಪಾಗಿದ್ದೇನೆ. ಈ ಮಗುವನ್ನು ಯಾರಿಗಾದರೂ ದತ್ತು ಕೊಡಬಹುದು." ಎಂದು ಒಂದು ಗಂಡು ಮಗುವನ್ನು ತಂದು ಕೊಟ್ಟಳು. ಈಗಾಗಲೇ ಮೇಲೆ ತಿಳಿಸಿದ

ವ್ಯಕ್ತಿ ಬೇಡಿಕೆ ಇಟ್ಟಿದ್ದರು. ಆದರೆ ನನ್ನ ಮನಸ್ಸಿನಲ್ಲಿ ಹೊಯ್ದಾಟ ಶುರುವಾಯಿತು. ಲಿಂಗಾಯತರ ಮನೆಯಲ್ಲಿ ಹುಟ್ಟಿದ ಒಂದು ಮಗುವನ್ನು ಮಾಂಸಾಹಾರಿಗಳಿಗೆ ಕೊಟ್ಟಾಗ ಅದೇ ಆಹಾರ ಪದ್ಧತಿ ರೂಢಿಸಿಕೊಳ್ಳುವನು. ಒಬ್ಬ ಮಾಂಸಾಹಾರಿ ತನ್ನ ಜೀವಮಾನದಲ್ಲಿ ಎಷ್ಟು ಜೀವಿಗಳ ಹತ್ಯೆಗೆ ಕಾರಣ ಕರ್ತೃವಾಗುವನು. ಇವನು ಹೋಗಿ ಕೊಲ್ಲದಿದ್ದರೂ ಇವನು ತಿನ್ನುವ ಕಾರಣ ಬೇರೊಬ್ಬನು ಕೊಂದು ಮಾಂಸವನ್ನು ಒದಗಿಸುವನು. ನಾನಾಗಿಯೇ ಒಬ್ಬ ವ್ಯಕ್ತಿಯನ್ನು (ಮಾಂಸಾಹಾರಿಗಳಿಗೆ ದತ್ತು ಕೊಟ್ಟು) ಜೀವ ಹತ್ಯೆಗೆ ಪರೋಕ್ಷವಾಗಿ ಪ್ರೋತ್ಸಾಹಿಸಿ, ಪಾಪಕ್ಕೆ ಗುರಿಯಾಗಬಹುದೆ?

ಎಷ್ಟೋ ಸಲ ಅವರು ಯಾವುದಾದರೂ ಮಗು ಸಿಕ್ಕಿತೆ? ಎಂದಾಗ ಇನ್ನೂ ಇಲ್ಲ ಎಂದು ಸುಳ್ಳನ್ನು ಹೇಳುತ್ತಿದ್ದೆ. ಕಡೆಗೆ ಒಂದು ದಿವಸ ನಿರ್ಧಾರ ಮಾಡಿ ಮಗುವನ್ನು ಕರೆದೊಯ್ದು ಹೇಳಿದೆ, "ನೋಡಮ್ಮ, ಓರ್ವ ಲಿಂಗಾಯತರ ಮನೆಯಲ್ಲಿ ಹುಟ್ಟಿರುವ ಮಗು. ನೀವು ಮಾಂಸಾಹಾರಿಗಳು. ನೀನು ಅದನ್ನು ಬಿಡುತ್ತೇನೆಂದರೆ ಮಾತ್ರ ಮಗುವನ್ನು ಕೊಡುತ್ತೇನೆ. ಇಲ್ಲದಿದ್ದರೆ. ಕೊಡುವುದಿಲ್ಲ." ಎಂದಾಗ ಆಕೆಯ ತಂದೆಯೂ ಹೇಳಿದರು, ನಾನು ದೀಕ್ಷೆ ಪಡೆದು ಶರಣ ಮಾರ್ಗದಲ್ಲಿದ್ದೇನೆ. ಎಂದಿನಿಂದಲೂ ನಿಮಗೂ ಹೇಳುತ್ತಿದ್ದೇನೆ. ಈಗಲಾದರೂ ನಿರ್ಧಾರ ಮಾಡು." ಎಂದರು. ಆಗಲಿ ಎಂದು ಮಾತುಕೊಟ್ಟು ಮಗುವನ್ನು ಪಡೆದು ಸಾಕುತ್ತಿದ್ದಾಳೆ. ನಮಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವುದು ಅವರ ಕೈಲಿದೆ, ಆಳವಾಗಿ ಆಲೋಚಿಸಿದಾಗ ನಿಜಕ್ಕೂ ಮಾಂಸಾಹಾರ ಬಹಳ ಪಾಪಮಯ ಎನ್ನಿಸದೆ ಇರದು.

ಜನರನ್ನು ಧರ್ಮ ಭ್ರಷ್ಟ ಮಾಡುವ ಸರ್ಕಾರಗಳು

ಅಧಿಕಾರ ಒಂದು ಮತ್ತೇರಿಸುವ ವಸ್ತು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಂತೆ ವ್ಯಕ್ತಿಯ ವಿವೇಚನೆ ಕೆಡಿಸುವ ಸ್ಥಾನ. "ಇನ್ನೂ ತಲೆಯ ಮೇಲಿನ ಮಾಸ ಆರಿಲ್ಲ" ಎಂಬಂತೆ ಈಗ ತಾನೆ ಬಿ.ಜೆ.ಪಿ ಸಂಮಿಶ್ರ ಸರ್ಕಾರದಲ್ಲಿ ಪಾಲ್ಗೊಂಡಿದೆ. ಪ್ರಸ್ತುತ ಸರ್ಕಾರದಲ್ಲಿ ಪಶು ಸಂಗೋಪನಾ ಸಚಿವರಾಗಿರುವ ಡಾ॥ವಿ.ಎಸ್.ಆಚಾರ್ಯ ಅವರು ಕೋಳಿ ಸಾಕಾಣಿಕೆದಾರರ ಸಮಾವೇಶ ಉದ್ಘಾಟಿಸಿ ಮಾತನಾಡುತ್ತ (ದಿ.1-3-2006 ಪ್ರಜಾವಾಣಿ) " ಅಂಗನವಾಡಿ ಮತ್ತು ಪೂರ್ವ ಪ್ರಾಥಮಿಕ ಶಿಕ್ಷಣ ಕೇಂದ್ರಗಳಲ್ಲಿ ಮಕ್ಕಳಿಗೆ ಕೋಳಿ ಮೊಟ್ಟೆಯನ್ನು ಉಚಿತವಾಗಿ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆ." ಎಂದು ಹೇಳಿದ್ದಾರೆ. ಕೋಳಿ ಜ್ವರದ ಸುದ್ದಿ ಹರಡಿ, ಕುಸಿಯುತ್ತಿರುವ ಕೋಳಿ ಉದ್ಯಮಕ್ಕೆ ನೆರವಾಗಲು ಬಹುಶಃ ಈ ಯೋಜನೆ ಇರಬಹುದು.

ಕರ್ನಾಟಕ ರಾಜ್ಯದಲ್ಲಿ ಸಸ್ಯಾಹಾರಿ ಜೀವನ ಪದ್ಧತಿಯನ್ನು ಲಿಂಗಾಯತರು ಜೈನರು, ವೈಶ್ಯರು, ಹೆಚ್ಚಿನ ಬ್ರಾಹ್ಮಣರು ಸಾಂಪ್ರದಾಯಿಕವಾಗಿ, ಇನ್ನು ಕೆಲವು ಜಾತಿ ಜನಾಂಗಗಳವರು ಅಧ್ಯಾತ್ಮಿಕ ದೃಷ್ಟಿಯಿಂದ ಐಚ್ಛಿಕವಾಗಿ ಅಳವಡಿಸಿಕೊಂಡಿದ್ದಾರೆ. ಶ್ರೀಮಂತರು ಖಾಸಗಿ ಶಾಲೆಗಳಿಗೆ ಕಳಿಸುತ್ತಾರೆ. ಬಡವರು ಸರ್ಕಾರಿ ಅಂಗನವಾಡಿ ಮತ್ತು ಪೂರ್ವ ಪ್ರಾಥಮಿಕ ಶಾಲೆಗೇ ಕಳಿಸುತಾರೆ ಅಂದಾಗ ಕೋಳಿಮೊಟ್ಟೆ ತಿನ್ನಿಸಿ ಅವರವರ ಧರ್ಮಾಚರಣೆ ಕೆಡಿಸುವ ಸ್ವಾತಂತ್ರ್ಯ ಮಂತ್ರಿಗಳಿಗೆ ಕೊಟ್ಟವರು ಯಾರು ?

ಕುಕ್ಕುಟೋದ್ಯಮವನ್ನು ರಕ್ಷಿಸಲು ಎಲ್ಲರಿಗೂ ಮೊಟ್ಟೆ ತಿನ್ನಿಸುವ ಮತ್ಸ್ಯೋದ್ಯಮ ಕುಸಿಯುತ್ತದೆ ಎಂದು ಎಲ್ಲರಿಗೂ ಮೀನು ತಿನ್ನಿಸುವ ಮಾಂಸೋದ್ಯಮ ಕುಸಿಯುತ್ತದೆ ಎಂದು ಮಾಂಸ ತಿನ್ನಿಸುವ ಸರ್ಕಾರಗಳು ಮದ್ಯೋದ್ಯಮದವರನ್ನು ಶ್ರೀಮಂತರನ್ನು ಮಾಡಲು ಬಹಳ ಶಾಲೆಗಳಲ್ಲಿ ಉಚಿತವಾಗಿ ಮದ್ಯವಿತರಿಸುವ ಕಾಲವು ದೂರವಿಲ್ಲ ಎಂದು ಭಾವಿಸಬಹುದೇನೊ ?

ಜನರು ಮೂಕ ಪ್ರೇಕ್ಷಕರಾಗಿ ಕುಳಿತುಕೊಳ್ಳುವುದಕ್ಕಿಂತ ಸರ್ಕಾರದ ಇಂಥ ಅವಿವೇಕದ ನಿರ್ಧಾರಗಳನ್ನು ಪ್ರತಿಭಟಿಸಬೇಕು. ಹಿಂದೊಮ್ಮೆ ಎಸ್.ಬಂಗಾರಪ್ಪನವರು ಇದೇ ರೀತಿಯ ಹೇಳಿಕೆ ಕೊಟ್ಟಿದ್ದರು. ಆಗ ಪ್ರತಿಭಟಿಸಿದಾಗ ಮೊಟ್ಟೆ ತಿನ್ನಿಸುವ ಆಲೋಚನೆ ಕೈಬಿಟ್ಟರು. ಈಗ ಡಾ॥ವಿ.ಎಸ್.ಆಚಾರ್ಯ ಮತ್ತು ಸರ್ಕಾರ ಕೋಳಿ ಮೊಟ್ಟೆಯನ್ನು ತಿನ್ನಿಸುವ ಆಲೋಚನೆ ಕೈಬಿಡದೆ ಇದ್ದರೆ ಎಲ್ಲ ಧಾರ್ಮಿಕ ಸಂಘಟನೆಗಳು ಸರ್ಕಾರದ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳುವ ನಿರ್ಧಾರ ಮಾಡಬೇಕೆಂದು ನಮ್ಮ ಆಶಯ.

-ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.

ಓಂ ಶ್ರೀ ಗುರು ಬಸವಲಿಂಗಾಯ ನಮಃ

866666



ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ
ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಐದನೆಯ

ಕಲ್ಯಾಣ ಪರ್ವ

2006 ರ ಮೇ 6, 7 ಮತ್ತು 8 ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 19ನೆಯ ಶರಣ ಮೇಳವು ಇದೇ ತಾನೆ 2006ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. "ಕಾಯಕವೇ ಕೈಲಾಸ" ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ "ಕಲ್ಯಾಣ ಪರ್ವ"ವನ್ನು ನಡೆಸಲಾಗುತ್ತಿದೆ. ನಾಲ್ಕನೆಯ ಕಲ್ಯಾಣ ಪರ್ವವನ್ನು 2005ನೆಯ ಇಸವಿಯ ಮೇ 1,2 ಮತ್ತು 3 ರಂದು ನಡೆಸಲಾಯಿತು. 2006ನೆಯ ಇಸವಿಯ ಬಸವ ಜಯಂತಿಯು ಏಪ್ರಿಲ್ 30 ರಂದು

ಜಯಂತಿ ಆಚರಿಸಿ, ಬಸವಕಲ್ಯಾಣಕ್ಕೆ ಮೇ 1ರಂದು ಬರಲು ಜನರಿಗೆ ಸಾಧ್ಯವಾಗದೆ ಇರುವುದರಿಂದ 5 ನೆಯ ಕಲ್ಯಾಣ ಪರ್ವವನ್ನು 2006 ರ ಮೇ 6,7 ಮತ್ತು 8ರಂದು ಏರ್ಪಡಿಸಲಾಗುತ್ತಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. "ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು" ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಮೇ 5 ರ ರಾತ್ರಿಯಿಂದ ಮೇ 9 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ)ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು : 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು : 500 ರೂ
5. ಸ್ವಾಗತ ಸಮಿತಿ ಸದಸ್ಯತ್ವ : 250 ರೂ
6. ಪ್ರತಿನಿಧಿ ಶುಲ್ಕ : 100 ರೂ.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು(F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ. ಶರಣ ಬಂಧುಗಳೇ, ನಿಮ್ಮ ಗಳಿಕೆಯ ಒಂದು ಪಾಲನ್ನು ಗುರು-ಲಿಂಗ-ಜಂಗಮದ ದಾಸೋಹಕ್ಕೆ ಸಲ್ಲಿಸುವುದು ನಿಮ್ಮ ಆದ್ಯ ಕರ್ತವ್ಯವೆಂದು ತಿಳಿದು ಉದಾರವಾಗಿ ಕಾಣಿಕೆ ಸಲ್ಲಿಸಿರಿ. ಬಸವ ಧರ್ಮ ಪೀಠದ ಧ್ಯೇಯೋದ್ದೇಶ ಪೂರೈಕೆಗೆ ನೀವು ಸಲ್ಲಿಸುವ ಕಾಣಿಕೆಯನ್ನು ಕೆಳಗಿನ ಮೂರು ವಿಳಾಸಗಳಲ್ಲಿ ಯಾವ ವಿಳಾಸಕ್ಕೂ ಕಳಿಸಬಹುದು.

ಸಂಪರ್ಕಿಸುವ ವಿಳಾಸಗಳು

ಬೆಂಗಳೂರು ವಿಳಾಸ :
ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎: 080-23325335/23322790

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎: 08481-251921/252856



ಚರಂತಿ ಮಠರಿಗೆ ಒಂದು ಪತ್ರ

ಆತ್ಮೀಯ ಸಿ.ವಿ.ಚರಂತಿಮಠ್ ಅಧ್ಯಕ್ಷರು ಮತ್ತು ಮಂಡಳಿಯ ಸರ್ವಸದಸ್ಯರು / ಸಾಮಾನ್ಯ ಸದಸ್ಯರು,
ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲ ಕೋಟೆ ಇವರ ಸನ್ನಿಧಿಗೆ.

ವಿಷಯ : ಪ್ರಜಾವಾಣಿ - ಸೋಮವಾರ - 16ನೇ ಜನವರಿ ಪುಟ - 4 ರ ವರದಿ-ಬಸವೇಶ್ವರ ವಿದ್ಯಾವರ್ಧಕ ಸಂಘದ ಹೆಸರಲ್ಲಿ ವೀರಶೈವ ಸೇರಿಸುವ ಕುರಿತು ಆಡಳಿತ ಮಂಡಳಿ ನಿರ್ಣಯ ಕೈ ಬಿಡುವ ಕುರಿತು ವಿನಂತಿ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸುವುದೇನೆಂದರೆ ಪ್ರಸ್ತಾವಿತ ನಿರ್ಣಯವನ್ನು ಕೈ ಬಿಡಬೇಕು. ಇದು ಸಂಘ ಸಂಸ್ಥಾಪಕ ಲಿಂಗೈಕ್ಯ ಬೀಳೂರು ಶ್ರೀಗಳ ಆತ್ಮಕ್ಕೆ ಹಾಗೂ ಸಮಸ್ತ ಧರ್ಮಾವಲಂಬಿಗಳ ಮನಸ್ಸಿಗೆ ಆಘಾತ ತರುತ್ತಿದೆ. ಮುಂದುವರಿದು ಪ್ರಾಜ್ಞರಾದ ತಮಗೆ ತಿಳಿದಿರ ಬಹುದಾದ ವಿಷಯಗಳ ಬಗ್ಗೆ ತಮ್ಮ ಗಮನ ಸೆಳೆದು ನಿಮ್ಮ ನಿರ್ಣಯ ಏಕೆ ತಪ್ಪು ಎಂದು ಹೇಳ ಬಯಸುತ್ತೇನೆ.

1.ಅಖಿಲ ಭಾರತೀಯ ವೀರಶೈವ ಮಹಾಸಭೆಯವರು ಪ್ರತ್ಯೇಕ ಧರ್ಮದ ಕಾಲಂಅನ್ನು ಕೇಂದ್ರ ಸರ್ಕಾರದ ಜನಗಣತಿ ಕಮಿಶನರ್ ಅವರನ್ನು ಪ್ರತಿವಾದಿಯನ್ನಾಗಿ ಮಾಡಿದ್ದ ಕೇಸು ವೀರಶೈವದ ವಿರುದ್ಧ ನೀಡಿ ಕೇಸನ್ನು ವಜಾಗೊಳಿಸಲಾಗಿದೆ. ಏಕೆಂದರೆ ಅದು ಜಾತಿ-ಮಾತ್ರ.

2.ವೀರಶೈವವು ಪೌರಾಣಿಕ ಕಾಲದಲ್ಲಿ ನಮ್ಮ ಪೂರ್ವಜ ಭೂಮಿಯ ಸಮಸ್ತಕ್ಕೆಲ್ಲಾ ಚಕ್ರವರ್ತಿಯಾಗಿದ್ದ ಯೋಗಿರಾಜ ಶಿವನ ಸಾರ್ವಭೌಮತೆಯನ್ನು ಪ್ರಶ್ನಿಸಿದ. ಆರ್ಯರಿಗೆ ಶಿವಗಣಾಧಿಪತಿಯಾದ ವೀರಭದ್ರನು ದಾಕ್ಷಾಯಣಿ ದಕ್ಷ ಬ್ರಹ್ಮನ ಮಗಳ ಅಗ್ನಿ ಪ್ರವೇಶದ ನಂತರ ಅವಿಧೇಯತೆಯನ್ನು ಪ್ರದರ್ಶಿಸಿದ ಎಲ್ಲಾ ಆರ್ಯಗಣಗಳಿಗೆ ಎಚ್ಚರಿಕೆಯ ಸಂಕೇತವಾಗಿ ಶಿಕ್ಷಿಸಿದ ಪ್ರತೀಕವಾಗಿ ಹೋರಾಡಿದ ಒಂದು ಜನಾಂಗ ಮಾತ್ರ. ಈ ಜನಾಂಗವೂ ಸಹಿತ 12ನೇ ಶತಮಾನದಲ್ಲಿ ಎಲ್ಲಾ ಜನಾಂಗಗಳಂತೆ ಅಂದರೆ ಬ್ರಾಹ್ಮಣರು ಹಾಗೂ ಚತುರ್ವರ್ಣದ ಅನುಯಾಯಿಗಳು ಹಾಗೂ ಶೂದ್ರರೆಂದು ಪರಿಗಣಿಸಲ್ಪಟ್ಟ ಹಾಲುಮತದ ಗೌಡರು, ರೆಡ್ಡಿಗಳು, ಸಾದರು, ನೊಳಂಬರು, ಲಾಳಗೊಂಡರು, ಆದಿ ಬಣಜಿಗರು, ಕುಡುವಕ್ಕಲಿಗರು, ಹಂಡೆ ಕುರುಬರು, ಪಂಚಮ ಶಾಲಿಗಳು ಹಾಗೂ ದಲಿತರು ಹಾಗೂ ಜೈನ ಧರ್ಮದಿಂದ ಬಂದ ಬಣಜಿಗರು...... .... ಇತ್ಯಾದಿ ಮತ/ಧರ್ಮದಿಂದ ಲಿಂಗದೀಕ್ಷೆ ತೆಗೆದುಕೊಂಡು ಲಿಂಗಾಯತಕ್ಕೆ ಸೇರ್ಪಡೆಯಾದರು, ಇಂದಿಗೂ ಮಾಂಸಾಹಾರಿಗಳಾದ ಇಷ್ಟಲಿಂಗದ ಪರಿಕಲ್ಪನೆಯೇ ಇಲ್ಲದ ವೀರಶೈವ ಜಾತಿ/ ಪಂಗಡವೆಂದು ಗುರುತಿಸಿ ಅವರಿಗೆ ಕೆಲವು ರಾಜ್ಯದಲ್ಲಿ ಸರ್ಕಾರ ಮೀಸಲಾತಿ ನೀಡಿದೆ. ಅವರು ತಮ್ಮನ್ನು ಮಾಲ, ಬುಡುಗ, ಬೇಡ-ಜಂಗಮರೆಂದು ಕರೆದುಕೊಂಡು ಮೀಸಲಾತಿ ಪಡೆಯುತ್ತಿದ್ದಾರೆ.

"ಲಿಂಗಯಂತ" ಧರ್ಮದ ಅನುಯಾಯಿಗಳೆಂದು ಬ್ರಿಟೀಷ್ ಸರ್ಕಾರದಿಂದ 1881ರಲ್ಲಿ ಜಾತಿವಾರು ಜನಗಣತಿ ಮಾಡಿದಾಗ ದಾಖಲಾದ 137 ಜಾತಿಗಳಲ್ಲಿ ಜಂಗಮ ಹಾಗೂ ವೀರಶೈವ ಕೇವಲ 2 ಜಾತಿ ಮಾತ್ರ. ಅಂದರೆ ಇವರು ಒಟ್ಟು ಲಿಂಗಯತ ಜಾತಿಗಳ (2/137) ಭಾಗ ಮಾತ್ರ. ಇದರಿಂದ ಉಳಿದ ಲಿಂಗವಂತ ಜಾತಿಗಳನ್ನು ಅವಮಾನಿಸಿದಂತೆಯೇ ಸರಿ. ಮೇಲೆ ಹೇಳಿದ, ಲಿಂಗವಂತರೆಂದು ಭಾವಿಸಲಾದ ಈ ಎಲ್ಲಾ ಜಾತಿಗಳು ಜಂಗಮ ದೀಕ್ಷೆ ತೆಗೆದುಕೊಂಡು, ಚರಜಂಗಮರಾಗಿ, ನಾಡಿನಾದ್ಯಂತ ಇರುವ ಚರಜಂಗಮ ಸಂಕೇತದಂತೆ ನಡೆದುಕೊಂಡು ಲಿಂ ॥ ಬೀಳೂರು ಶ್ರೀಗಳ ಆತ್ಮಕ್ಕೆ ನೋವು ನೀಡದಂತೆ ವರ್ತಿಸುವಿರೆಂದು ಭಾವಿಸಿದ್ದೇನೆ. ನೀವು, ಆಡಳಿತ ಮಂಡಳಿ "ವೀರಶೈವ"ದ ಹೊರತುಪಡಿಸಿ.ಲಿಂಗಾಯತ ಪದ ಸೇರಿಸಿದರೆ ಸಕಲ ಜಾತಿಗಳಿಗೂ, ಕೇವಲ ಬಸವೇಶ್ವರ ಉಳಿಸಿಕೊಂಡರೆ ಮಾನವ ಜನಾಂಗಕ್ಕೆಲ್ಲವೂ ತೃಪ್ತಿಯಾಗುತ್ತದೆ. ತಂದೆಯಾಗುವವರೆಲ್ಲರೂ ಗಂಡಸರಾದರೂ ಚಂದದ ಗಂಡಸೊಬ್ಬನನ್ನು ಕೇವಲ ಚಂದಕ್ಕಾಗಿಯೆ ತಂದೆ ಎನ್ನಲಾಗದು. ಏಕೆಂದರೆ ವೀರಶೈವ ಎನ್ನುವ ಪದವು ಕೃತ್ರಿಮವೆಂದು ಮಹಾನ್ ವಿದ್ವಾಂಸರ ತರ್ಕವಾಗಿದೆ. ಅದರಂತೆ ವೀರಶೈವ ಮಹಾಸಭೆ ಈಗಾಗಲೇ ಸುಪ್ರೀಂಕೋರ್ಟಿನಲ್ಲಿ ವಿಫಲವಾಗಿದೆ. ಇದರಲ್ಲಿರುವ ಪ್ರತಿ ಅಕ್ಷರವನ್ನು ಸಮರ್ಥಿಸಿಕೊಳ್ಳುವ ದಾಖಲೆ ನನ್ನಲ್ಲಿವೆ. ಬಸವೇಶ್ವರ ವಿದ್ಯಾವರ್ಧಕ ಸಂಘವು ಮೇಲೆ ಹೇಳಿದ ಎಲ್ಲಾ ಲಿಂಗಾಯತ -ಗೌಡರು, ರೆಡ್ಡಿಗಳು, ಆದಿ ಬಣಜಿಗರು ಲಾಳಗೊಂಡರು....... ಇತ್ಯಾದಿಗಳಾದಿಯಾಗಿ ಎಲ್ಲಾ 137 ಜಾತಿಗಳಿಗೆ ಸೇರಿದ್ದೋ, ಕೇವಲ ಎರಡೇ ಜಾತಿಗಳಿಗೆ ಸೇರಿದ್ದೊ; ಇಲ್ಲವೇ -ಇಡೀ ಮಾನವ ಜನಾಂಗಕ್ಕೆ ಸೇರಿದ್ದೊ? ಆಯ್ಕೆ ನಿಮ್ಮ ಸದಸ್ಯರೆಲ್ಲರದು. ಫಲ ಮಾತ್ರ ನೀವೇ ಉಣ್ಣಬೇಕಾಗಬಹುದು.

- ಎಂ.ಆರ್.ಪಂಪನಗೌಡ, ಬಳ್ಳಾರಿ

☹ ಸಮಸ್ಯೆ..? - ಸಮಾಧಾನ..! ☺

☐ ಚಂದ್ರಕಲಾ, ಊರ ಹೆಸರು ಬೇಡ

?. ಆಪತ್ತಿಗೆ ಆದವನೇ ನೆಂಟ ಎಂಬ ಗಾದೆಯಿದೆ. ಆದರೆ ನಮ್ಮ ಅನುಭವದ ಪ್ರಕಾರ ನೆಂಟರಿಂದಲೇ ನಮಗೆ ನೋವು ದುಃಖ ಬಹಳ. ಕೆಲವರು ಜಗತ್ತಿನ ಕಣ್ಣಲ್ಲಿ ಶರಣರಂತೆ ತೋರುತ್ತಾರೆ. ಆದರೆ ಹತ್ತಿರದಿಂದ ಅವರ ನಡೆ-ನುಡಿ ಬಲ್ಲ ನಮಗೆ ತಿರಸ್ಕಾರ ಮೂಡುತ್ತದೆ. ತಾತರ ಮಾಡಿದರೆ ಜನರ ದೃಷ್ಟಿಯಲ್ಲಿ ನಾವು ಕೆಟ್ಟವರಾಗುತ್ತೇವೆ. ಇಂಥ ವಿಲಕ್ಷಣ ಸನ್ನಿವೇಶದಲ್ಲಿ ನಮ್ಮ ವರ್ತನೆ ಹೇಗಿರಬೇಕು?

★. ನನಗೂ ಹಲವು ವೇಳೆ ಈ ಸಂದಿಗ್ಧತೆ ಕಾಡುತ್ತದೆ. ಧರ್ಮಪಿತರು ಹೇಳುತ್ತಾರೆ. "ಶರಣರು ಶರಣರಲ್ಲಿ ಗುಣವನರಸುವರೆ?" "ಲಿಂಗದೇವನ ಶರಣರು ನೊಂದು ಸೈರಿಸಬೇಕು." ಮಾನವರಲ್ಲಿರುವ ದೌರ್ಬಲ್ಯಗಳು ಅವರನ್ನು ಮೇಲೇರಲು ಬಿಡುವುದೇ ಇಲ್ಲ. ಅಂಥ ಸನ್ನಿವೇಶದಲ್ಲಿ ಅವರ ದೌರ್ಬಲ್ಯವನ್ನು ನಾವು ಉದಾಸೀನ ಮಾಡಬೇಕು. ಉದಾಹರಣೆಗೆ ಒಬ್ಬರಲ್ಲಿ ಕಳ್ಳತನದ ಅಭ್ಯಾಸ ಇರುತ್ತದೆ ಎಂದುಕೊಳ್ಳೋಣ. ಎದುರಿಗೇ ಆಡುವುದರಿಂದ ಅವರೇನೂ ತಿದ್ದಿಕೊಳ್ಳುವುದಿಲ್ಲ; ನಿಮ್ಮಿಂದ ದೂರವಾಗುತ್ತಾರೆ. ಅದರ ಬದಲು ಅವರು ಕದಿಯಲು ಅವಕಾಶ ಸಿಗದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಕೆಲವೊಮ್ಮೆ ನೋವಾದರೂ ಒಳಗೇ ನುಂಗಿಕೊಂಡು ಸೈರಿಸಿಕೊಳ್ಳಬೇಕು. ಈ ಜಗತ್ತು ಇರೋದೇ ಹೀಗೆ ಎಂದು ಅರ್ಥ ಮಾಡಿಕೊಳ್ಳಬೇಕು. ಆಗ ಹೆಚ್ಚು ಆಘಾತವಾಗುವುದಿಲ್ಲ.

☐ ಜಗನ್ನಾಥಪ್ಪ ಪನಸಾಲೆ, ಗುಲಬರ್ಗಾ

? ಬೆಂಗಳೂರಿನ ಬಸವ ಸಮಿತಿಯವರು 2006ರ ದಿನಚರಿ ಪ್ರಕಟಿಸಿದ್ದಾರೆ. ಮಾರ್ಚ್ 1 ರ ದಿನದ ಪುಟದ ನಂತರ ಬರುವ ಶರಣರ ಪರಿಚಯದಲ್ಲಿ "ಹೆದರಿದ ಶರಣರು ಜೀವ ಭಯದಿಂದ ಚನ್ನಬಸವಣ್ಣ ಹಾಗೂ ಮಡಿವಾಳ ಮಾಚಿದೇವರ ನೇತೃತ್ವದಲ್ಲಿ ಉಳವಿಯ ಕಡೆ ನಡೆದರು." ಎಂದಿದೆ. ಈ ಬಗ್ಗೆ ತಮ್ಮ ಅಭಿಪ್ರಾಯವೇನು?

★ ಬಸವ ಸಮಿತಿಯವರ ಉದ್ದೇಶವೇ ನಮಗೆ ಸ್ಪಷ್ಟವಾಗುತ್ತಿಲ್ಲ ಅವರೇನು ಓದಿ ಪ್ರಕಟಿಸುವರೋ, ಯಾರಾದರೂ ತಮ್ಮ ಪಾಡಿಗೆ ತಾವು ಮುಖ್ಯಸ್ಥರ ಗಮನಕ್ಕೆ ತರದೆ ಪ್ರಕಟಿಸುವರೋ, ಅಥವಾ ಅಂತರಂಗದಲ್ಲಿ ಶರಣರ ಬಗ್ಗೆ ಅಸಹನೆ ಇದೆಯೊ? ಹಿಂದೆ ಶರಣರಿಗೆ ಅವಮಾನ ಮಾಡುವ ಡಾ॥.ಪಿ.ವಿ.ನಾರಾಯಣರ ವಚನ-ನಿರ್ವಚನ ಪುಸ್ತಕಕ್ಕೆ ಪ್ರಶಸ್ತಿ ಕೊಟ್ಟಿದ್ದರು. ಈ ಬಗ್ಗೆ ಕನ್ನಡ ಪ್ರಭಾದ ಓದುಗರ ಓಲೆಯಲ್ಲಿ ಪ್ರಕಟವಾದ ಒಬ್ಬರ ಅಭಿಪ್ರಾಯ ನೋಡಿ ತಕ್ಷಣ ಲಿಂ॥ ಶರಣ.ಬಿ.ಡಿ ಜತ್ತಿಯವರಿಗೆ ಫೋನ್ ಮಾಡಿ, ಪ್ರಶಸ್ತಿ ವಿತರಣೆ ನಿಲ್ಲಿಸಿ, ಪುಸ್ತಕ ತರಿಸಿ ಓದಿ, 18 ಪುಟದ ವಿಮರ್ಶೆ ಬರೆದು ಕಳಿಸಿದಾಗ, ಶರಣ ಸಿದ್ದಯ್ಯ ಪುರಾಣಿಕರು ಫೋನ್ ಮಾಡಿ, "ದೊಡ್ಡ ಉಪಕಾರ ಮಾಡಿದಿರಿ. ಪ್ರಶಸ್ತಿಗೆ ಕೃತಿ ಆಯ್ಕೆ ಮಾಡಿದವರಲ್ಲಿ ನಾನೂ ಒಬ್ಬ; ಪುಸ್ತಕವನ್ನು ಓದಿಯೇ ಇರಲಿಲ್ಲ." ಎಂದಾಗ ನನಗೆ ದಿಗ್ಭ್ರಾಂತಿ.

ಶರಣರು ಹೇಡಿಗಳಲ್ಲ, ಹೆದರುವವರಲ್ಲ, ಜೀವಗಳ್ಳರಲ್ಲ. ಅವರಿಗೆ ತಮ್ಮ ಪ್ರಾಣ ರಕ್ಷಣೆಗಿಂತಲೂ ವಚನ ಸಾಹಿತ್ಯದ ರಕ್ಷಣೆ ಮುಖ್ಯವಾಗಿತ್ತು. ಚಾಲುಕ್ಯರ ಗಡಿಯಿಂದ ಹೊರಗಿದ್ದ ಸಹ್ಯಾದ್ರಿಯ ದುರ್ಗಮ ಅರಣ್ಯದಲ್ಲಿ ವಚನ ಸಾಹಿತ್ಯವನ್ನು ಸಂರಕ್ಷಿಸಲು ಕಾಡು ಮೇಡುಗಳನ್ನು ಅಲೆದರು. ಬಯಲು ಸೀಮೆಯವರಾದ ಆ ಶರಣರು ಅರಣ್ಯದಲ್ಲಿ ಗಿಡಗಳ ಮೇಲೆ ತೊಟ್ಟಿಲು ಕಟ್ಟಿಕೊಂಡು, ಗುಡ್ಡಗಳ ಗವಿಗಳಲ್ಲಿ ಎಂತಹ ಪಾಡುಪಟ್ಟಿರಬಹುದು ಎಂದು ನೆನಪಿಸಿಕೊಂಡು ನಾನು ಕಣ್ಣೀರು ಹಾಕದ ದಿನವೇ ಇಲ್ಲ. ಅಂತಹ ತ್ಯಾಗಿಗಳ ಮನಸ್ಸಿನ ಸ್ಥಿತಿ ಅರಿಯದೆ ಬರೆಯುವ, ಪ್ರಕಟಿಸುವ ಈ ನೇತಾರರನ್ನು ಅಭಿಮಾನ ಶೂನ್ಯರು, ಕೃತಘ್ನರು ಎಂದರೂ ಸಹ ನನ್ನ ನೋವು ಶಮನಗೊಳ್ಳುವುದಿಲ್ಲ. ಶರಣರ ನಿಂದೆಗೆ ಈಗ ಹೊರಗಿನ ಪಂಚಾಚಾರ್ಯರು ಬೇಕಾಗಿಲ್ಲ. ಈ ಆಂತರಿಕ ಆಚಾರ್ಯ ಪುರುಷರೇ ಸಾಕು.

ಕೃಷ್ಣಪ್ಪ ಭರಮಪ್ಪ ಮುಸಳೆ, ಗಡಹಿಂಗ್ಲಾಜ್, ಮಹಾರಾಷ್ಟ್ರ

? ಶರಣ ಮೇಳದಲ್ಲಿ ತಮ್ಮ ಭಾಷಣದಲ್ಲಿ ವಿರಕ್ತ ಮಠಾಧೀಶರನ್ನು ಕಟುವಾಗಿ ಟೀಕಿಸಿದಿರೆಂದು, ಅವರು ಬಸವಣ್ಣನವರ ತತ್ತ್ವದ ಪಥದಲ್ಲಿ ನಡೆಯುತ್ತಿದ್ದರೂ ಹೀಗೆ ಟೀಕಿಸಿದ್ದು ಸೂಕ್ತವಲ್ಲವೆಂದು ಆಕ್ಷೇಪಿಸಿ, ಓರ್ವ ವಿರಕ್ತ ಮಠಾಧೀಶರು ನನಗೆ ಫೋನ್ ಮಾಡಿದ್ದರು. ಇದು ನಿಜವೆ?

★ ನಾವು ಯಾರನ್ನೂ ವೈಯಕ್ತಿಕವಾಗಿ ಟೀಕಿಸಿಲ್ಲ. ಜಂಗಮನ ಮಾನವೀಯ ಗುಣಗಳು ಹೇಗಿರಬೇಕು ಎಂಬ ಬಗ್ಗೆ ಸಿದ್ಧರಾಮೇಶ್ವರರ ವಚನವೊಂದನ್ನು ವ್ಯಾಖ್ಯಾನಿಸುವಾಗ ಭಕ್ತನು ಕಷ್ಟ, ತಾಪತ್ರಯದಲ್ಲಿರುವಾಗ ಜಂಗಮನು ಸಹಾನುಭೂತಿಯಿಂದ ಅವನ ಕಷ್ಟಕ್ಕೆ ಮರುಗಬೇಕು. ಕಷ್ಟ ನಿವಾರಣೆಗೆ "ಪೂಜಾ ಮುಖದಿಂದ ವಿಭೂತಿಯನ್ನು ಕೊಡಬೇಕು." ಎಂದು ಸೂಚಿಸುತ್ತಾರೆ. ಭಕ್ತರಿಗೆ ಆಶೀರ್ವಾದ ಮಾಡುವಾಗ ಅಷ್ಟಾವರಣಗಳಲ್ಲಿ ಬರುವ, ಇಷ್ಟಲಿಂಗ, ವಿಭೂತಿ, ರುದ್ರಾಕ್ಷಿ, ಮಂತ್ರ ಇವುಗಳನ್ನು ಆಶೀರ್ವದಿಸಿ ಕೊಡಬೇಕೇ ವಿನಾ ಅಷ್ಟಾವರಣಕ್ಕೆ ಹೊರತಾದ ಕರಿದಾರ, ತಾಯಿತ, ನಿಂಬೆಹಣ್ಣು, ತೆಂಗಿನಕಾಯಿ ಮುಂತಾಗಿ ಮಂತ್ರಿಸಿ ಕೊಡುವುದನ್ನು ಮಾಡಬಾರದು. ಕೆಲವು ವಿರಕ್ತರೇ ಕರಿದಾರ, ತಾಯಿತ ಮಂತ್ರಿಸಿ ಕಟ್ಟುವುದನ್ನು ಮಾಡುತ್ತಾರೆ ಎಂದು ಹೇಳಿದೆ. ಇದರಲ್ಲಿ ತಪ್ಪೇನು? ಆ ರೀತಿ (ನಿಮಗೆ ಫೋನ್ ಮಾಡಿದ) ಸ್ವಾಮಿಗಳು ಮಾಡದಿದ್ದರೆ ಅವರಿಗೆ ನನ್ನ ಮಾತು ಅನ್ವಯಿಸದು. ಕಳ್ಳನ ಜೀವ ಹುಳ್ಳ ಹುಳ್ಳಗೆ ಎಂಬಂತೆ ಅವರು ಏಕೆ ವರ್ತಿಸಬೇಕು?

ವೀರೇಶ ತಿಮ್ಮಪ್ಪಯ್ಯನಹಳ್ಳಿ, ಬೆಂಗಳೂರು

? ಹಿರೇಕೆರೂರಿನಲ್ಲಿ ತರಳಬಾಳು ಹುಣ್ಣಿಮೆ ನಡೆದಾಗ ಚಿತ್ರದುರ್ಗದ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರನ್ನು ಜ್ಯೋತಿಯನ್ನು ಹಚ್ಚಿ ಉದ್ಘಾಟಿಸಲು ಕರೆದಾಗ ತಾವು ಜ್ಯೋತಿ ಹಚ್ಚುವುದಿಲ್ಲವೆಂದು, ಸಸಿ ನೆಡುವ ಪದ್ಧತಿ ಇಟ್ಟುಕೊಂಡಿರುವುದಾಗಿಯೂ ಹೇಳಿದರಂತೆ. ಈ ಬಗ್ಗೆ ತಮ್ಮ ಅಭಿಪ್ರಾಯ?

★ ಜ್ಯೋತಿ ಜ್ಞಾನದ ಸಂಕೇತ; "ಕಲ್ಯಾಣವೆಂಬ ಪ್ರಣತೆಯಲ್ಲಿ ಎಂಬ ವಚನದಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು" ಎಂದೇ ಹೇಳಲಾಗಿದೆ. ಆದ್ದರಿಂದ ಜ್ಯೋತಿಯ ಉದ್ದೀಪನೆ ಬಸವ ಪಥಕ್ಕೆ ವಿರುದ್ಧವಲ್ಲ ವೇದಿಕೆಗಳ ಮೇಲೆ ಸಸಿ ನೆಡಲು ಬರುವುದಿಲ್ಲ. ತಿನ್ನಲು ಉಪಯೋಗಿಸುವ ತುಪ್ಪ ಮುಂತಾದುವನ್ನು ಬಳಸದೆ ಹರಳೆಣ್ಣೆ, ಹೊಂಗೆ ಎಣ್ಣೆಯ ದೀಪ ಉರಿಸುವುದು ಬಸವ ತತ್ತ್ವಕ್ಕೆ ಸಮ್ಮತವೆ. ಧರ್ಮಪಿತರೇ ಹೇಳಿದ್ದಾರೆ, "ಜ್ಯೋತಿಯ ಬಲದಿಂದ ತಮಂಧದ ಕೇಡು." ಎಂದು. ಇಷ್ಟ ಲಿಂಗಪೂಜೆಯ ಜೀವಾಳವಾದ ತ್ರಾಟಕ ಯೋಗಕ್ಕಂತೂ ಜ್ಯೋತಿಯು ಅತ್ಯವಶ್ಯಕ.

ನಾಗಶೆಟ್ಟಿ ಶೆಟಕಾರ, ಬೀದರ್

? ನಾನು ಎಂ.ಫಿಲ್ ಮಾಡುತ್ತಿದ್ದು ಅನೇಕರನ್ನು ಈ ಬಗ್ಗೆ ಭೇಟಿ ಮಾಡಿ ಚರ್ಚಿಸುತ್ತೇನೆ. ಚಿತ್ರದುರ್ಗದ ಶ್ರೀಗಳ ಜೊತೆ ಚರ್ಚಿಸುವಾಗ ಅವರು Supreme Soul ದೇವರನ್ನು ಒಪ್ಪುವುದಿಲ್ಲವಾಗಿ ಹೇಳಿದರು. ಇದು ಬಸವ ತತ್ತ್ವಕ್ಕೆ ವಿರೋಧಾಭಾಸವಲ್ಲವೆ?

★ ಅವರ ಆಲೋಚನೆ ನೋಡಿದಾಗ ಬಹಳ ಎಡವಟ್ಟು, ಅಪರಿಪಕ್ವ ಎನಿಸುತ್ತದೆ; ಚಿಂತನೆಯಲ್ಲಿ ಒಂದು ಕ್ರಮ ಬದ್ಧತೆಯೇ ಇಲ್ಲ. ಲಿಂಗಾಯತ ಧರ್ಮ, ಬಸವ ಧರ್ಮ ನಿಂತಿರುವುದೇ ಲಿಂಗ ತತ್ತ್ವದ ಮೇಲೆ. ಆ ಮೂಲ ಚೈತನ್ಯವೇ ಜಗತ್ತು ಮತ್ತು ಜೀವಾತ್ಮರ ಮೂಲ, ಮತ್ತು ಗಮ್ಯ (ಗುರಿ) ವೂ ಸಹ ಅದುವೆ. ವಚನ ವಾಙ್ಮಯದ ಸಾರವೇ ಲಿಂಗ-ಸೃಷ್ಟಿಕರ್ತನಾದ ಲಿಂಗದೇವನಲ್ಲಿ ಅಂಗ-ಜೀವಾತ್ಮವು ಒಡವೆರೆದು ಒಂದಾಗುವುದು-ಲಿಂಗಾಂಗ ಸಾಮರಸ್ಯ. ಅದಕ್ಕಾಗಿಯೇ ಇಷ್ಟಲಿಂಗದ ಅರ್ಚನೆ ಮತ್ತು ಅನುಸಂಧಾನ; ಮತ್ತೆ ಇವರು ಸಹಜ ಶಿವಯೋಗವೆಂದು ತ್ರಾಟಕ ಹೇಳಿಕೊಡುತ್ತಾರಲ್ಲ; ದೇವರನ್ನೇ ಒಪ್ಪದ ಮೇಲೆ ತ್ರಾಟಕ ಯೋಗವಾದರೂ ಏಕೆ? ಶ್ರೀಗಳ ಚಿಂತನೆಯಲ್ಲಿ ಸ್ಪಷ್ಟತೆ-ಸುಸಂಬದ್ಧತೆ (Clarity ಮತ್ತು Consistency) ಎರಡೂ ಇಲ್ಲ.

ಮಲ್ಲಿಕಾರ್ಜುನ ನಾಗಶೆಟ್ಟಿ, ಮುದನೂರು, ತಾ-ಹುಮನಾಬಾದ್, ಜಿ-ಬೀದರ್

ಪ್ರ.1? ಈ ಧರ್ಮದ ಮೂಲ ತತ್ತ್ವಗಳನ್ನೇ ಕೆಲವರು ವಿರೋಧಿಸುತ್ತಾರೆ. ನಮ್ಮ ಎಲ್ಲ ಜನರು ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಒಮ್ಮತದಿಂದ ಆಚರಣೆಗೆ ತೊಡುಗುವುದು ಯಾವಾಗ?

★ ಇದು ನನಸಾಗದ ಕನಸು. ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಅಪ್ಪಾಜಿಯವರು ಮತ್ತು ನಾವು ಈ ದೃಷ್ಟಿಯಲ್ಲಿ ಸಾಕಷ್ಟು ಚಿಂತನೆ, ಪ್ರಯತ್ನ ಮಾಡಿ, ಈಗ ಕೈಬಿಟ್ಟಿದ್ದೇವೆ. ಹಿಂದೊಮ್ಮೆ ಡಾ|| ಡಿ.ಸಿ.ಪಾವಟೆಯವರ ನೇತೃತ್ವದಲ್ಲಿ ಶಿವಯೋಗ ಮಂದಿರದಲ್ಲಿ ವೀರಶೈವ ಮಹಾಸಭಾ ಅಧಿವೇಶನ ನಡೆದಾಗ ಪೂಜ್ಯ ಅಪ್ಪಾಜಿ, "ಗುರು-ವಿರಕ್ತರು ಲಿಂಗಾಯತ ಸಮಾಜದ ಎರಡು ಕಣ್ಣುಗಳಂತೆ. ಎರಡೂ ಬೇಕು." ಎಂದು ಭಾಷಣ ಮಾಡಿದ್ದರಂತೆ. ಪಂಚ ಪೀಠಾಧೀಶರು, ಅವರ ಚಿಂತನೆ ಸಮಾಜಕ್ಕೆ ಕಣ್ಣಲ್ಲ ಹುಣ್ಣು ಎಂದು ನಾನು ಹೇಳುತ್ತೇನೆ. ಪಂಚ ಪೀಠಾಧೀಶರು ಅತ್ತಲಿರಲಿ ಕಡೆಯ ಪಕ್ಷ ವಿರಕ್ತ ಮಠಾಧೀಶರಾದರೂ ಬಸವ ಪಥದಲ್ಲಿ ಏಕನಿಷ್ಠೆ ಹೊಂದಿದರೆ ಸಾಕು ಎಂದು ಪೂಜ್ಯ ಗುರುಗಳು, ನಾವು ಶರಣ ಮೇಳ ವೇದಿಕೆಯ ಮೂಲಕ ಎಲ್ಲ ಸ್ವಾಮಿಗಳನ್ನು, ಶರಣ ಮೇಳದ ಮೂಲಕ ಎಲ್ಲ ಉಪ ಪಂಗಡಗಳವರನ್ನು ಸೇರಿಸುವ ಚಿಂತನೆ ಹೊಂದಿ ಆಹ್ವಾನಿಸಿದೆವು. ಮಠದ ಬಾಗಿಲಿಗೇ ಹೋಗಿ ಕರೆದರೂ ಮೊದಲ ಶರಣ ಮೇಳಕ್ಕೆ ಕೆಲವರು ಬರಲಿಲ್ಲ; ಕೆಲವರು ವಿರೋಧಿಸಿದರು, ಕೆಲವರು ಬಂದರು. ಬಂದವರಲ್ಲಿ ಕೆಲವರು ಶರಣ ಮೇಳದ ಯಶಸ್ಸು ನೋಡಿ ಸಂಕಟಪಟ್ಟು ಮರು ವರ್ಷದಿಂದ ಅದೇ ಸಮಯಕ್ಕೆ ಪ್ರತಿಸ್ಪರ್ಧಿಯಾದ ಕಾರ್ಯಕ್ರಮ ರೂಪಿಸಿಕೊಂಡರು. ಕ್ಷುಲ್ಲಕ ಕಾರಣ, ನೆಪ ಹುಡುಕಿ ದೂರ ಸರಿದರು. ಸಮಾಜವನ್ನು ಕಟ್ಟುವ ಬಗ್ಗೆ ಗಂಭೀರ ಚಿಂತನೆ ಅಗತ್ಯವಿದೆ.. ಸ್ವಪ್ರತಿಷ್ಠೆಯೇ ಮುಖ್ಯವಾಗಿ ಕೆಲವರಿಗೆ ಸಾಮೂಹಿಕ ಚಿಂತನೆಯಲ್ಲಿ, ಸಮಾಜದ ಅಖಂಡತೆಯಲ್ಲಿ ಆಸಕ್ತಿ ಇಲ್ಲ.

ಈಗ ಉಳಿದುದು ಒಂದೇ ದಾರಿ ಶರಣ ಮೇಳ, ಕಲ್ಯಾಣ ಪರ್ವಗಳ ಮೂಲಕ ಜನರನ್ನು ಬರಮಾಡಿಕೊಂಡು ಅವರನ್ನು ಜಾಗೃತಗೊಳಿಸಿ, ಅವರ ಮುಖಾಂತರ ಸಮಾಜ ಕಟ್ಟುವುದು.

ಪ್ರ.2? ಲಿಂಗಾಯತ ಧರ್ಮದ ಸಂಘಟನೆ ಹಾಗೂ ಪುನರುತ್ಥಾನದ ದೃಷ್ಟಿಯಿಂದ ಲಿಂಗದೇವ ಪದ ಮತ್ತು ಧರ್ಮಗುರು ಬಸವಣ್ಣನವರ ವಚನಾಂಕಿತ ಬದಲಾವಣೆ ಕುರಿತು ಅತಿ ಅವಶ್ಯ ಎಂಬುದೀಗ ನಮಗೆ ಮನವರಿಕೆಯಾಗಿದೆ. ವಿರೋಧಿಗಳು ಸಹ ಒಪ್ಪಿಕೊಳ್ಳುವಂತೆ ಅಧಿಕೃತ ಆಧಾರಗಳೇನಾದರೂ ನಿಮಗೆ ಸಿಕ್ಕಿವೆಯೆ?

★ ಅಂಗೈ ಹುಣ್ಣಿಗೆ ಕನ್ನಡಿ ಏಕೆ? ಲಿಂಗಾಯತ ಧರ್ಮದ ಧ್ಯೇಯವೇ ಲಿಂಗದೇವ; ಅವರ ಸಾಕಾರವಾಗಿದೆ ಅಂಗದ ಮೇಲೆ ಧರಿಸುವ ಇಷ್ಟಲಿಂಗದೇವ. ಬಾಲ್ಯದಲ್ಲಿ ಕೂಡಲ ಸಂಗಮನಾಥ ಎಂಬ ಸ್ಥಾವರ ಲಿಂಗದ ಅರ್ಚಕರಾಗಿದ್ದ ಬಸವಣ್ಣನವರು ಸೃಷ್ಟಿಕರ್ತನ ಸಾಕ್ಷಾತ್ಕಾರ ಹೊಂದಿದ ಮೇಲೆ ತ್ರಿಮೂರ್ತಿಗಳಿಗೂ ಮೀರಿದ ದೇವನನ್ನು ಆರಾಧಿಸಲು ಹೇಳಿ, ಅರ್ಚನೆಗಾಗಿ ಇಷ್ಟಲಿಂಗವನ್ನು ಕೊಟ್ಟು ಲಿಂಗಾಯತ ಧರ್ಮ ಸ್ಥಾಪಕರಾದರು. ಈ ಬದಲಾವಣೆ ಅತ್ಯಂತ ಸ್ಪಷ್ಟವಾಗಿದೆ. ಮೊದ ಮೊದಲು ಅರ್ಥವಾಗಿರಲಿಕ್ಕಿಲ್ಲ. ಈಗ ಸಾಕಷ್ಟು ವಿವರಿಸಿಯಾಗಿದೆ. ಇನ್ನೂ ವಿರೋಧ ಮಾಡುತ್ತಾರೆಂದರೆ ಅವರು ಅರಿತುಕೊಳ್ಳುವ ಬೌದ್ಧಿಕ ಸಾಮರ್ಥ್ಯವಿಲ್ಲದವರು ಅಥವಾ ಬೌದ್ಧಿಕ ಪ್ರಾಮಾಣಿಕತೆ ಇಲ್ಲದವರು ಎಂದು ನಿರ್ಣಯಿಸಬೇಕಾಗುತ್ತದೆ! ಇಲ್ಲವೇ ನಮ್ಮನ್ನು ವಿರೋಧಿಸುವುದೊಂದೇ ಅವರ ಪರಮ ಧ್ಯೇಯ ಎಂದು ನಿರ್ಧರಿಸಬೇಕಾಗುತ್ತದೆ. ಕೆಲವರು ಸಂಪ್ರದಾಯ ನಿಷ್ಠ ಭಕ್ತರಿರುತ್ತಾರೆ. ಅಂಥವರು ಚಿತ್ರದುರ್ಗ ಶ್ರೀಗಳಂತಹವರು ಪ್ರಳಯಾಂತಕ ವಿಚಾರ ಬೋಧಿಸಿದರೂ ತುಟಿ ಪಿಟಕ್ಕೆನ್ನದೆ ಕುಳಿತಿರುತ್ತಾರೆ. ನಾವು ಅತ್ಯಂತ ವಿಧಾಯಕವಾಗಿ ಸಮಾಜದ ಹಿತದೃಷ್ಟಿಯಿಂದ ಸುಧಾರಣೆ ತಂದರೂ ವಿರೋಧಿಸುತ್ತಾರೆ. ಇಂತಹ ವಿರೋಧಿಗಳನ್ನೆಲ್ಲ ಮನವೊಲಿಸಲು ಯಾವ ಆಧಾರ ನೀಡಿದರೂ ಸಾಧ್ಯವಿಲ್ಲ. ಬೌದ್ಧಿಕ ಪ್ರಾಮಾಣಿಕತೆ ಇರುವ ಸಮಾನ ಮನಸ್ಕರ ಸಂಖ್ಯೆ ಬೆಳೆಸುವುದೊಂದೇ ಉಳಿದಿರುವ ಮಾರ್ಗ.

☐ ಕಲ್ಯಾಣ ಕುಮಾರ್, ಗುಲಬರ್ಗಾ

? 2005ನೆಯ ಇಸವಿಯ ಡಿಸೆಂಬರ್ ತಿಂಗಳಿನ ಅರಿವು-ಆಚಾರ ಎಂಬ ಗುಲಬರ್ಗಾದಿಂದ ಹೊರಡುವ ಮಾಸಪತ್ರಿಕೆಯಲ್ಲಿ ಸಂಪಾದಕರಾದ ಬಿ.ಮಹಾದೇವಪ್ಪನವರು "ಕನ್ನಡಕ್ಕೊಂದು ಧರ್ಮವಿದೆ; ಅದೇ ವೀರಶೈವ ಧರ್ಮ" ಎಂದಿದ್ದಾರೆ. ಈ ಮಾತು ಸರಿಯೆ ?

★ ಊರ ಸೀರೆಗೆ ಅಗಸ ತಡೆಬಡೆಗೊಂಡಂತೆ ಎಂಬಂತೆ ಬಿ.ಮಹಾದೇವಪ್ಪನವರು ಮತ್ತವರ ಪೋಷಕರಾದ ವಿಶ್ವನಾಥ ರೆಡ್ಡಿ ಮುದ್ನಾಳರು ವೀರಶೈವ ಪದದ ಬಗ್ಗೆ ಸಂಭ್ರಮಿಸುತ್ತಾರೆ. ಪಾಪ, ಅದನ್ನು ಕನ್ನಡದ ಧರ್ಮವೆಂದು ಇವರು ಘೋಷಿಸುತ್ತಾರೆ. ಆದರೆ ಅದು ಸಂಸ್ಕೃತ ಭಾಷೆಯಲ್ಲಿ ಪ್ರತಿಪಾದಿತವಾಗಿರುವ ಮತವೆಂದು ಅದರ ಜನಕರಾದ ಪಂಚಪೀಠಾಧೀಶರು ಆಧಾರ ಗ್ರಂಥಗಳಾಸ್ನಾಗಿ ಕೆಲವು ಆಗಮಗಳನ್ನು ಘೋಷಿಸಿ ಶ್ರೀಕರ ಭಾಷ್ಯ, ಸಿದ್ಧಾಂತ ಶಿಖಾಮಣಿಗಳನ್ನು ಎತ್ತಿ ತೋರುತ್ತಾರೆ. ಇದು ಕರ್ನಾಟಕದ ಶಿವಾಚಾರ್ಯರು ಮತ್ತು ಆಂಧ್ರದ ವೀರಶೈವರ ಘೋಷಣೆಯಾದರೆ, ತಮಿಳು ನಾಡಿನ ವೀರಶೈವರು ತಿರು ವಾಚಕಮ್ ವೀರಶೈವದ ಆಧಾರ ಎನ್ನುತ್ತಾರೆ. ಕೇರಳ ವೀರಶೈವರಿಗಂತೂ ಸಂಸ್ಕೃತ ಗ್ರಂಥವೂ ಇಲ್ಲ ತಮಿಳು ಗ್ರಂಥವೂ ಇಲ್ಲದೆ ಅನಾಥರಾಗಿದ್ದಾರೆ. ಹೀಗೆ ವೀರಶೈವಕ್ಕೆ ಹೆತ್ತ ತಾಯಿ (ಶಾಸ್ತ್ರ ಗ್ರಂಥ) ಇಲ್ಲದ್ದರಿಂದ ಕರ್ನಾಟಕದ ವಚನ ಸಾಹಿತ್ಯವನ್ನು ಸಾಕು ತಾಯಿಯನ್ನಾಗಿ ಮಾಡುವ ತಂತ್ರ ಇವರದು. ವೀರಶೈವ ಮತದ ಕಾಗೆಯನ್ನು ವಚನ ಸಾಹಿತ್ಯ ಪ್ರತಿಪಾದಿತ ಲಿಂಗಾಯತ ಧರ್ಮದ ನವಿಲನ್ನು ಮಾಡಲು ಇವರೆಲ್ಲ ವಿಶ್ವಾಮಿತ್ರ ಸೃಷ್ಟಿ ಮಾಡ ಹೊರಟಿದ್ದಾರೆ.

☐ ವೀರೇಶ ಕುಮಾರ್. ತಿಮ್ಮಪ್ಪಯ್ಯನಹಳ್ಳಿ

? ಬಸವ ಧರ್ಮಕ್ಕೆ ಅನುಗುಣವಾಗಿ ಸಾಂಪ್ರದಾಯಿಕ ಆಚರಣೆಗಳಲ್ಲಿ ಬಹಳ ಬದಲಾವಣೆ ತಂದಿದ್ದೀರಿ, ಅಭಿನಂದನೀಯ. ಸಾಮಾನ್ಯವಾಗಿ ಗೌರಿ ಹಬ್ಬಕ್ಕೆ ಮನೆಯ ಹೆಣ್ಣು ಮಕ್ಕಳಿಗೆ ಅಕ್ಕ ತಂಗಿಯರಿಗೆ ಏನಾದರೂ ಉಡುಗೊರೆ ಕಳಿಸುವುದು ರೂಢಿಗೊಂಡ ಆಚರಣೆ; ಹಾಗೆ ನಾವು ಕಳಿಸಬಹುದಾದರೆ ಎಂದು ಮತ್ತು ಏನನ್ನು?

★ ಬಹಳ ಒಳ್ಳೆಯ ಪ್ರಶ್ನೆ. ಹೆಣ್ಣು ಮಕ್ಕಳಿಗೆ ಅಣ್ಣ-ತಮ್ಮಂದಿರ, ತೌರಿನ ಕೊಡುಗೆ ಎಂದರೆ ಬಹಳ ಅಕ್ಕರೆ. ಅದು ಒಂದು ರೀತಿ ಮಾನಸಿಕ ಆಸರೆಯನ್ನು ನೀಡುತ್ತದೆ. "ಲಿಂಗಾಯತ ಸಮಾಜದ ಮನೆಯ ಹೆಣ್ಣುಮಗಳು" ಅಕ್ಕಮಹಾದೇವಿ, ಅಪ್ಪ ಬಸವಣ್ಣನ ಮೋಹದ ಮಗಳು, ಅವ್ವ ನೀಲಮ್ಮನ ಸುಚಿತ್ತದ ಪುತ್ಥಳಿ. ಆದ್ದರಿಂದ ಅಂಥ ಉಡುಗೊರೆಯನ್ನು ಸಹೋದರಿಯರಿಗೆ ಚೈತ್ರ ಶುದ್ಧ ಹುಣ್ಣಿಮೆ ಅಕ್ಕಮಹಾದೇವಿಯ ಜಯಂತಿಯ ನಿಮಿತ್ತ ಕಳಿಸುವುದು ಅತ್ಯಂತ ಸೂಕ್ತ. ಹೊಸ ವರ್ಷ ಯುಗಾದಿಯ ಉಡುಗೊರೆಯೂ ಆಗುತ್ತದೆ. ಕೇವಲ ಬಟ್ಟೆಬರೆ, ಹಣ, ಆಭರಣಕ್ಕಿಂತ ಜ್ಞಾನಾತ್ಮಕವಾದ ಸಾಹಿತ್ಯವನ್ನು ಉಡುಗೊರೆಯಾಗಿ ಕಳಿಸುವುದು ಒಳ್ಳೆಯದು. ಅದೇ ರೀತಿ ಬಾಗಿನ ಕೊಡುವವರು ಸಹ ಸಾಹಿತ್ಯವನ್ನು ಪೂಜಾ ಸಾಮಾನುಗಳನ್ನು ಕೊಡುವುದು ಸೂಕ್ತ. ಬಾಗಿನದಲ್ಲಿ ಒಂದು ಓಲೆಗರಿಯ ಸುರುಳಿ ಇಡುತ್ತಿದ್ದುದನ್ನು ನಾನು ನೋಡಿದ್ದೇನೆ. ಅದು ವಚನ ಸಾಹಿತ್ಯದ ಸಂಕೇತ. ಕೆಳದಿ ಚೆನ್ನಮ್ಮಾಜಿ ಒಮ್ಮೆ ಲಕ್ಷದ ಮೇಲೆ 96000 ಗಣಂಗಳಿಗೆ ಪ್ರಸಾದ ದಾಸೋಹ ಮಾಡಿ ಅವರಿಗೆಲ್ಲ ಒಂದು ವಚನದ ಕಟ್ಟು ಮತ್ತು ವಿಭೂತಿಗಟ್ಟಿ ಕೊಟ್ಟಿದ್ದಾಗಿ ಕೇಳಿದ್ದೇನೆ. ಬಾಗಿನದಲ್ಲಿ ವಚನ ಗ್ರಂಥ, ವಿಭೂತಿ ಗಟ್ಟಿ ತಪ್ಪದೆ ಇಡಬೇಕು.

☐ ಎಸ್.ಡಿ.ಬಸವರಾಜು.ಎಸ್.ಕೊಪ್ಪಲು, ಕಡೂರು ತಾಲ್ಲೋಕು

? ಪ್ರ.1 ಉಗಾದಿಯಂದು ಚಂದ್ರನನ್ನು ನೋಡುವ ಉದ್ದೇಶವೇನು? ಲಿಂಗಾಯತ ಧರ್ಮದಲ್ಲಿ ಇದಕ್ಕೆ ವಿಶಿಷ್ಟ ಅರ್ಥವೇನಾದರೂ ಇದೆಯೆ?

★ ಈ ಭಾಗದ ಜನರು ಆಚರಿಸುವುದು ಚಾಂದ್ರಮಾನ ಯುಗಾದಿಯನ್ನು ಹೊಸವರ್ಷದ ದಿನವನ್ನಾಗಿ. ಜನವರಿ 1 ಪಾಶ್ಚಿಮಾತ್ಯರ ಹೊಸ ವರ್ಷ ವಸಂತ ಋತು ಪ್ರಕೃತಿಗೆ ಹೊಸ ಚೈತನ್ಯ ತರುವ ಸಮಯ ವಸಂತ ಋತುವಿನ ಚೈತ್ರಮಾಸದ ಮೊದಲ ದಿನ ಯುಗಾದಿ-ನೂತನ ವರ್ಷ ಆರಂಭದ ದಿನ. ಹಿಂದಿನ

ಬುಡಕಟ್ಟುಗಳ ಜನರು ಸೂರ್ಯ, ಚಂದ್ರ, ಅಗ್ನಿ, ನಕ್ಷತ್ರಗಳನ್ನು ಆರಾಧಿಸುತ್ತಿದ್ದರು. ಚಾಂದ್ರಮಾನ ಯುಗಾದಿಯ ದಿನ ಅಂದರೆ ಅಮವಾಸ್ಯೆಯ ಮರುದಿನ, ಪಾಡ್ಯದಂದು ಅಂದಿನಿಂದ ಹೊಸವರ್ಷವು ಚಂದ್ರನ ಉದಯದ ಮೇಲೆ ಆರಂಭವಾಗುವುದರಿಂದ ಹಾಗೆ ನೋಡುವ ಸಂಪ್ರದಾಯ ಬಂದಿದೆ. ಲಿಂಗಾಯತರು ಗ್ರಹಗಳ ಆರಾಧಕರಲ್ಲ. ಆದ್ದರಿಂದ ಚಂದ್ರನನ್ನು ದರ್ಶಿಸದೆ ಗುರು-ಲಿಂಗ-ಜಂಗಮರನ್ನು ದರ್ಶಿಸಿ, ಪೂಜಿಸಿ ಹಿರಿಯರಿಗೆ ನಮಸ್ಕರಿಸಿ ಗೌರವಿಸಿ ಹೊಸವರ್ಷವನ್ನು ಸ್ವಾಗತಿಸುವರು, ವಿಶ್ವವಸು ಸಂವತ್ಸರದ ಚೈತ್ರಮಾಸದ ಯುಗಾದಿ ಪಾಡ್ಯ ಸೋಮವಾರದಂದು ಶೂನ್ಯ ಪೀಠ ಸ್ಥಾಪನೆಯಾಗಿ ಅಂದು ಅಲ್ಲಮ ಪ್ರಭು ದೇವರು ಪೀಠಾರೋಹಣ ಮಾಡಿದರು(ಕಿ.ಶ.1185). ಆದ್ದರಿಂದ ಲಿಂಗಾಯತರಿಗೆ ಎರಡು ಅರ್ಥದಲ್ಲಿ ಮಹತ್ವದ ದಿನ. ಪಂಚಾಂಗ ಶ್ರವಣ, ಚಂದ್ರದರ್ಶನ ಅಗತ್ಯವಿಲ್ಲ.

? ಪ್ರ.2 ಹರಕೆ ಕಟ್ಟುವುದು ಸರಿಯೆ ? ಅದು ಫಲಿಸುವುದೆ?

★ ಧರ್ಮಪಿತ ಬಸವಣ್ಣನವರ ಪ್ರಕಾರ ಹರಕೆ ಕಟ್ಟುವುದು ತಪ್ಪು

"ಹರಸಿ ಮಾಡುವುದು ಹರಕೆಯ ದಂಡ
ನೆರಹಿ ಮಾಡುವುದು ಡಂಭಿನ ಭಕ್ತಿ
ಹರಸ ಬೇಡ, ನೆರಹ ಬೇಡ"

ಧರ್ಮಪಿತರನ್ನು ಸ್ತುತಿಸುವಾಗ ಹರಿಹರನು ಹೇಳುತ್ತಾನೆ:

"ಬೇಡಿದುದನ್ನು ಬೇಡಿದವರ್ಗೆ ಇಲ್ಲದೆನ್ನದೆ ಈವೆ. ಬೇಡಲೊಲ್ಲದವರ ಮಿಗಿಲಾಗಿ ಆರಾಧಿಪೆ." ಅನೇಕ ಅಪೇಕ್ಷೆ ವ್ಯಕ್ತಪಡಿಸಿದವರಿಗೆ ಅವುಗಳನ್ನು ಕೊಡುತ್ತಿದ್ದರು. ಯಾವ್ವೋ ಏನೂ ಕೇಳುತ್ತಿರಲಿಲ್ಲವೇ ಅವರನ್ನು ಗೌರವದಿಂದ ಆರಾಧಿಸುತ್ತಿದ್ದರು. ಅವರು ಕೇಳುವ ಮೊದಲೇ ಅಗತ್ಯ ವಸ್ತುಗಳನ್ನು ನೀಡುತ್ತಿದ್ದರು. ದೇವರೂ ಅಷ್ಟೆ ಬೇಡಿದವರಿಗೆ ಬೇಡಿದ್ದು ಕೊಡುತ್ತಾನೆ. ಬೇಡದೆ ಇರುವವರಿಗೆ ತನ್ನ(ನ್ನೇ) ಪ್ರೀತಿಯನ್ನೇ ಧಾರೈಸುತ್ತಾನೆ. ಆದಕ್ಕೇ ನಾವು ಬೇಡುವುದಿಲ್ಲ.

ಆದರೆ ಜನ ಸಾಮಾನ್ಯರಿಗೆ ಅಂಥ ಮನೋಬಲ ಇರುವುದಿಲ್ಲ. ತಮ್ಮ ಆಂತರಿಕ ಭೀತಿ, ಆತಂಕ ನಿವಾರಣೆಗೆ ಹರಸಿಕೊಳ್ಳುತ್ತಾರೆ. ಅದು ಕ್ಷಮ್ಯ ಅಪರಾಧ. ಮೂಢ ಲಿಂಗಾಯತರು ನಂದಾದೀಪ ಉರಿಸುತ್ತೇವೆ; ಮನೆ ದೇವರಿಗೆ ಕೋರು ಮೀಸೆ, ಬೆಳ್ಳಿ ಕಣ್ಣು ಕೊಡುತ್ತೇವೆ ಎಂದು, ಮೂರ್ಖ ಲಿಂಗಾಯತರು ದುರ್ಗಮ್ಮ, ಮಾರಮ್ಮನಿಗೆ ಕುರಿ, ಕೋಳಿ ಕೊಡುತ್ತೇವೆ. ಯಲ್ಲಮ್ಮನಿಗೆ ತುಳಜಾ ಭವಾನಿಗೆ ಹುಡುಗಿಯರನ್ನು ದೇವ ದಾಸಿಯರನ್ನಾಗಿ ಬಿಡುತ್ತೇವೆ ಎಂದು ಹರಕೆ ಹೊರುತ್ತಾರೆ. ಇದು ಅಕ್ಷಮ್ಯ ಅಪರಾಧ.

ಕೆಲವೊಂದು ಇಷ್ಟಾರ್ಥ ಸಿದ್ಧಿ ಮಾಡಿಕೊಳ್ಳಲು ಸಂಕಲ್ಪವು ನೆರವಾಗುತ್ತದೆ. ಹರಕೆಯಲ್ಲಿ ಜ್ಞಾನವಿರದೆ ಮೂಢ ನಂಬಿಕೆ ಇರುತ್ತದೆ, ಪ್ರಯತ್ನ ಇರುವುದಿಲ್ಲ. ಸಂಕಲ್ಪದಲ್ಲಿ ತಿಳುವಳಿಕೆ, ಜ್ಞಾನ ಇರುವುದಲ್ಲದೆ ಪೂಜೆ, ಜಪಗಳು ಮೇಳೈಸಿ ಪ್ರಯತ್ನವೂ ಅಂತರ್ಗತವಾಗಿರುತ್ತದೆ. ಆದ್ದರಿಂದ ಬಸವ ಭಕ್ತರು ಹರಕೆ ಮಾಡಿಕೊಳ್ಳುವುದಕ್ಕಿಂತ ಸಂಕಲ್ಪ ಮಾಡಿಕೊಳ್ಳುವುದು ಸೂಕ್ತ.

3. ಆತ್ಮ ಎಂಬುದು ಸತ್ಯವೆ ? ವ್ಯಕ್ತಿ ಲಿಂಗೈಕ್ಯರಾದ ಮೇಲೆ ಪರಕಾಯ ಪ್ರವೇಶ ಮಾಡುತ್ತದೆ ಎಂದು ದೂರದರ್ಶನದ ಒಂದು ಚರ್ಚೆಯಲ್ಲಿ ಕೇಳಿದೆ. ಇದು ನಿಜವೆ ?

★ ಆತ್ಮ ಎಂಬುದು ಸತ್ಯ. ಅದನ್ನೇ ವಚನ ಸಾಹಿತ್ಯದಲ್ಲಿ ಅಂಗ ಎಂದು ಕರೆಯಲಾಗಿದೆ. ಪೂರ್ಣಾಯುಷ್ಯ ಮುಗಿಯುವ ಮುನ್ನವೇ ವ್ಯಕ್ತಿಯು ಸ್ವಹತ್ಯೆ ಮಾಡಿಕೊಂಡಾಗ ಆತ್ಮವು ಸೂಕ್ಷ್ಮ(ಗಾಳಿ) ಶರೀರಿಯಾಗಿ ಸಂಚರಿಸುತ್ತ ಆವರಿವರ ಶರೀರದ ಮೇಲೆ ನೆಲೆಸಿ ಏನೇನೋ ಚಟುವಟಿಕೆ ಮಾಡುತ್ತದೆ. ವ್ಯಕ್ತಿಗಳು ಸಹಜ ಸಾವು ಹೊಂದಿದಾಗ ಈಗಿನ ಜನ್ಮದ ಪಾಪ ಪುಣ್ಯಕ್ಕೆ ಅನುಸಾರವಾಗಿ ಇನ್ನೊಂದು ಜನ್ಮ ಎತ್ತುತ್ತದೆ. ಲಿಂಗೈಕ್ಯ ಸ್ಥಿತಿ ಪಡೆದವರು ಸತ್ತಾಗ ಉರಿಯುಂಡ ಕರ್ಪೂರದಂತೆ ಲಿಂಗದೇವನಲ್ಲಿ ಈ ಅಂಗವು ವಿಲೀನವಾಗುತ್ತದೆ. ಇದಕ್ಕೆ ಪರಕಾಯ ಪ್ರವೇಶ ಎನ್ನುವುದಿಲ್ಲ, ಮಾತ್ರವಲ್ಲ ಗಾಳಿ ಶರೀರ ಇನ್ನೊಬ್ಬರ ಮೇಲೆ ನೆಲೆಸಿದ್ದರೂ ಪರಕಾಯ ಪ್ರವೇಶ ಎನ್ನುವುದಿಲ್ಲ. ಅದು ಒಂದು ತಂತ್ರ ವಿದ್ಯೆ

ತಾನು ಬದುಕಿದ್ದಂತೆಯೇ ಆತ್ಮವನ್ನು ಬೇರ್ಪಡಿಸಿ ಇನ್ನೊಂದು ದೇಹದ ಒಳಹೊಕ್ಕು ಕೆಲಸ ಮಾಡಿ ಪುನಃ ಬಂದು ತನ್ನ ದೇಹದೊಳಕ್ಕೆ ಸೇರುವುದನ್ನು ಪರಕಾಯ ಪ್ರವೇಶ ಎಂದು ಕರೆಯಲಾಗುತ್ತದೆ.

⍓ ಅಮರೇಗೌಡ, ಕೊಪ್ಪಳ

? ದೇವರನ್ನು ಕುರಿತು ಸಂಬೋಧಿಸುವಾಗ ಅವನು ಎನ್ನುವದೇಕೆ? ಹಾಗೆಂದಾಗ ದೇವರು ಪುರುಷ ಎಂಬ ಕಲ್ಪನೆ ಬರುವುದಿಲ್ಲವೆ?

★ ಮಾನವನ ಭಾಷೆಗೆ ಒಂದು ಸೀಮೆ (limitation) ಇದೆ. ಭಾಷಾ ಶಾಸ್ತ್ರದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗ ಎಂದು ಬಳಸಲಾಗುತ್ತಿದೆ. ಕೆಲವು ಭಾಷೆಗಳಲ್ಲಿ ಉದಾ ಹಿಂದಿ, ಎರಡೇ ಲಿಂಗಗಳು. ಹೀಗಾಗಿ ಗಾಡಿ ನಿರ್ಜೀವ ವಸ್ತುವಾಗಿದ್ದರೂ ಸ್ತ್ರೀಲಿಂಗದಲ್ಲಿ ಸಂಬೋಧಿಸಲಾಗುವುದು. ಹೀಗಾಗಿ ದೇವನನ್ನು ಅವನು, ಅವಳು, ಅದು, ಎಂದು ಯಾವುದಾದರೊಂದು ರೀತಿ ಬಳಸುತ್ತಾರೆ. ಅವನು ಎನ್ನುವುದು ಹೆಚ್ಚು ಬಳಕೆಯಲ್ಲಿದೆ ಅಷ್ಟೆ. ತತ್ತ್ವವಾಚಕವಾಗಿ ಅದು - That ತತ್ ಎಂದು ಸಹ ಬಳಸಲಾಗುತ್ತದೆ. ದೇವರು ಈ ಜಗತ್ತಿನ ತಂದೆ ಎಂಬ ಪರಿಕಲ್ಪನೆಯೂ ಇಲ್ಲಿದೆ.

⍓ ಹೆಸರು, ಊರು ಬೇಡ ಉತ್ತರಿಸಿ

? ನಮ್ಮ ರಾಷ್ಟ್ರೀಯ ಬಸವ ದಳದ ಸಕ್ರಿಯ ಕಾರ್ಯಕರ್ತರು ಒಳ್ಳೆಯವರು, ಉದಾರಿಯೂ ಆದ ಒಬ್ಬರು ಮುನಿಸಿಕೊಂಡು ಬಸವ ಮಂಟಪದ ಕಾರ್ಯಕ್ರಮಗಳಿಗೆ ಬರುವುದನ್ನು ಬಿಟ್ಟಿದ್ದಾರೆ. ಅವರ ಫೋನ್ ನಂಬರ್ ಕೊಟ್ಟಿದ್ದೇನೆ. ಫೋನ್ ಮಾಡಿ, ಸಮಾಧಾನ ಹೇಳಿ ಸರಿ ಪಡಿಸುವಿರಾ ?

★ ವ್ಯಕ್ತಿಗಳಲ್ಲಿ ಸಮಷ್ಟಿ ಪ್ರಜ್ಞೆ ಇರಬೇಕು, ಹೊಂದಿಕೊಂಡು ಹೋಗುವ ಗುಣವಿರಬೇಕು. ತಾವು ಸರಿ ಇದ್ದು ಇನ್ನೊಬ್ಬರದೇ ತಪ್ಪು ಇದ್ದರೂ ಅದನ್ನು ಕೆದರದೆ ಹೇಗೆ ಅವರನ್ನು ಸರಿಪಡಿಸಬೇಕು ಎಂಬ ಜಾಣ್ಮೆ ಕಲಿಯಬೇಕು . ನಮ್ಮ ಜನರಲ್ಲಿ ಸಮಷ್ಟಿ ಪ್ರಜ್ಞೆ ಇಲ್ಲ ಎಂಬುದನ್ನು ಈಗ ನಾವೂ ಮನವರಿಕೆ ಮಾಡಿಕೊಂಡು ಅವರನ್ನು ಸಮಾಧಾನ ಪಡಿಸುವ ವಿಷಯದಲ್ಲಿ ಮನಸ್ಸನ್ನು ನಿರ್ಲಿಪ್ತಗೊಳಿಸಿಕೊಳ್ಳುತ್ತಿದೇವೆ. ಸಹೋದರತ್ವ ಭಾವನೆ ಬೆಳೆಸಿಕೊಂಡು ಮುಸಲೀಮರು, ಕ್ರೈಸ್ತರು, ಸಿಖ್ಖರು ಬಲಗೊಳ್ಳುತ್ತಿದ್ದಾರೆ. ಮಸೀದಿ, ಚರ್ಚ್, ಗುರುದ್ವಾರಗಳಿಗೆ ಕರ್ತವ್ಯ ಎಂದು ಹೋಗುತ್ತಾರೆ. ಲಿಂಗಾಯತರು ತಮ್ಮ ವೈಯಕ್ತಿಕ ರಾಗ ದ್ವೇಷ ಪ್ರತಿಷ್ಠೆ ಅಹಂಕಾರಗಳನ್ನು ಒಳಗೆ ತುಂಬಿಕೊಂಡೇ ರಾ.ಬ.ದಳಗಳಿಗೆ ಬರುವುದರಿಂದ ಬಲು ಸುಲಭವಾಗಿ ಮುನಿಸಿಕೊಳ್ಳುತ್ತಾರೆ. ಇದನ್ನು ಕಂಡು ಮನನೊಂದು ನಿರಾಶಳಾಗಿರುವ ನಾನು ಈಗ ಮುನಿಸಿಕೊಂಡವರನ್ನು ತಿದ್ದುವ ಪ್ರಯತ್ನವನ್ನು ಕೈಬಿಟ್ಟಿದ್ದೇನೆ. ಋಣವಿದ್ದಷ್ಟು ದಿವಸ ಎಲ್ಲ ಸಂಬಂಧಗಳು ಎಂಬ ಭಾವನೆ ತಾಳುತ್ತಿದ್ದೇನೆ.

⍓ ಶರಣ.ನೀಲಕಂಠ ಕಿಚಡಿ, ದೇಶನೂರು, ಜಿ-ಬೆಳಗಾಂವಿ

? ಸೋಮವಾರ 13-2-2006ರ ಪ್ರಜಾವಾಣಿಯಲ್ಲಿ ದಾವಣಗೆರೆಯ ಖ್ಯಾತ ಉದ್ದಿಮೆದಾರ ಶಾಮನೂರು ಶಿವಶಂಕರಪ್ಪ ಅವರು ಉಳವಿಯ ಚನ್ನಬಸವೇಶ್ವರ ದೇವಾಲಯಕ್ಕೆ ಒಂದೂವರೆ ಕೆ.ಜಿ.ತೂಕದ ಚಿನ್ನದ ನಂದಿಯ ವಿಗ್ರಹವನ್ನು ಅರ್ಪಿಸಿದ್ದಾರೆ. ನೂತನ ವಸತಿ ಗೃಹಕ್ಕೆ 11 ಲಕ್ಷ ರೂ ದೇಣಿಗೆ ಪ್ರಕಟಿಸಿದ್ದಾರೆ. ಇವರಿಗೆ ಚಿನ್ಮಯ ಜ್ಞಾನಿ ಚನ್ನಬಸವಣ್ಣನವರು ನಂದಿಯಾಗಿ ಬಿಟ್ಟಿದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?

★ ಕ್ರಾಂತಿ ಪುರುಷ ಬಸವಣ್ಣ, ಚಿನ್ಮಯ ಜ್ಞಾನಿ ಚನ್ನಬಸವಣ್ಣನವರನ್ನು ಎತ್ತುಗಳನ್ನಾಗಿ ಮಾಡಿಟ್ಟಿದ್ದಾರೆಂದೇ ಲಿಂಗಾಯತರು ತತ್ತ್ವಹೀನರು, ಅಜ್ಞಾನಿಗಳು, ಜಾತಿವಾದಿಗಳು, ಮೂಢ ನಂಬಿಕೆಯವರೂ ಆಗಿದ್ದಾರೆ "ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದು" ಎಂಬ ಧರ್ಮಪಿತರ ವಾಣಿ ಈ ಸಂದರ್ಭಕ್ಕೆ ಅನ್ವಯವಾಗುವುದೇ ಇಲ್ಲವೆ ಚಿಂತಿಸಿರಿ. 11 ಲಕ್ಷ ವಸತಿ ಗೃಹಕ್ಕೆ ಕೊಟ್ಟಿದ್ದೇನೋ ಬಸವಾದಿ ಪ್ರಮಥರ ಆಶಯಕ್ಕೆ ವಿರುದ್ಧವಾಗಿಲ್ಲ. ಆದರೆ ಚಿನ್ನದ ನಂದಿ ಮಾಡಿ, ಚನ್ನಬಸವಣ್ಣನವರನ್ನು ಜಡಗಟ್ಟಿಸಿ ತಿರುಪತಿಯ ತಿಮ್ಮಪ್ಪನ ಈ ಕುಸಂಸ್ಕೃತಿ ಉಳವಿಯಲ್ಲೂ ಬೆಳೆಸಲು ಕಾರಣವಾಗಿರುವುದು ಖಂಡನಾರ್ಹ ಮತ್ತು ವಿಷಾದನೀಯ. ಒಂದು ಒಳ್ಳೆಯ ಸುಸಜ್ಜಿತ ಆಸ್ಪತ್ರೆ ತೆರೆದು ಆ ಹಣವನ್ನು

ಸಾರ್ಥಕಗೊಳಿಸಿ, ಉಳವಿಯ ಪರಿಸರದ ಜನರಿಗೆ ಮಹಾ ಉಪಕಾರ ಮಾಡಬಹುದಿತ್ತು, ಅತ್ಯಂತ ಹೆಚ್ಚಿನ ಗುಣಮಟ್ಟದ ಶಾಲೆ ಮಾಡಿ ದೂರದ ಊರು, ರಾಜ್ಯಗಳಿಂದೆಲ್ಲ ವಿದ್ಯಾರ್ಥಿಗಳನ್ನು, ಪೋಷಕರನ್ನು ಆಕರ್ಷಿಸಿ ಉಳವಿಯನ್ನು ಜನಪ್ರಿಯಗೊಳಿಸಬಹುದಿತ್ತು.

⍓ ಅನ್ನಪೂರ್ಣ, ಊರು ಬೇಡ

? ಕೆಲವರು ಸಾಧಕರು ಸಾಧಕಿಯರು ಅಧ್ಯಾತ್ಮಿಕ ಗುರಿಯೊಡನೆ ಬರುತ್ತಾರೆ. ಕಾಲಾ ನಂತರ ಅವರ ಮನಸ್ಸನ್ನು ಬೇರೊಬ್ಬರು ವಿಚಲಿತಗೊಳಿಸುತ್ತಾರೆ. ತಾವಿಟ್ಟುಕೊಂಡ ಗುರಿಯನ್ನು ತೊರೆದು ಅವರು ಸಂಸಾರ ಜೀವನವನ್ನು ಪ್ರವೇಶಿಸುತ್ತಾರೆ. ಅವರು ಸಂಸಾರ ಜೀವನದಲ್ಲಿ ತೊಡಗಿಸಿಕೊಂಡ ಬಳಿಕ ಅವರನ್ನು ವಿಚಲಿತಗೊಳಿಸಿದವರು "ಎಂಥಾ ಸಂಗಾತಿಯನ್ನು ಪಡೆದೆ; ನನ್ನ ಜೀವನ ಧನ್ಯವಾಯಿತು." ಎಂದು ಸಂತೋಷ ಪಡಬಹುದಲ್ಲವೆ?

★ ಅಲ್ಪ ಮತಿಯಾದವನು/ವಳು ಹಾಗೆ ಸಂತೋಷ ಪಡಬಹುದು. ಆದರೆ ಬಂಗಾರದ ಸರಪಳಿಯನ್ನು ಎಮ್ಮೆ ಕಟ್ಟುವ ಹಗ್ಗವನ್ನಾಗಿ ಮಾಡಲು ತಾನು ಪ್ರಯತ್ನಿಸಿರುವ ಬಗ್ಗೆ ತಿಳುವಳಿಕೆ ಉಳ್ಳವರಾದರೆ ವಿಷಾದ ಪಡುವರು. ಉದಾತ್ತ ಉದ್ದೇಶ ಹೊಂದುವವರು ಬಹಳ ಕಡಿಮೆ ಜನರು; ಅಂಥವರು ಗುರಿಯತ್ತ ಸಾಗುತ್ತಿರುವಾಗ ಆದರ್ಶವಾದಿಗಳನ್ನು ಪಥ ಭ್ರಷ್ಟರನ್ನಾಗಿ ಮಾಡುವುದು ಅಪಚಾರ; ಸಮಾಜಕ್ಕೆ ಮಾಡುವ ಅನ್ಯಾಯ. ವಿವಾಹವಾಗಲು ಬೇಕಾಗುವವರಿಗೆ ಅಗತ್ಯವಿರುವುದು ಸಹಜ ಜೀವನ ನಡೆಸಬಲ್ಲ ಒಂದು ಹೆಣ್ಣು ಅಥವಾ ಗಂಡು. ಅದಕ್ಕಾಗಿ ಓರ್ವ ಆದರ್ಶವಾದಿಯ 'ಬಲಿ'ಯನ್ನೇಕೆ ತೆಗೆದುಕೊಳ್ಳಬೇಕು ? ಬಲೆಗೆ ಬಿದ್ದ ತಪ್ಪಿಗೆ ಹೊರಗೆ ಸಂತೋಷವನ್ನು ತೋರಿಸಿಕೊಂಡರೂ ಆದರ್ಶ ಪಥದಿಂದ ದೂರ ಸರಿದವರ ಅಂತರಂಗದಲ್ಲಿ ಯವುದೋ ಒಂದು ಕೊರಗು ಇರುತ್ತದೆಂಬುದು ಸುಳ್ಳಲ್ಲ. ಪ್ರತಿಭಾವಂತ ತ್ಯಾಗಿಯನ್ನು ಕಳೆದುಕೊಂಡ ದೌರ್ಭಾಗ್ಯ ಸಮಾಜದ್ದು ಆಗುತ್ತದೆ.

⍓ ಬಸವರಾಜ ಮಡಿವಾಳರ, ಬೈಲಹೊಂಗಲ

? ನಮ್ಮ ಬೈಲಹೊಂಗಲ ತಾಲ್ಲೋಕಿನ ಹುಣಸಿಕಟ್ಟಿ ಗ್ರಾಮದಲ್ಲಿ 12 ನೆಯ ಶತಮಾನದ ರುದ್ರಮುನಿ ದೇವರ ಜಾತ್ರೆ ನಡೆಯುತ್ತದೆ. ಈ ಸಲ ಫೆಬ್ರವರಿ 27 ರಿಂದ ಮಾರ್ಚ್ 5ರವರೆಗೆ ಇರುತ್ತದೆ. ವಚನ ಸಾಹಿತ್ಯ ರಕ್ಷಣೆಗಾಗಿ ಕಾದರವಳ್ಳಿ ಬಳಿ ಯುದ್ಧ ನಡೆದಾಗ ಅವರ ನೇತೃತ್ವವನ್ನು ರುದ್ರಮುನಿಗಳು ವಹಿಸಿದ್ದರು ಎಂಬ ನಂಬಿಕೆ ಇದೆ. ಉಳವಿ ಚನ್ನಬಸವಣ್ಣನವರ ರಥೋತ್ಸವದಂದು ಕಾದರವಳ್ಳಿಯಿಂದ ನಂದಿಧ್ವಜ ಹೋಗುತ್ತದೆ. ರುದ್ರಮುನಿ ಮತ್ತು ಅವರ ತಂದೆ ರೇವಣಸಿದ್ಧರು ಲಿಂಗಾಯತ ಧರ್ಮ-ಸಂಸ್ಕೃತಿ ಉಳಿಸಲು ಶ್ರಮಿಸಿದರು ಎಂಬ ನಂಬಿಕೆ ಇದೆ (ವರದಿ ವಿಜಯ ಕರ್ನಾಟಕ ದಿ.24-2-06 ರ ಸಂಚಿಕೆ) ಇದು ನಿಜವೆ ?

★ ನೂರಕ್ಕೆ ನೂರು ನಿಜ. ಸದಾ ಸಂಚಾರಿಗಳಾಗಿದ್ದ ರೇವಣಸಿದ್ಧರು ಮಗ ರುದ್ರಮುನಿಯನ್ನು ಮಹಾಮನೆಯಲ್ಲಿ ಬಿಟ್ಟಾಗ ಚನ್ನಬಸವಣ್ಣನವರ ವಯಸ್ಸಿನವರೇ ಆಗಿದ್ದ ರುದ್ರಮುನಿಯನ್ನು ಅಕ್ಕನಾಗಲಾಂಬಿಕೆಯೇ ಸಾಕಿ ಬೆಳಸಿದಳು. ಕಾದರವಳ್ಳಿ ಬಳಿ ಬಿಜ್ಜಳನ ಸೈನ್ಯವನ್ನು ಮೊದಲ ಬಾರಿಗೆ ಎದುರಿಸಬೇಕಾಯಿತು. ಚನ್ನಬಸವಣ್ಣನವರಿಗೆ ಪೆಟ್ಟಾಯಿತು. ಆಗ ಅವರನ್ನು ಮತ್ತು ವಚನ ಸಾಹಿತ್ಯವನ್ನು ಮುಂದೆ ಸಾಗಿಸಿ, ಮಡಿವಾಳ ಮಾಚಿದೇವ, ಅಕ್ಕನಾಗಲಾಂಬಿಕೆ, ರುದ್ರಮುನಿ ಮುಂತಾದವರು ಸೈನ್ಯವನ್ನು ಎದುರಿಸಿದರು. ಕಾದರವಳ್ಳಿ ಬಳಿಯ ಯುದ್ಧದಲ್ಲಿ ಶರಣರಿಗೆ ಸೋಲಾಯಿತು. ಮುರುಗೋಡು ಬಳಿ ಎರಡನೆ ಯುದ್ಧವಾಯಿತು. ಅಷ್ಟರಲ್ಲಿ ಸ್ಥಳೀಯರ ನೆರವು, ಕದಂಬ ರಾಜರ ನೆರವು ಸಿಕ್ಕಿ ಶರಣರಿಗೆ ಜಯ ಪ್ರಾಪ್ತಿಯಾಯಿತು. ಅಳಿಯ ಬಿಜ್ಜಳ ಅಕ್ಕನಾಗಲಾಂಬಿಕೆಗೆ ಸೆರೆ ಸಿಕ್ಕ. ಬಿಜ್ಜಳನ ಸೈನ್ಯ ಸೋತು ಹಿಮ್ಮೆಟ್ಟಿತು. (ಕೋಡು ಮುರಿದು = ಮುರುಗೋಡು ಎಂಬ ಹೆಸರು ಆ ಸ್ಥಳಕ್ಕೆ ಬಂದಿತು) ಚನ್ನಬಸವಣ್ಣನವರು ಲಿಂಗೈಕ್ಯರಾದ ನಂತರವೂ. ಅಕ್ಕನಾಗಲಾಂಬಿಕೆಯ ಜೊತೆಗೆ ಮಗನಂತೆ ಇದ್ದು ಬೆಂಗಾವಲಾದವರು ರುದ್ರಮುನಿದೇವರು.

ಲಿಂಗಾಯತ ಧರ್ಮದ ಪ್ರಚಾರಕ್ಕಾಗಿಯೇ ಅಕ್ಕನಾಗಮ್ಮ ಪೀಠವನ್ನು ಕಟ್ಟಿ ರುದ್ರಮುನಿ ದೇವರನ್ನು ಗದ್ದುಗೆಗೆ ಏರಿಸಿದಳು

ಪಂಚಪೀಠಾಧೀಶರು ರುದ್ರಮುನಿ ದೇವರನ್ನು ರುದ್ರಮುನಿ ಶಿವಾಚಾರ್ಯನನ್ನಾಗಿ ಶೈವೀಕರಣಗೊಳಿಸಿ ಇತಿಹಾಸಕ್ಕೆ ಅಪಚಾರ ಮಾಡಿರುವುದಲ್ಲದೆ, ಒಂದು ಪವಿತ್ರ ಕುಟುಂಬ (Holy family) ದಂತೆ ಇದ್ದ ಶರಣ ಪರಂಪರೆಯನ್ನು ಛಿದ್ರಗೊಳಿಸಿ ಧರ್ಮ, ಸಾಹಿತ್ಯ, ಇತಿಹಾಸ ಮತ್ತು ಸಮಾಜ ಎಲ್ಲಕ್ಕೂ ಅಪಚಾರ ಮಾಡಿದ್ದಾರೆ. ಎಂದೂ ರಿಪೇರಿ ಮಾಡಲಾಗದಷ್ಟು ಸಮಾಜವನ್ನು ಸೀಳಿದ್ದಾರೆ.

✉ ಆನಂದ ಗುಡುಸ, ರಾ.ಬ.ದಳ, ಬೆಳಗಾಂವ

? ಬೆಳಗಾವಿಯಲ್ಲಿ ಲಿಂಗಾಯತ ಸಂಘಟನೆಯವರು ಒಂದು ಕಾರ್ಯಕ್ರಮಕ್ಕೆ ನಿಜಗುಣಾನಂದ ಸ್ವಾಮಿಗಳನ್ನು ಕರೆಸಿದ್ದರು. ಗುರು ಬಸವಣ್ಣನವರ ಪೂಜೆಗೆ 'ಮುಕ್ತಿದಾಯಕ' ನಂತರ ಪ್ರಾರ್ಥನೆಯಲ್ಲಿ "ಹೇ ಪರಮಾತ್ಮಾ" ಹಾಡಲಾಯಿತು. ಸ್ವಾಮಿಗಳು ಭಾಷಣದಲ್ಲಿ "ವಚನಗಳನ್ನು ಹಾಡಬೇಕೇ ವಿನಾ ಒಬ್ಬ ವ್ಯಕ್ತಿಯು ಬರೆದ ಹಾಡನ್ನು ಹಾಡಬಾರದು" ಎಂದು ಹೇಳಿದರು. ಈ ಬಗ್ಗೆ ತಮ್ಮ ಅನಿಸಿಕೆ ಏನು ?

★ ಮುಕ್ತಿದಾಯಕ ಎಂಬ ಬಸವಣ್ಣನವರ ಪ್ರಾರ್ಥನಾ ಗೀತೆ, ಓಂ ಗುರು ಬಸವ ಪ್ರಭು ಮಂಗಲ ಗೀತೆ ನಾನು ಬರೆಯುವ ಮೊದಲು ಪೂಜಿಸುವಾಗ ಏನು ಹಾಡಬೇಕೆಂದೇ ತಿಳಿಯುತ್ತಿರಲಿಲ್ಲ. ಒಂದು ದಿವಸ ಪೂಜ್ಯ ಲಿಂಗಾನಂದ ಅಪ್ಪಾಜಿ ಹೇಳಿದರು. "ಬಸವಾದಿ ಪ್ರಮಥರು ಕೊಟ್ಟ ಸಂದೇಶ ವಚನಗಳು. "ಅವನ್ನು ಕೊಟ್ಟದ್ದಕ್ಕಾಗಿ ನಾವು ಆದಿ ಗುರುವನ್ನು ಸ್ತುತಿಸಬೇಕು, ಪ್ರಾರ್ಥಿಸಬೇಕು. ಬಸವ ಸ್ತುತಿಯ ವಚನಗಳಿವೆ. ಆದರೆ ಸಂಗೀತ ಜ್ಞಾನವಿರುವವರು ಹಾಡಬಲ್ಲರು. ಜನಸಾಮಾನ್ಯರು ಸಾಮೂಹಿಕವಾಗಿ ಹಾಡಲು ಬರುವಂತೆ ಸರಳವಾದ ದಾಟಿಯಲ್ಲಿರಬೇಕು ಅಂಥದೊಂದು ಬರೆಯಿರಿ." ಎಂದರು. ಆಗ "ಮುಕ್ತಿದಾಯಕ" ಬರೆದೆ. ಈಗ ಅದು ಅತಿ ಹೆಚ್ಚು ಪ್ರಚಾರದಲ್ಲಿದೆ. ಇಂಗ್ಲೆಂಡಿಗೆ ಹೋಗಿದಾಗ ಬೃಹತ್ ಹಿಂದು ಸಮ್ಮೇಳನಕ್ಕೆ ಆಹ್ವಾನಿಸಿದ್ದರು. ಅಲ್ಲಿ ಅವರು ಕಡೆಯಲ್ಲಿ ಜಯ ಜಗದೀಶ ಹರೆ ಹಾಡಿದ್ದು ನನಗೆ ಪ್ರೇರಣೆ ನೀಡಿ "ಓಂ ಗುರು ಬಸವ ಪ್ರಭು" ಬರೆದೆ. "ಹೇ ಪರಮಾತ್ಮ" ಅತ್ಯಂತ ಸೂಕ್ತ ಪ್ರಾರ್ಥನೆ; ಮಾನವ ಜನಾಂಗಕ್ಕೆಲ್ಲ ದೇವರನ್ನು ಸ್ತುತಿಸಲು ಉಪಯುಕ್ತವಾಗಿರುವುದಷ್ಟೆ ಅಲ್ಲ ಲಿಂಗಾಯತ ಧರ್ಮದ ದೇವರ ಕಲ್ಪನೆ ಬಿಂಬಿಸುವ ಸೂಕ್ತ ಪದ್ಯ.

ಮತ್ಸರ ಬಹು ಕೆಟ್ಟ ದೌರ್ಬಲ್ಯ; ಅದನ್ನು ಮೆಟ್ಟಲು ಸಾಮಾನ್ಯರಿಗೆ ಸಾಧ್ಯವಿಲ್ಲ. ಇದನ್ನು ಹಾಡಬೇಡಿ ಎನ್ನುವ ಬದಲು ಇನ್ನೊಂದನ್ನು ಪರ್ಯಾಯವಾಗಿ ಬರೆದು ನೀಡಿ ಅದಕ್ಕಿಂತ ಇದು ಚೆಂದವಿದೆ ಹಾಡಿ. ಎಂದು ಹೇಳಿದ್ದರೆ ನಾನು ಸೈ ಎನ್ನುತ್ತಿದ್ದೆ. ಕುಣಿಯಲು ಬಾರದ ಕೆಂಭೂತ ಚೆಂದವಾಗಿ ನರ್ತಿಸುವ ನವಿಲನ್ನು ಕಂಡು ಮತ್ಸರ ಪಟ್ಟಂತಿದೆ ಈ ಸಲಹೆ.

✉ ವಿನಯ ಪರವಾದಿ, ಹುಬ್ಬಳ್ಳಿ

? ಕೆಲವರು ತಮ್ಮ ಆಶ್ರಯಕ್ಕೆ ಬರುತ್ತಾರೆ; ಜ್ಞಾನ ಪಡೆಯುತ್ತಾರೆ. ಕಾರಣಾಂತರದಿಂದ ಹೊರಗೆ ಹೋಗುತ್ತಾರೆ. ಕೆಲವು ಸಮಯದ ನಂತರ ಪಶ್ಚಾತ್ತಾಪವಾಗಿರುತ್ತದೆ. ಗುರುಗಳಿಂದ ದೂರವಾದುದು ಏಕೆ ಎಂಬ ತಳಮಳ ಕಾಡುತ್ತದೆ. ಮರಳಿ ಬಂದರೆ ಇರಿಸಿಕೊಳ್ಳುವಿರಾ ?

★ ಹಾಗೆ ಭರವಸೆ ಕೊಡಲು ಆಗುವುದಿಲ್ಲ. ಏಕೆಂದರೆ ಅವರು ಬಿಟ್ಟು ಹೋಗಿರಬಹುದು ಅಥವಾ ಅವರ ನಡತೆ, ವರ್ತನೆಯಿಂದ ಬೇಸತ್ತು ನಾವೇ ಹೊರಗೆ ಕಳಿಸಿರಲೂಬಹುದು. ಹೊರಗೆ ಹೋದ ಮೇಲೆ ಅವರು ಏನೇನು ಮಾಡಿದರು ಎಂಬ ಚಟುವಟಿಕೆಗಳ ದಾಖಲೆಯ ಮೇಲೆ ನಂತರ ಅವರು ಕ್ಷಮೆಗೆ ಅರ್ಹರಾಗಿರಬಹುದು; ಇಲ್ಲದಿದ್ದರೆ ಇಲ್ಲ. ಜಗತ್ತು ವಿಶಾಲವಾಗಿದೆ. ಹೊರಗಿದ್ದು ಬದುಕಲಿ. ಸಂಸ್ಥೆಯ ಒಳಕ್ಕೆ ಪುನಃ ಸಮಸ್ಯೆಯನ್ನು ಸೇರಿಸಿಕೊಳ್ಳಲು ಬಯಸುವುದಿಲ್ಲ.

ಜಾತಿಗೊಬ್ಬ ಗುರುವಿದ್ದಲ್ಲಿ ಸಾಮಾಜಿಕ ಸಮಷ್ಟಿಗೆ ಧಕ್ಕೆ

ರಂಭಾಪುರಿ ಶ್ರೀಗಳ ಹೇಳಿಕೆ

ಬಸವನ ಬಾಗೇವಾಡಿ, ಫೆ.27- ವೀರಶೈವ ಧರ್ಮದ ಒಳಪಂಗಡಕ್ಕಾಗಲಿ, ಬೇರೆ ಜಾತಿಯ ಜನಾಂಗಕ್ಕಾಗಲಿ ಆಯಾ ಜಾತಿ ಗುರುಗಳನ್ನು ಮಾಡುವ ಅಗತ್ಯವಿಲ್ಲ. ಆದರೆ ಮಠಾಧೀಶರೊಬ್ಬರು ಪ್ರತಿಯೊಂದು ಜಾತಿಗೂ ಗುರುಗಳನ್ನು ಮಾಡುವ ಮೂಲಕ ಜಾತಿ ವ್ಯವಸ್ಥೆಯನ್ನು ಜೀವಂತವಾಜಿಡಿಲು ಪ್ರಯತ್ನಿಸುತ್ತಿದ್ದಾರೆ." ಎಂದು ಬಾಳೆ ಹೊನ್ನೂರು ರಂಭಾಪುರಿ ವೀರಸೋಮೇಶ್ವರ ಗುರುಗಳು ಆರೋಪಿಸಿದರು. ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು "ಕೇವಲ ರಾಜಕೀಯ ಸ್ಥಾನಮಾನ ದಕ್ಕಿಸಿಕೊಳ್ಳುವುದಕ್ಕಾಗಿ, ಸಂಖ್ಯಾಬಲ ತೋರಿಸಿಕೊಳ್ಳುವುದಕ್ಕಾಗಿ ಜಾತಿ ಸಂಘಟನೆ, ಜಾತಿಗೊಬ್ಬ ಗುರುವನ್ನು ಮಾಡಿಕೊಳ್ಳುತ್ತಿದ್ದಾರೆ. ಈ ರೀತಿಯ ವ್ಯವಸ್ಥೆಯಿಂದ ಸಾಮಾಜಿಕ ಸಮಷ್ಟಿಗೆ ಧಕ್ಕೆಯುಂಟಾಗಲಿದೆ ಎಂದರು.

ಕೆಲವು ಮಠಾಧೀಶರು ಹಾಗೂ ಸಾಹಿತಿಗಳು ವೀರಶೈವ ಧರ್ಮಕ್ಕೆ ಬದಲಾಗಿ ಪರ್ಯಾಯ ಹೆಸರುಗಳನ್ನಿಟ್ಟು ವಿವಾದ ಸೃಷ್ಟಿಸಿ, ಪ್ರಚಾರ ಪಡೆಯುತ್ತಿದ್ದಾರೆ. ತಮ್ಮ ಅಸ್ತಿತ್ವ ಪ್ರದರ್ಶಿಸುವುದಕ್ಕಾಗಿ ಸಮಾಜದ ಸಮಗ್ರತೆಗೆ ಧಕ್ಕೆ ತರುತ್ತಿದ್ದಾರೆ. ಎಂದರು.

ಯಾವ ಧರ್ಮ ಜನಸಾಮಾನ್ಯರ ಬದುಕಿನಲ್ಲಿ ಹಾಸು ಹೊಕ್ಕಾಗುವುದೋ ಆ ಧರ್ಮ ಪ್ರಗತಿ ಹೊಂದುತ್ತದೆ. ಪ್ರತಿಯೊಬ್ಬ ಮಠಾಧೀಶರು ಆತ್ಮ ಸಾಕ್ಷಿಗನುಗುಣವಾಗಿ ಧರ್ಮ ಜಾಗೃತಿ, ಜನ ಜಾಗೃತಿ ಮಾಡುವ ಕಾರ್ಯದಲ್ಲಿ ತೊಡಗಿಕೊಳ್ಳಬೇಕು ಎಂದರು. ಪಂಚಪೀಠಗಳಿಗೆ ಬಸವಾದಿ ಶರಣರ ಬಗ್ಗೆ ಅಪಾರ ಗೌರವವಿದೆ. ಪಂಚಾರ್ಯರು ಶರಣರ ವಚನಗಳನ್ನು ವಿಶ್ಲೇಸುತ್ತಾರೆ. ಆದರೆ ವಿರಕ್ತರು ಹಾಗೆ ಮಾಡಲಾರರು ಎಂದರು. ಜಟಿಲ ಭಾಷೆ ಸಂಸ್ಕೃತದಲ್ಲಿರುವ ವೀರಶೈವ ಧರ್ಮದ ತತ್ತ್ವ ಸಾರವನ್ನು ಅಧ್ಯಯನ ಮಾಡಿದ ವಚನಕಾರರು ಅವೇ ವಿಚಾರಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ಅಚ್ಚ ಕನ್ನಡದಲ್ಲಿ ಹೇಳಿದರೇ ಹೊರತು ಬೇರೆ ಹೊಸದೇನನ್ನೂ ಹೇಳಲಿಲ್ಲ ಎಂದರು.

ಸಂಯುಕ್ತ ಕರ್ನಾಟಕ, 28-2-2006 ಪುಟ-8

ಜಾತಿಗೊಂದು ಗುರು ಪೀಠ ಅಗತ್ಯವಲ್ಲವೆ ?

-ಮಾತಾಜಿ

ಮಾನವ ಧರ್ಮಕ್ಕೆ ಜಯವಾಗಲಿ ಎಂಬ ಘೋಷಣೆ ಮಾಡುತ್ತ ಜನರ ಹೆಗಲ ಮೇಲೆ ಭಾರವಾದ ಅಡ್ಡ ಪಲ್ಲಕ್ಕಿಯಲ್ಲಿ ಮೆರೆಯುವ ಪಂಚಪೀಠಾಧೀಶರಲ್ಲಿ ಪ್ರಮುಖರಾದ ರಂಭಾಪುರಿ ಶ್ರೀಗಳು ಸುಂದರವಾದ ಟೊಳ್ಳು ಹೇಳಿಕೆ ಕೊಡುವುದರಲ್ಲಿ ನಿಸ್ಸೀಮರು. ವೀರಶೈವ ಧರ್ಮದ ಒಳಗಿನ ಒಳ ಪಂಗಡಕ್ಕಾಗಲಿ, ಬೇರೆ ಜಾತಿಯ ಜನಾಂಗಕ್ಕಾಗಲಿ ಆಯಾ ಜಾತಿ ಗುರುಗಳನ್ನು ಮಾಡುವ ಅಗತ್ಯವಿಲ್ಲ. ಆದರೆ ಮಠಾಧೀಶರೊಬ್ಬರು ಪ್ರತಿಯೊಂದು ಜಾತಿಗೂ ಗುರುಗಳನ್ನು ಮಾಡುವ ಮೂಲಕ ಜಾತಿ ವ್ಯವಸ್ಥೆಯನ್ನು ಜೀವಂತವಾಗಿಡಲು ಪ್ರಯತ್ನಿಸುತ್ತಿದ್ದಾರೆ." ಇದು ರಂಭಾಪುರಿ ಶ್ರೀಗಳ ಹೇಳಿಕೆ.

ಧರ್ಮ, ಧಾರ್ಮಿಕ ಸಂಸ್ಕಾರ ಒಂದೇ ಇರುತ್ತದೆ. ಉಪ ಪಂಗಡಗಳು ಇರುವುದು ಸಮಾಜದಲ್ಲಿ, ಧರ್ಮದಲ್ಲಲ್ಲ. ಇರಲಿ; ಪದ ಬಳಕೆಯ ದೋಷವನ್ನು ಬದಿಗಿಟ್ಟು ರಂಭಾಪುರಿ ಶ್ರೀಗಳ ಹೇಳಿಕೆಯನ್ನು ವಿಶ್ಲೇಷಿಸೋಣ. ಇದಕ್ಕೆ ಪೂರಕವಾಗಿ ಮುಂದಿನ ಪುಟದಲ್ಲಿರುವ ಸಿದ್ಧಾಂತ ಶಿಖಾಮಣಿಯ ವ್ಯಾಖ್ಯಾನದ ಉಲ್ಲೇಖವನ್ನು ಓದಿ, ಪುನಃ ಈ ಲೇಖನ ಓದಿರಿ.

ಸಿದ್ಧಾಂತ ಶಿಖಾಮಣೌ

ಪರಿಚ್ಛೇದ: ೯

೧೦೮

[ಪೂಜನಾಚ್ಛಿವಭಕ್ತಸ್ಯ ಪುಣ್ಯಾ ಗತಿರವಾಪ್ಯತೇ।
ಅವಮಾನಾನ್ಮಹಾಘೋರೋ ನರಕೋ ನಾತ್ರ ಸಂಶಯ : ॥೧೬॥
ಶಿವಭಕ್ತೋ ಮಹಾತೇಜಾಃ ಶಿವಭಕ್ತಿ ಪರಾಙ್ಮುಖಾನ್ ।
ನ ಸ್ಪೃಶೇನ್ನೈವ ವೀಕ್ಷೇತ ನ ತೈಃ ಸಹ ವಸೇತ್ ಕ್ವಚಿತ್ ॥೧೭॥
ಯದಾ ದೀಕ್ಷಾ ಪ್ರವೇಶಃ ಸ್ಯಾಲ್ಲಿಂಗಧಾರಣಪೂರ್ವಕಂ।
ತದಾಪ್ರಭೃತಿ ಭಕ್ತೋಽಸೌ ಪೂಜಯೇತ್ ಸ್ವಾಗಮಸ್ಥಿತಾನ್ ॥೧೮॥
ಸ್ವಮಾರ್ಗಾಚಾರನಿರತಾಃ ಸಜಾತೀಯಾ ದ್ವಿಜಾಸ್ತು ಯೇ।
ತೇಷಾಂ ಗೃಹೇಷು ಭುಂಜೀತ ನೇತರೇಷಾಂ ಕದಾಚನ। ॥೧೯॥
ಸ್ವಮಾರ್ಗಾಚಾರವಿಮುಖೈರ್ಭವಿಭಿಃ ಪ್ರಾಕೃತಾತ್ಮಭಿಃ।
ಪ್ರೇಷಿತಂ ಸಕಲಂ ದ್ರವ್ಯಮಾತ್ಮಲೀನಮಪಿ ತ್ಯಜೇತ್ ॥೨೦॥

ಮಹಾತೇಜಸ್ವಿಯಾದ ಶಿವಭಕ್ತನು ಶಿವಭಕ್ತಿ ವಿಮುಖರಾದ ಜನರನ್ನು ಮುಟ್ಟಬಾರದು; ನೋಡಬಾರದು; ಅವರೊಡನೆ ಸ್ವಲ್ಪ ಕಾಲವಾದರೂ ವಾಸಮಾಡಬಾರದು. ॥೧೭॥ ಲಿಂಗಧಾರಣಪೂರ್ವಕವಾದ ಶಿವದೀಕ್ಷೆಯು ಎಂದು ಆಗುವುದೋ, ಅಂದಿನಿಂದ ಪ್ರತಿದಿವಸವೂ ಭಕ್ತನು ವೀರಶೈವಾಗಮ ಪ್ರಕಾರವಾಗಿ ಆಚರಿಸುವ ಪೂಜ್ಯ ಗುರು ಸ್ಥಲ ಮಾಹೇಶ್ವರರನ್ನು ಪೂಜಿಸಬೇಕು. ॥೧೮॥ ತಮ್ಮ ತಮ್ಮ ಜಾತಿ ಧರ್ಮಾನುಸಾರವಾಗಿ ಆಚಾರದಲ್ಲಿ ನಿಷ್ಠರಾದ ವೀರಶೈವದ್ವಿಜರು ಅಂದರೆ ವೀರಶೈವ ಬ್ರಾಹ್ಮಣ-ವೀರಶೈವ ಕ್ಷತ್ರಿಯ - ವೀರಶೈವ ವೈಶ್ಯರು ತಮ್ಮ ತಮ್ಮ ಜಾತಿಯ ಜನರ ಮನೆಗಳಲ್ಲಿಯೇ ಭೋಜನವನ್ನು ಮಾಡಬೇಕಲ್ಲದೆ ಇತರರ ಮನೆಗಳಲ್ಲಿ ಭೋಜನ ಮಾಡಬಾರದು. ವೀರಶೈವ ಕ್ಷತ್ರಿಯ- ವೀರಶೈವ ವೈಶ್ಯರು - ವೀರಶೈವ ಬ್ರಾಹ್ಮಣರಲ್ಲಿ ಭೋಜನ ಮಾಡಬೇಕಲ್ಲದೆ, ಬ್ರಾಹ್ಮಣರು ಕ್ಷತ್ರಿಯ ವೈಶ್ಯರಲ್ಲಿ ಭೋಜನ ಮಾಡಬಾರದು. "ಶಿವೋಕ್ತಾಂ ಜಾತಿಮರ್ಯಾದಾಂ ಯೋತೀತ್ಯ ಭುವಿವರ್ತತೇ ! ಸಚಂಡಾಲ ಇತಿ ಜ್ಞೇಯಃ ಸರ್ವಕರ್ಮಬಹಿಷ್ಕೃತಃ ॥ " ಶಿವನಿಂದ ಹೇಳಲ್ಪಟ್ಟ ಜಾತಿಮರ್ಯಾದೆಯನ್ನು ಯಾವನು ಮೀರಿ ನಡೆಯುವನೋ ಅವನು ಚಂಡಾಲನೂ ಸರ್ವಕರ್ಮಬಹಿಷ್ಕೃತನೂ ಆಗುವನು; ಎಂದು ಶಿವಾಗಮಗಳು ಸಾರುತ್ತಿರುವುದರಿಂದ ವೀರಶೈವಮತೀಯರು ತಮ್ಮ ತಮ್ಮ ಜಾತಿಧರ್ಮದಂತೆ ವರ್ತಿಸಬೇಕಲ್ಲದೆ ಅದಕ್ಕೆ ವಿರುದ್ಧವಾಗಿ ವರ್ತಿಸಿ ನರಕಭಾಗಿಗಳಾಗಬಾರದು ॥ ೧೯॥ ವೀರಶೈವಾಚಾರ ವಿಮುಖರಾದ ಪ್ರಾಕೃತಭವಿಗಳು ಕಳುಹಿಸಿದ ಸಕಲ ಪದಾರ್ಥಗಳು ತನ್ನ ಸ್ವಾಧೀನದಲ್ಲಿದ್ದರೂ ಅವುಗಳನ್ನು ಮುಟ್ಟಬಾರದು. ॥೨೦॥]

ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಆರಂಭವಾದ ಶರಣ ಪರಂಪರೆ ನಿರಾತಂಕವಾಗಿ ಸಾಗಿ ಬರುತ್ತ ಎಲ್ಲಾ ಜಾತಿ ಮತ ಪಂಗಡಗಳವರ ದೀಕ್ಷೆ ಪಡೆದು ಭಕ್ತ, ಗುರು, ಜಂಗಮ, ಮಠ-ಪೀಠಾಧೀಶರಾಗುತ್ತ ಬಂದರು. ಆ ಎಲ್ಲ ಮಹಾನುಭಾವರಿಂದ ಲಿಂಗಾಯತ ಧರ್ಮ, ಲಿಂಗಾಯತ ಸಮಾಜ ಹಬ್ಬಿ ಹಸರಿಸಿದವು. ಆಗ ಮೊದಲನೆಯ ಶನಿಯಾಗಿ ಒಕ್ಕರಿಸಿದ್ದು ಮೈಸೂರು ಜಿಲ್ಲೆಯ ನಾಗನೂರು ಹಿರೇಮಠದ ಕಾಶೀನಾಥ ಶಾಸ್ತ್ರಿ ಇದ್ದಕ್ಕಿದ್ದ ಹಾಗೆಯೇ ಸ್ಥಾವರ ಲಿಂಗೋದ್ಭವ ರೇಣುಕಾಚಾರ್ಯರನ್ನು ಹುಟ್ಟಿಸಿದ ಈ ರೇಣುಕ-ಜನಕ ಲಿಂಗಾಯತರೊಳಗಣ ಉಪ ಪಂಗಡಗಳನ್ನು ವೀರಶೈವ ಪದವನ್ನು ತಂದು ತೂರಿಸುವ ಮೂಲಕ, ವರ್ಣಾಶ್ರಮದ ಆಧಾರದ ಮೇಲೆ ವರ್ಗೀಕರಿಸಲು

ಯತ್ನಿಸಿದ ಕುಮತಿ. ನಾನು ಎಷ್ಟೋ ಬಾರಿ ಬರೆದಿದ್ದೇನೆ. ಸಿದ್ಧಾಂತ ಶಿಖಾಮಣಿಗೆ ಬರೆದ ಈ ಕೃತ್ರಿಮ ವ್ಯಾಖ್ಯಾನದಲ್ಲಿ ವೀರಶೈವ ದ್ವಿಜ, ವೀರಶೈವ ಕ್ಷತ್ರಿಯ, ವೀರಶೈವ ವೈಶ್ಯ ಈ ಪದಗಳು ಮೂಲ ಶ್ಲೋಕಗಳಲ್ಲಿಲ್ಲ. "ಸಜಾತೀಯ ದ್ವಿಜ" ಎಂದು ಬಳಸಿದ್ದಾರೆ. ಅಂದಾಗ ಈ ವೀರಶೈವರು ತಮ್ಮ ಧರ್ಮೀಯರಲ್ಲಿ ವೀರಶೈವ ದ್ವಿಜ, ಕ್ಷತ್ರಿಯ, ವೈಶ್ಯ ಎಂದು ಹುಡುಕುತ್ತಾರೆ. ಲಿಂಗಾಯತ ಧರ್ಮಗುರು ಬಸವಣ್ಣನವರ ಪ್ರಕಾರ

★ ಆವ ಕುಲವಾದಡೇನು ಲಿಂಗವಿದ್ದವನೆ ಕುಲಜನು !
ಕುಲವನರಸುವರೆ ಶರಣರಲ್ಲಿ, ಜಾತಿ ಸಂಕರನಾದ ಬಳಿಕ ?
ಒಕ್ಕುವ ಕೊಂಬೆನವರಲ್ಲಿ, ಕೂಸ ಕೊಡುವೆ,
ಲಿಂಗದೇವಾ, ನಂಬುವೆ ನಿಮ್ಮ ಶರಣರನು. -ಬ.ವ.ದೀ-715

★ ದೇವಾ, ದೇವಾ, ಬಿನ್ನಪ, ಅವಧಾರು :
ವಿಪ್ರ ಮೊದಲು ಅಂತ್ಯಜ ಕಡೆಯಾಗಿ
ಭಕ್ತರಾದವರನೆಲ್ಲರನೊಂದೆ ಎಂಬೆ;
ಹಾರುವ ಮೊದಲು ಶ್ವಪಚ ಕಡೆಯಾಗಿ
ಭವಿಯಾದವರನೆಲ್ಲರನೊಂದೆ ಎಂಬೆ :
ಈ ಹೀಂಗೆಂದು ನಂಬುವುದೆನ್ನ ಮನವು.
ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳಡೆ,
ನೀನಂದೇ ಮೂಗ ಕೊಯ್ಯಿ, ಲಿಂಗದೇವ. -ಬ.ವ.ದೀ-708

ಅಂದಾಗ ರಂಭಾಪುರಿ ಮಠದವರು, ಕಾಶೀನಾಥ ಶಾಸ್ತ್ರಿಗಳು ಪ್ರತಿಪಾದಿಸುವ ವರ್ಣಾಶ್ರಮ ಆಧಾರಿತ ವೀರಶೈವಕ್ಕೂ ಸಮಾನತೆ ಬೋಧಿಸುವ ಲಿಂಗಾಯತ ಧರ್ಮಕ್ಕೂ ಆಡಿಗೂ ಆನೆಗೂ ಇರುವ ಅಂತರವಿದೆ ಎಂಬುದನ್ನು ಲಿಂಗಾಯತ ಮಂದಮತಿಗಳು ಈಗಲಾದರೂ ಅರಿಯಬಹುದೆ?

ಒಂದು ಕಾಲದಲ್ಲಿ ಬರೆಸಿದ ಪುಸ್ತಕದಲ್ಲಿ ಅಯ್ಯನೋರು ವೀರಶೈವ ದ್ವಜರೆಂದು, ಪಂಚಮಸಾಲಿಯವರು ವೀರಶೈವ ಕ್ಷತ್ರಿಯರೆಂದು, ಬಣಜಿಗರು ವೀರಶೈವ ವೈಶ್ಯರೆಂದು, ಉಳಿದೆಲ್ಲ ಲಿಂಗಾಯತ ಒಳಪಂಗಡಗಳಾದ ಸಾದರು, ರೆಡ್ಡಿ ಗಾಣಿಗರು, ಕುಂಬಾರರು, ಮಡಿವಾಳವರು, ನೊಳಂಬರು ಇತ್ಯಾದಿ ಎಲ್ಲರೂ ಶೂದ್ರ ವೀರಶೈವರೆಂದು ಪಂಚಪೀಠಗಳವರು ಪ್ರಚಾರ ಮಾಡಿದರಂತೆ. ಭದ್ರಾವತಿ ಜಿನಕೇರಿ ಮುರಿಗೆಪ್ಪನವರು ಶರಣ ಸಂಸ್ಕೃತಿಯ ಪ್ರತಿಪಾದಕರು, ಲಿಂಗಾಯತರಲ್ಲಿ ಜವಳಿಯವರು. ಬಾಳೇ ಹೊನ್ನೂರು ಮಠದಿಂದ ಮುದ್ರಣಗೊಂಡ ಇಂಥ ಪುಸ್ತಕ ಓದಿ ತಪ್ಪರಾಗಿ ಒಂದು ಬಸ್ ಜನರೊಡನೆ ಹೋದಂತೆ. ಗುರು ಲಿಂಗ ಜಂಗಮ ಪ್ರೇಮಿಗಳಾದ ಇವರು ಮಠದ ಸ್ವಾಮಿಗಳು ಬಂದಾಗ ಅಪಾರ ಸೇವೆ ಮಾಡುವವರು.

"ಬುದ್ಧಿ, ದ್ವಿಜರು ದ್ವಿಜರಲ್ಲೇ ಅದೂ ಬ್ರಾಹ್ಮಣ ಬ್ರಾಹ್ಮಣರಲ್ಲಿ ಕ್ಷತ್ರಿಯರು ಅವರಲ್ಲಿ, ವೈಶ್ಯರು ವೈಶ್ಯರಲ್ಲಿ ಉಣ್ಣಬೇಕು. ಬ್ರಾಹ್ಮಣರು ಶೂದ್ರರಲ್ಲಿ ಉಣ್ಣಬಹುದೆ ?" ಮುರಿಗೆಪ್ಪನವರ ಪ್ರಶ್ನೆ

"ಇಲ್ಲ, ಬರುವುದಿಲ್ಲ." (ಆಗಿನ) ರಂಭಾಪುರಿ ಶ್ರೀಗಳ ಉತ್ತರ

"ಆಕಸ್ಮಾತ್ ಉಂಡರೆ ಏನಾಗುತ್ತೆ?"

"ಬ್ರಾಹ್ಮಣನು ಪತಿತನಾಗುತ್ತಾನೆ. ಶುದ್ಧಿ ಮಾಡಬೇಕು." ಸ್ವಾಮಿಗಳ ಉತ್ತರ ನೀವು ದ್ವಿಜ ವೀರಶೈವರು ಅಂದರೆ ಮಹೇಶ್ವರರು ನಿಮ್ಮ ಪ್ರಕಾರ ನಾವು ಶೂದ್ರ ವೀರಶೈವರು. ಎಷ್ಟೋ ಸಲ ನಮ್ಮಲ್ಲಿ ಉಂಡಿದ್ದೀರಿ. ಇದರಿಂದ ಅಶುದ್ಧರಾಗಿದ್ದೀರಿ. ನಿಮ್ಮನ್ನು ಶುದ್ಧೀಕರಿಸಬೇಕು. " ತಾವು ಸೃಷ್ಟಿಸಿದ ಬಾಣ

ವಿರಕ್ತ ಮಠಗಳು ಅಯ್ಯನೋರು, ಬಣಜಿಗರು, ಪಂಚಮಸಾಲೆಯವರ ಶ್ರೇಣೀಕೃತ ಶ್ರೇಷ್ಠತೆ ಪ್ರತಿಪಾದಿಸ ತೊಡಗಿದಾಗ ದಿಗ್ಭ್ರಾಂತರಾದ ಉಳಿದ ಲಿಂಗಾಯತರು ತಮ್ಮ ತಮ್ಮ ಪಂಗಡಗಳ ಉದ್ಧಾರಕ್ಕೆ ಜಾತಿಯ ಮಠಗಳನ್ನು ಮಾಡಿಕೊಂಡರು.

ಕಲ್ಯಾಣ ಕಿರಣದಲ್ಲಿ ಒಮ್ಮೆ ಶರಣ.ಎಸ್.ಟಿ.ಚಂದ್ರಶೇಖರಪ್ಪನವರ ಪತ್ರ ಮುದ್ರಣಗೊಂಡಿತ್ತು. ಅವರು ವಿದ್ಯಾರ್ಥಿ ಇದ್ದಾಗ ನೊಳಂಬರಾದ ಕಾರಣ ಅವರಿಗೆ ಗುಬ್ಬಿ ತೋಟದಪ್ಪ ಹಾಸ್ಟೆಲಿನಲ್ಲಿ ಪ್ರವೇಶ ನಿರಾಕರಿಸಿದರು ಎಂಬ ಬಗ್ಗೆ ಇಂಥ ಸಣ್ಣತನವನ್ನು ಅಯ್ಯನವರು, ಬಣಜಿಗರು, ಪಂಚಮಸಾಲೆಯವರ ಒಕ್ಕೂಟ ಪ್ರದರ್ಶಿಸಿದಾಗ ತಮ್ಮ ಜಾತಿಗಳ ಜನರನ್ನು ಮುಂದೆ ತರಲು ಸಾದರು, ನೊಳಂಬರು, ಸಜ್ಜನರು, ರೆಡ್ಡಿಯವರು, ಕುರುಹಿನ ಶೆಟ್ಟರು ಮುಂತಾದವರು ಉಪ ಜಾತಿಗಳ ಸಂಘಟನೆ ಮಾಡಿಕೊಳ್ಳುವ ಅನಿವಾರ್ಯತೆ ಎದುರಿಸಿದರು. ಇಂಥ ಪರಿಕಲ್ಪನೆ ಮತ್ತು ಪರಿಹಾರ ಮಾರ್ಗದ ಸ್ಪಷ್ಟ ವಿರೋಧಿಗಳು ಪೂಜ್ಯ ಅಪ್ಪಾಜಿ ಮತ್ತು ನಾವು. ಪಂಚಮಸಾಲೆಯವರ ಪೀಠ ಮಾಡಿ ಪೂಜ್ಯ ಅಪ್ಪಾಜಿಯವರನ್ನು ಅದಕ್ಕೆ ಅಧಿಕಾರಿ ಮಾಡಬೇಕೆಂದು ಕೆಲವರು ಬೇಡಿಕೆ ಇಟ್ಟಾಗ. ಏಕೆ ನಾನು ಬರೀ ಪಂಚಮಸಾಲೆಯವರಿಗಷ್ಟೆ ಗುರುವಾಗಬೇಕು? ಅರ್ಹತೆಯಿಂದ ಎಲ್ಲ ಸಮಾಜಕ್ಕೆ ಗುರು.'' ಎಂದು ನಿರಾಕರಿಸಿದರು. ಹುಬ್ಬಳ್ಳಿಯ ಜಿಗಳೂರು ಶಿವಪ್ಪನವರು ಉಪಜಾತಿಯ ಸಂಘ ಮಾಡಿ ನಮ್ಮನ್ನು ಆಹ್ವಾನಿಸಲು ಬಂದಾಗ ನಾನು ಸ್ಪಷ್ಟವಾಗಿ ಹೇಳಿದೆ. ''ಲಿಂಗಾಯತ ಸಮಾಜವನ್ನು ಒಂದುಗೂಡಿಸಬೇಕಾಗಿದೆ. ಒಡೆಯುವ ಕೆಲಸ ಬೇಡ.''

ಒಂದು ಕಟು ಸತ್ಯವನ್ನು ಒಳಜಾತಿಗಳ ಮಠಗಳ ನಿರ್ಮಾಣದಲ್ಲಿ ನಾವು ಅರಿಯಬೇಕಾಯಿತು. ಆದರಿಷ್ಟೆ, ಶೂದ್ರತ್ವದಿಂದ ಇವರನ್ನು ಹೊರತಂದು ಶರಣರ ಸ್ಥಾನಕ್ಕೆ ಏರಿಸಿದ ಧರ್ಮಗುರು ಬಸವಣ್ಣನವರನ್ನು ಕೈ ಬಿಟ್ಟು, ಮರೆತು ಈ ಒಳಜಾತಿಗಳವರು ಮತ್ತೆ ಆ ಸಿಂಹಾಸನ, ಈ ಸಿಂಹಾಸನ ಎಂಬ ಭ್ರಾಂತಿಗೆ ಒಳಗಾದುದು, ಪಂಚಾಚಾರ್ಯರನ್ನು ಅನುಕರಣ ಮಾಡತೊಡಗಿದ್ದು, ಶರಣ ಸಂಸ್ಕೃತಿಯ ಪದ ಬಿಟ್ಟು ಶಿವಾಚಾರ್ಯ ಸಂಸ್ಕೃತಿಯ ಬೆನ್ನು ಹತ್ತಿದ್ದು ಮಾತ್ರ ವಿಷಾದನೀಯ!

20ನೆಯ ಶತಮಾನದಲ್ಲಿ ಏನೆಲ್ಲ ಅವಾಂತರ, ಅನಾಹುತ ಮಾಡಿದ, ಸೊಲ್ಲಾಪುರದಲ್ಲಿ ಧರ್ಮಗುರು ಬಸವಣ್ಣನವರ ಭಾವ ಚಿತ್ರವನ್ನು ಆನೆ ಕಾಲಿಗೆ ಹಾಕಿ ತುಳಿಸಿದ ಪಂಚಾಚಾರ್ಯ ಪೀಠಸ್ಥರು ಈಗ ಬಸವಣ್ಣನವರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿರುವುದು ಬಸವ ತತ್ತ್ವವನ್ನು ನುಂಗಿ ನೀರು ಕುಡಿಯಲಿಕ್ಕೆ.
ಏನೇ ಇರಲಿ, ಉಪ ಪಂಗಡಗಳ ಪ್ರತ್ಯೇಕತೆಯಿಂದ ಧರ್ಮ- ಸಮಾಜಗಳಿಗೆ ಸುಖವಿಲ್ಲ, ಭವಿಷ್ಯವೂ ಇಲ್ಲವೆಂದು ನಾವು ಇವುಗಳಿಂದ ಜನರನ್ನು ಹೊರತರುವ ಕೆಲಸವನ್ನು ಶರಣ ಮೇಳ, ಕಲ್ಯಾಣ ಪರ್ವದ ಮೂಲಕ ಮಾಡುತ್ತಿದ್ದೇವೆ.

ಇನ್ನು ಜಾತಿಗೊಂದೊಂದು ಮಠ ಮಾಡುತ್ತಿರುವ ಮಠಾಧಿಪತಿಗಳನ್ನು ಟೀಕಿಸುವ ಮಾತು ರಂಭಾಪುರಿ ಶ್ರೀಗಳದಾಗಿದೆ. ಚಿತ್ರದುರ್ಗ ಶ್ರೀಗಳ ಹೆಸರು ಹೇಳದೆ ಟೀಕಿಸಿದ್ದಾರೆ. ಸದ್ಯ ಹಿಂದು ಸಮಾಜದೊಳಗಣ ಉಪಜಾತಿಗಳಿಗೆ ಮಠಗಳನ್ನು, ಸ್ವಾಮಿಗಳನ್ನು ಮಾಡುತ್ತಿರುವ ಪ್ರಯತ್ನ ಅವರದೇ ಇರುವುದರಿಂದ ಚಿತ್ರದುರ್ಗ ಶ್ರೀಗಳೇ ರಂಭಾಪುರಿಯವರ ಟೀಕೆಯ ಗುರಿ ಎಂದು ಊಹಿಸೋಣ.

ಈ ಟೀಕೆ ಮಾಡಲು ರಂಭಾಪುರಿಯವರಿಗೆ ಯಾವ ಹಕ್ಕಿದೆ? ಒಮ್ಮೆ ಐದೂ ಜನ ಪೀಠಾಧೀಶರು ಸೇರಿ ಶ್ರೀ ವಾಜಪೇಯ ಪ್ರಧಾನಿ ಇದ್ದಾಗ ಜಂಗಮರಿಗೆ ಪರಿಶಿಷ್ಟ ಜಾತಿಯವರ ಸವಲತ್ತು ಕೊಡಬೇಕು ಎಂದು ಸ್ವತಃ ಸಹಿ ಮಾಡಿ ಮನವಿ ಸಲ್ಲಿಸಿದ್ದಾರೆ. ಅಂದರೆ ಅವರ ಒಲವು ಜಂಗಮ ಜಾತಿಗೆ ಸವಲತ್ತು ಒದಗಿಸಿಕೊಡುವುದೇ ಆಗಿದೆ. ಹಣ ಮಾತ್ರ ಗಳಿಸಿಕೊಂಡು ಬುದ್ಧಿಯನ್ನು ಬಲಗೊಳಿಸಿಕೊಳ್ಳದ ಕೆಲವು ಪಂಚಮಸಾಲೆ ಮುಖಂಡರು ಪಂಚಪೀಠಾಧೀಶರ ಈ ಒಳಸಂಚನ್ನರಿಯದೆ (ಪಲ್ಲಕ್ಕಿ ಉತ್ಸವದ ಮೂಲಕ ಅಷ್ಟಿಷ್ಟು ಸಂಪಾದನೆ ಮಾಡಿಕೊಂಡು ತಣಿಯುತ್ತಲೂ ಇರಬಹುದು.)

''ಸ್ವಾಮಿ, ನೀವು ಜಂಗಮ ಜಾತಿಯ ಉದ್ಧಾರಕರು. ನಮ್ಮ ನಿಮ್ಮ ನಡುವೆ ಪಂಚ ಎಂಬ ಪದ ಬಿಟ್ಟರೆ ಏನೂ ಸಾಮ್ಯವಿಲ್ಲ. ಹೋಗಲಿ ಇಷ್ಟು ವರ್ಷಕಾಲ (ಅಜ್ಞಾನದಿಂದ) ಪಲ್ಲಕ್ಕಿ ಹೊತ್ತಿದ್ದೇವೆ. ನಮ್ಮ ಪಂಚಮಸಾಲಿ ಜಾತಿಯ ವಟುವನ್ನು ನಿಮ್ಮ ಪೀಠಗಳಲ್ಲಿ ಯಾವುದಕ್ಕಾದರೂ ಅಧಿಕಾರಿ (ಜಗದ್ಗುರು) ಯನ್ನಾಗಿ ಮಾಡುತ್ತೀರಾ?.'' ಎಂಬ ಸವಾಲು ಹಾಕುವ ಧೈರ್ಯ ಅಥವಾ ಬುದ್ಧಿವಂತಿಕೆ ಅನೇಕರಲ್ಲಿ ಮೂಡದಿರುವುದು ಆಶ್ಚರ್ಯಕರ. ಲಿಂಗಾಯತರಲ್ಲೇ ಎಲ್ಲ ಪಂಗಡಗಳ ಅಥವಾ ಒಟ್ಟಾರೆ ಸಮಾಜದ ಹಿತಾಸಕ್ತಿ ಕಾಯದ ಈ ಗುರುಗಳು ಇನ್ನು ಲಿಂಗಾಯತೇತರ ಜಾತಿಗಳ ಏಳ್ಗೆಗೆ ಯತ್ನಿಸುವರೆ?

ಲಿಂಗಾಯತ ಧರ್ಮ ಹುಟ್ಟಿದ್ದೇ ಸರ್ವರ ಸರ್ವಾಂಗೀಣ ಉದ್ಧಾರಕ್ಕಾಗಿ; ಆದರೆ ಸಂಸ್ಥಾಪಕರಾದ ಬಸವಣ್ಣನವರ ಆಶಯಕ್ಕೆ ವಿರುದ್ಧವಾಗಿ ಬಹುಪಾಲು ಲಿಂಗಾಯತರು ಹೊರಗಿನಿಂದ ಯಾರನ್ನು ಸ್ವಾಗತಿಸುತ್ತಿಲ್ಲ. ತಾನಾಗಿ ಬಂದವರನ್ನೂ ಆದರಿಸುವುದಿಲ್ಲ. ಧರ್ಮಗುರು ಬಸವಣ್ಣನವರನ್ನು ಶ್ರದ್ಧಾಕೇಂದ್ರವಾಗಿಟ್ಟುಕೊಂಡು ಬೇರೆ ಬೇರೆ ಜಾತಿಗಳವರು ತಮಗೊಬ್ಬ ಗುರುವನ್ನು ಆಯ್ದುಕೊಂಡರೆ, ಮಠವನ್ನು ಕಟ್ಟಿಕೊಂಡರೆ ಅದರಲ್ಲಿ ತಪ್ಪೇನಿದೆ ? ಇಂದು ಧರ್ಮ ಸಂಸ್ಕಾರದ ಅಗತ್ಯ ಎಲ್ಲರಿಗೂ ಇದೆ. ತಾವೊಂದು ಧರ್ಮದ ನಿಧಿಯನ್ನು ಹೊಂದಿರುವ ಲಿಂಗಾಯತರು ಅದನ್ನು ಇನ್ನಿತರರೊಡನೆ ಹಂಚಿಕೊಳ್ಳಬೇಕಿತ್ತು. ಹಾಗೆ ಮಾಡದೆ ಇರುವುದರಿಂದ ಇನ್ನಿತರ ಜಾತಿ ಜನಾಂಗಗಳವರು ಅಪ್ಪ ಬಸವಣ್ಣನವರ ಮಾತೃ ಹೃದಯ, ಆದರ್ಶ ಸಾಧನೆ-ಸಂದೇಶಗಳಿಗೆ ಮಾರು ಹೋಗಿ ತಮಗೆ ಧರ್ಮಸಂಸ್ಕಾರ ಕೊಡಲು ಗುರುವನ್ನು ಆಯ್ದುಕೊಂಡರೆ ತಪ್ಪೇನು ? ಕಳಕಳಿಯಿಂದ ಆ ಗುರುಗಳು ತಮ್ಮ ಜಾತಿಯ ಜನರನ್ನು ಬಸವ ಪಥದಲ್ಲಿ ಮುನ್ನಡೆಸಿದರೆ ತಪ್ಪೇನಿದೆ? ತಾವೂ ಊಟಕ್ಕಿಡದೆ (ಅರ್ಥಾತ್ ದೀಕ್ಷೆ ನೀಡದೆ) ಇನ್ನಿತರರು ಹಸಿದವರಿಗೆ ಊಟ ಕೊಡುತ್ತಿದ್ದರೆ ಅದನ್ನು ಟೀಕಿಸುವುದು ಅಮಾನವೀಯವಲ್ಲವೆ ? ರಂಭಾಪುರಿ ಶ್ರೀಗಳು ಮತ್ತು ಇತರ ಪಂಚಪೀಠಾಧೀಶರು ಇನ್ನಿತರ ಜಾತಿ ಜನಾಂಗದವರನ್ನು ಗುರು ಮಾಡುವುದು ಅತ್ತಲಿರಲಿ, ಲಿಂಗಾಯತರಲ್ಲೇ ಇರುವ ಉಪಪಂಗಡಗಳವರು, ಕನಿಷ್ಟ ಪಕ್ಷ ಇವರನ್ನು ಹೆಗಲ ಮೇಲೆ ಹೊತ್ತು ಮೆರೆಸುವ ಪಂಚಮ ಸಾಲೆಯವರನ್ನಾದರೂ ತಮ್ಮ ಪೀಠಕ್ಕೆ ಉತ್ತರಾಧಿಕಾರಿಯನ್ನಾಗಿ ಆಯ್ಕೆ ಮಾಡಲಿ. ಆಗ ಇವರ ಮಾನವ ಧರ್ಮದ ಸ್ವರೂಪ ಜಗಜ್ಜಾಹೀರಾಗುತ್ತದೆ.

''ಜಾತಿಗೊಬ್ಬ ಮಠಾಧಿಪತಿಗಳನ್ನು ಮಾಡಿದಾಗ ಈ ರೀತಿಯ ವ್ಯವಸ್ಥೆಯಿಂದ ಸಾಮಾಜಿಕ ಸಮಷ್ಟಿಗೆ ಧಕ್ಕೆಯುಂಟಾಗಲಿದೆ.'' ಎಂದಿದ್ದಾರೆ. ರಂಭಾಪುರಿ ಶ್ರೀಗಳು.

ಜಾತಿ ಪಂಗಡಗಳ ವ್ಯವಸ್ಥೆ ಆಳವಾಗಿ ಬೇರು ಬಿಟ್ಟಿರುವುದರಿಂದ ಈ ಕಟು ಸತ್ಯವನ್ನರಿತು ಅದರ ಮೂಲಕವೇ ಪರಿಹಾರ ಸೂತ್ರವನ್ನು ಹುಡುಕುವುದು ಅನಿವಾರ್ಯವೆನಿಸೀತು. ರಂಭಾಪುರಿ ಶ್ರೀಗಳ ಆದಿಯಾಗಿ ಈವರೆಗೂ ಅನೇಕ ವಿರಕ್ತರು ಸಹ ಜಂಗಮವನ್ನು ಒಂದು ಜಾತಿಯನ್ನಾಗಿ ವಿಕೃತಗೊಳಿಸಿ ಅದರ ಆಧಿಕ್ಯವನ್ನು ಮೆರೆಸಿ, ಬ್ರಾಹ್ಮಣ ಧರ್ಮವು ಕ್ಷತ್ರಿಯ ವೈಶ್ಯರಿಗೆ ದ್ವಿಜತ್ವವನ್ನು ಕೊಟ್ಟು ಶೂದ್ರರನ್ನು ಕಡೆಗಣಿಸಿದಂತೆ | ಬಣಜಿಗರು ಪಂಚಮಸಾಲೆಯವರನ್ನು ಮೇಲುಗಟ್ಟಿ ಉಳಿದ ಲಿಂಗಾಯತರನ್ನೇ ಕಡಗಣಿಸಿದಾಗ ಆ ಜಾತಿಗಳವರೆಲ್ಲ ಪ್ರತ್ಯೇಕ ಗುರುಗಳ, ಮಠಗಳ ವ್ಯವಸ್ಥೆ ಮಾಡಿಕೊಂಡರು. ಅದೇ ರೀತಿ ಬ್ರಾಹ್ಮಣರು ಇನ್ನಿತರರನ್ನು ವರ್ಗೀಕರಿಸಿ ಕಡೆಗಣಿಸಿದ್ದರಿಂದ ಹಿಂದು ಸಮಾಜದೊಳಗಣ ಎಲ್ಲ ಜಾತಿಗಳವರೂ ಪ್ರತ್ಯೇಕ ಗುರುಗಳ, ಮಠ ಪೀಠಗಳ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಾರೆ. ಹೀಗಿರುವಾಗ ಹಿಂದೂ ಸಮಾಜದೊಳಗೆ ಶೂದ್ರರಾಗಿಯೇ ಇದ್ದು ಮಠಗಳನ್ನು ಮಾಡಿಕೊಂಡು ವೈದಿಕ ವಿಧಿವಿಧಾನಗಳನ್ನು ಅನುಕರಿಸುವ ಬದಲು ಈ ಜಾತಿಗಳವರು ಬಸವ ತತ್ತ್ವದ ಆಧಾರದ ಮೇಲೆ ಮಠಗಳನ್ನು. ಗುರುಗಳನ್ನು ಹೊಂದಿ ಶರಣ ಮಾರ್ಗದಲ್ಲಿ ನಡೆದರೆ ಅದು ಅಭಿನಂದನೀಯವಲ್ಲವೆ? ಈ ಕಾರ್ಯಕ್ಕೆ ಅಪ್ಪ ಬಸವಣ್ಣನವರೇ ಪ್ರೇರಕ ಶಕ್ತಿ. ಮತ್ತು ಲಿಂಗಾಯತ ಧರ್ಮೀಯರು ಹೆಮ್ಮೆ ಪಡಬೇಕು. ಇದಕ್ಕೆ ರಂಭಾಪುರಿ ಶ್ರೀಗಳು ಸಂಕಟಪಡುವುದೇಕೆ? ಜಾತಿ ಜಂಗಮರ ಹಿತಾಸಕ್ತಿಯ ಹೊರತು ಇತರರ ಬಗ್ಗೆ ಅವರಿಗೆ ಕಾಳಜಿಯೇ ಇಲ್ಲ ಅಂದಾಗ ಇತರರ ಗೊಡವೆಯಾದರೂ ಏತಕ್ಕೆ?

ಪಂಚಮ ಸಾಲೆಯವರಿಗೆ ಗುರುಪೀಠ

ಮತ್ತೊಂದು ಪತ್ರಿಕೆಯಲ್ಲಿ (ಮುಂಬಯಿಯಿಂದ ಹೊರಡುವ ಕರ್ನಾಟಕ ಮಲ್ಲ ಇರಬಹುದು; ಇಚಲಕರಂಜಿಯಲ್ಲಿ ನಾನು ಓದಿದ ನೆನಪು) ರಂಭಾಪುರಿ ಶ್ರೀಗಳು, ''ಪಂಚಮಸಾಲೆಯವರಲ್ಲಿ ಕೆಲವರು ಪ್ರತ್ಯೇಕ ಗುರುಪೀಠ ಸ್ಥಾಪಿಸುವ ಪ್ರೇರಣೆ ಹೊಂದಿದ್ದಾರೆ. ಪಂಚಪೀಠಾಧೀಶರು ಮತ್ತು ಪಂಚಮಸಾಲೆಯವರಲ್ಲಿ ಒಡಕು ಹುಟ್ಟಿಸುತ್ತಿದ್ದಾರೆ.'' ಎಂದು ಕಳವಳ ವ್ಯಕ್ತಪಡಿಸಿ ಹೇಳಿಕೆ ನೀಡಿದ್ದಾರೆ.

ಕೆಲವು ವರ್ಷಗಳ ಹಿಂದೆ ದಾವಣಗೆರೆಯ ಶರಣ ಹಳ್ಳೂರ ಸಿದ್ಧಪ್ಪನವರು, ಅಪ್ಪಟ ಬಸವ ಪಥಿಕರು, ಇಂಥ ಆಲೋಚನೆ ಇಟ್ಟಾಗ ನಾನು ಒಪ್ಪಲಿಲ್ಲ. ''ಬೇಡಿ, ಇಡೀ ಸಮಾಜ ಒಂದುಗೂಡಿಸಬೇಕು. ಈ ಗದ್ದಲ ಬೇಡ'' ಎಂದಿದ್ದೆ. ನಂತರ ಒಬ್ಬರು ಸ್ವಾಮಿಗಳು ಇಂಥ ಆಲೋಚನೆ ಇಟ್ಟಾಗ ಖಂಡಿತಾ ಬೇಡ ಎಂದಿದ್ದೆ. ಶ್ರೀ ಸಿದ್ಧಲಿಂಗ ದೇಸಾಯಿಯವರು ಇಂಥ ವಿಚಾರ ಹೇಳಿದರು, ''ನಾವೆಲ್ಲ ಬಸವ ಪಥಿಕರು. ಆದರೆ ಯಾವುದೇ ರೀತಿ ಸಂಬಂಧವಿಲ್ಲದಿದ್ದರೂ ಪಂಚ ಎಂಬ ಒಂದೇ ಒಂದು ಪದ ಹಿಡಿದು ಪಂಚಪೀಠಾಧೀಶರು ಮುಗ್ಧರು, ಅವಿದ್ಯಾವಂತರೂ ಆದ ಜನರನ್ನು ದಾರಿ ತಪ್ಪಿಸುವುದೇ ಅಲ್ಲದೆ ಪಂಚಮಸಾಲೆಯವರು ತಾವು ಪಂಚಪೀಠದ

ಅನುಯಾಯಿಗಳೆಂದು ಅಜ್ಞಾನದಿಂದ ಹೇಳುತ್ತಿದ್ದಾರೆ. ಅವರನ್ನು ಏನಾದರೂ ಮಾಡಿ ಪಂಚಪೀಠಾಧೀಶರ ಸಾಂಗತ್ಯ ಬಿಡಿಸಿ ಬಸವ ಪಥಕ್ಕೆ ಕರೆತರಬೇಕಾಗಿದೆ. ಆ ಉದ್ದೇಶದಿಂದ ಪಂಚಮಸಾಲೆಯವರಿಗೆ ಒಂದು ಗುರುಪೀಠ ಬೇಕೆಂದು ನನ್ನ ಅನಿಸಿಕೆ.''ಎಂಧರು ಅಂದಿನಿಂದ ನಾನೂ ಚಿಂತನೆಯಲ್ಲಿ ತೊಡಗಿದೆ. 21ನೆಯ ಶತಮಾನದ ಪ್ರಗತಿಪರ ಚಿಂತನೆಯ ಯುಗದಲ್ಲೂ ಇನ್ನೂ ಪಲ್ಲಕ್ಕಿ ಕಿರೀಟ-ಉಂಗುರಗಳ ಮೋಹದ ಗುರುಗಳು , ಪಲ್ಲಕ್ಕಿ ಹೊರುವ, ಹೊರಿಸುವ ಭಕ್ತರು ಇರುವುದು ಮೌಢ್ಯತೆಯ ಪ್ರತೀಕ. ಅಂಥ ಮನಸ್ಕರಿಗೆ ಧರ್ಮಗುರು ಬಸವಣ್ಣನವರ, ಶರಣರ ಆದರ್ಶಗಳು ಬೇಕಾಗಿಲ್ಲ. ಆದ್ದರಿಂದ ಅಂಥವರನ್ನು ಜಾಗೃತಗೊಳಿಸುವ ಶ್ರೀ ಸಿದ್ಧಲಿಂಗ ದೇಸಾಯಿಯವರ ಆಲೋಚನೆ ಸರಿ ಏನೋ ಎನ್ನಿಸಿತು. ಆದರಿಷ್ಟೇ ಲಿಂಗಾಯತರಲ್ಲಿರುವ ಈ ಒಳಪಂಗಡಗಳವರು ಸಮಾಜ ಹಿತ ದೃಷ್ಟಿಯಿಂದ ಗುರು, ಮಠ, ಪೀಠ ಮಾಡಿಕೊಂಡರೂ ಧರ್ಮಪಿತ ಬಸವಣ್ಣನವರನ್ನು ಶ್ರದ್ಧಾಕೇಂದ್ರವಾಗಿ ಇಟ್ಟುಕೊಳ್ಳುವುದನ್ನು ಮರೆಯಬಾರದು. ಹಿಂದು ಸಮಾಜದಲ್ಲಿ ಒಬ್ಬ ಮಹಾನ್ ಬಂಡಾಯಗಾರರಾದ ಬಸವಣ್ಣನವರಿಂದ ಸ್ಫೂರ್ತಿಗೊಂಡೇ ನೊಳಂಬ ಸಮಾಜದ ಕುಲಗುರು ಸಿದ್ಧರಾಮೇಶ್ವರ, ಪಂಚಮಸಾಲೆಯವರ ಆರಾಧ್ಯ ಮೂರ್ತಿ ಗುಡ್ಡಾಪುರ ದಾನಮ್ಮ, ಸಾದು ಸಮಾಜದ ಆರಾಧ್ಯ ಗುರು ಮರುಳಸಿದ್ಧರು, ರೆಡ್ಡಿ ಸಮಾಜದ ಕುಲದೇವತೆ ಹೇಮರೆಡ್ಡಿ ಮಲ್ಲಮ್ಮ, ಯೋಗಿವೇಮನ, ಜೇಡರ ದಾಸಿಮಯ್ಯ, ಶಿವದಾಸಿಮಯ್ಯ. ಇವರೆಲ್ಲರೂ ಒಂದು ರೀಲೆ ಬಂಡಾಯಗಾರರಾಗಿ ಆಯಾ ಜಾತಿಜನಾಂಗಗಳವರನ್ನು ಲಿಂಗಾಯತ ಧರ್ಮದ ಕಕ್ಷೆಗೆ ತಂದು ಶೂದ್ರತ್ವದ ಸಂಕೋಲೆ ಬಿಡಿಸಿದರು. ಇದನ್ನು ಲಿಂಗಾಯತ ಸಮಾಜದ ಒಳಪಂಗಡಗಳವರು ಎಂದೂ ಮರೆಯದೆ ಸಮಾಜವನ್ನು ಕಟ್ಟಬೇಕು. ಉಳಿದ ಮಠಗಳವರು ಅವರವರ ಜಾತಿಗಳವರನ್ನೇ ಗಮನದಲ್ಲಿಟ್ಟುಕೊಂಡು ಸಮ್ಮೇಳನಗಳನ್ನು ಮಾಡಿದರೇನಂತೆ ಶರಣ ಮೇಳ, ಕಲ್ಯಾಣ ಪರ್ವಗಳು ಎಲ್ಲರನ್ನು ಬೆಸೆಯುತ್ತಿವೆ ಎಂಬುದು ಅಭಿಮಾನದ ವಿಷಯವಲ್ಲವೆ ?

ಪರ್ಯಾಯ ಪದ ಬಳಕೆ

ಕೆಲವು ಮಠಾಧೀಶರು ಹಾಗೂ ಸಾಹಿತಿಗಳು ವೀರಶೈವ ಧರ್ಮಕ್ಕೆ ಬದಲಾಗಿ ಪರ್ಯಾಯ ಹೆಸರುಗಳನ್ನಿಟ್ಟು ವಿವಾದ ಸೃಷ್ಟಿಸಿ ಪ್ರಚಾರ ಪಡೆಯುತ್ತಿದ್ದಾರೆ. ಎಂದು ರಂಭಾಪುರಿ ಶ್ರೀಗಳು ಹೇಳಿದ್ದಾರೆ.

ವೀರಶೈವ ಪದಕ್ಕೂ ಲಿಂಗಾಯತಕ್ಕೂ ಯಾವ ಸಂಬಂಧವೂ ಇಲ್ಲ . ಒಂದು ಕಾಲದಲ್ಲಿ ಲಿಂಗಾಯತ ಸಮಾಜದೊಳಗಣ ಒಂದು ಚಿಕ್ಕ ಗುಂಪಾಗಿ ವೀರ ಶೈವವು ಸಂಬೋಧಿಸಲ್ಪಡುತ್ತಿತ್ತು.

1891 ರಲ್ಲಿ ನಡೆದ ಜನಗಣತಿಯಲ್ಲಿ, ಮೈಸೂರು ಸಂಸ್ಥಾನದ ಗಣತಿ Vol XXV, Part II, Imperial Tables XVI, ಸಂಪಾದಕರು ವಿ.ಎನ್.ನರಸಿಂಹ ಐಯ್ಯಂಗಾರ್, ಪುಟ 306 ಇದರಲ್ಲಿ ಲಿಂಗಾಯತ ಸಮುದಾಯದಲ್ಲಿನ ಜಾತಿಗಳನ್ನು ಉಲ್ಲೇಖಿಸಲಾಗಿದೆ. ABCD ಕ್ರಮದಲ್ಲಿ

1. ಆರಾಧ್ಯ
2. ಅಯ್ಯ
3. ಬಣಜಿಗ
4. ಬಣ್ಣದವ
5. ಬಸಳೆ
6. ಬವನೆ
7. ಗೌಡ ಲಿಂಗಾಯತ
8. ಗದ್ದಿಗೆಯವ
9. ಗೌಡಮನೆ
10. ಗೌಳಿಗ
11. ಗುರುಸ್ಥಲ
12. ಹಿರಿಸಾವೆ
13. ಜಂಗಮ
14. ಜ್ಯೋತಿ ಬಣಜಿಗ
15. ಕಾಮೋಡಿಗೊಂಡ
16. ಕರ್ತ ಪಾವಡ
17. ಕಾಯಕೋಳ
18. ಕೋರಿಶೆಟ್ಟಿ
19. ಮೊಳವ
20. ಮೇಲ್ ಪಾವಡ
21. ನೀರು ಮದಿನವ
22. ನೊಳಂಬ
23. ಪಂಚಾಚಾರಗೊಂಡ
24. ಪೇಟೆಮನೆ
25. ಸಾದ
26. ಸಜ್ಜನ
27. ಷಟಸ್ಥಲ
28. ಶಿವಮತ
29. ಶೀಲದವ
30. ತಮಿಳು ಜಂಗಮ
31. ತಮ್ಮಡಿ
32. ತೊಗಶೆಟ್ಟಿ
33. ತುರುಕಾನೆ ಬಣ[illegible]
34. ಒಡೇರ
35. ವೀರಶೈವ

(ಸಂಗ್ರಹ - ಶರಣ ಪಂಪನಗೌಡ, ಬಳ್ಳಾರಿ)

ಮದ್ರಾಸ್ ಸ್ಟೇಟ್‌ದ ಜನಗಣತಿ ವಿವರದಲ್ಲಿ ಪ್ರತ್ಯೇಕವಾಗಿ ವೀರಶೈವ ಬ್ರಾಹ್ಮಣ, ವೀರಶೈವ ಲಿಂಗಧಾರಿ ಎಂಬ ಎರಡು ಪದಗಳು ಇವೆ.

Castes and Tribes of Southern India, ಲಿಂಗಾಯತ್ ಎಂಬ ಶಿರೋನಾಮೆಯಡಿಯಲ್ಲಿ ಈ ಉಪಜಾತಿಗಳ ಉಲ್ಲೇಖವಿದೆ. Edgar Thurston ಬರೆದಿರುವ ಈ ಗ್ರಂಥದಲ್ಲಿ ಉಲ್ಲೇಖನೀಯವಾದ ಒಂದು ವಾಕ್ಯವಿದೆ. " If Lingayatism was an island thrown up within the boundless sea of Hinduism it would appear that the waters of the ocean are doing their utmost to undermine its solid foundations.

ನಿಸ್ಸೀಮವಾದ ಹಿಂದೂ ಸಾಗರದೊಳಗೆ ತೇಲುತ್ತಿರುವ ದ್ವೀಪದಂತಿದೆ ಲಿಂಗಾಯತ ಧರ್ಮ. ಹಿಂದೂ ಶರಧಿಯ ಅಲೆಗಳು ಇದರ ಭದ್ರವಾದ ತಳವನ್ನೇ ಮುಳುಗಿಸುವಂತೆ ತೋರುತ್ತಿದೆ.

ಎಂಥಾ ಕಟು ಸತ್ಯವನ್ನು ಸಾರುವ ಮಾತು. ನಿಜ, ವೈದಿಕ ಸಂಸ್ಕೃತಿಯ ಅಲೆಗಳ ಹೊಡೆತಕ್ಕೆ ಸಿಕ್ಕಿ ಕ್ರಾಂತಿಕಾರಿ ಲಿಂಗಾಯತ ಧರ್ಮ, ಶರಣ ಸಂಸ್ಕೃತಿ ಮುಳುಗುವ ದ್ವೀಪವಾಗಿದೆ. ಲಿಂಗದೇವನ ದಯೆ, ಬಸವ ಗುರುವಿನ ಆಶಯ; ಪೂರಾ ಮುಳುಗುವ ಮುನ್ನ ಜಾಗೃತಿ ಉಂಟಾಗಿದೆ. ಈಗ ಅದನ್ನು ಮೇಲೆತ್ತುವ ಕಾರ್ಯ ಭರದಿಂದ ಆಗಬೇಕಾಗಿದೆ.

ವೀರಶೈವ ಎಂಬ ಒಂದು ಚಿಕ್ಕ ಟಿಸಿಲು, ಉಪ ಪಂಗಡಕ್ಕೆ ಪರ್ಯಾಯ ಪದವನ್ನು ಯಾರೂ ಹುಡುಕುತ್ತಿಲ್ಲ. ಗುರು ಬಸವಣ್ಣನವರು ಸಂಸ್ಥಾಪಿಸಿದ ಲಿಂಗಾಯತ ಧರ್ಮಕ್ಕೆ ತಾತ್ವಿಕ ಹಿನ್ನೆಲೆಯ ಪರ್ಯಾಯ ಪದಗಳು ಇವೆ.

1. ಲಿಂಗಾಯತ ಧರ್ಮ

ದೇಹ ನಾಮ ಸೊಗಸದು ಲಿಂಗಾಯತಂಗೆ
ಮಾನವ ನಾನು ಸೊಗಸದು ಜಂಗಮ ಭಕ್ತಂಗೆ
ಅನ್ನ ನಾಮವನರಿಯ ಪ್ರಸಾದ ಸಮ್ಯಕ್ಕಾಕಿ ತ್ರಿವಿಧವೇಕಾರ್ಥವಾಯಿತು
ಕೂಡಲ ಚೆನ್ನಸಂಗಾ, ನಿಮ್ಮ ಶರಣಂಗೆ ॥ ಚನ್ನಬಸವಣ್ಣ - 1244

ಅಂಗದ ಮೇಲೆ ಸೃಷ್ಟಿಕರ್ತನ ಕುರುಹಾದ ಇಷ್ಟಲಿಂಗ ಧರಿಸುವ ಧರ್ಮವಾಗಿ ಇದು ಲಿಂಗಾಯತ ಧರ್ಮ.

2. ಬಸವ ಧರ್ಮ

ಅ)ಕರುಣಿ ಬಸವಾ, ಕಾಲಹರ ಬಸವಾ, ಕರ್ಮಹರ ಬಸವಾ,
ನಿರ್ಮಳ ಬಸವಾ, ಶಿವಜ್ಞಾನಿ ಬಸವಾ,
ನಿಮ್ಮ ಧರ್ಮವಯ್ಯಾ,- ಈ ಭಕ್ತಿಯ ಪಥವು
ಕರುಣಿ ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ. -ಸಿ.ವ : 653

ಆ)ನಾ ಮಾಡುವ ಭಕ್ತಿ ಬಸವಣ್ಣನದಯ್ಯಾ.
ನಾ ಮಾಡುವ ಯೋಗ ಬಸವಣ್ಣದಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ. -ಸಿ.ವ : 379

ಇ)ಭಕ್ತರ ಭಾವದಲ್ಲಿ ಸುಳಿವ ಸುಳುಹು,
ವಿರಕ್ತರ ಜ್ಞಾನದಲ್ಲಿ ಹೊಳೆವ ಕಳೆಯು, ನೀನೆಯಯ್ಯಾ !
ಸೂರ್ಯನ ಬೆಳಗಿನೊಳಗೆ ಸಚರಾಚರಪ್ರಾಣಿಗಳು ಸುಳಿವಂತೆ,
ನಮ್ಮ ಕಟ್ಟಿನ ನೇಮದ ನಿಷ್ಠೆ ನೀನೆಯಯ್ಯಾ.
ಆಮರೇಶ್ವರಲಿಂಗದ ಒಡಲು ಸಂಗನ ಬಸವಣ್ಣನೆಂಬುದನ್ನು
ಮಡಿವಾಳ ಮಾಚಿತಂದೆಗಳೆ ಬಲ್ಲರು ಕಾಣಾ ಸಂಗನ ಬಸವಣ್ಣ.(ಆಯ್ದಕ್ಕಿ ಮಾರಯ್ಯ 1185)

ಧರ್ಮ ಗುರು ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಕಾರಣ ಇದು ಬಸವ ಧರ್ಮ

3, ವಚನ ಧರ್ಮ :

ಅ) ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮಬಾರದಯ್ಯಾ.
ಎಮ್ಮ ವಚನದ ನೂರೆಂಟರಧ್ಯಯನಕ್ಕೆ
ಶತರುದ್ರೀಯ ಯಾಗ ಸಮಬಾರದಯ್ಯಾ.
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ
ಗಾಯತ್ರೀ ಲಕ್ಷಜಪ ಸಮಬಾರದಯ್ಯಾ,
ಕಪಿಲ ಸಿದ್ಧ ಮಲ್ಲಿಕಾರ್ಜುನಾ.

ಆ) ಭಕ್ತಿಯ ಕುಳವನು ಬಸವಣ್ಣನೇ ಬಲ್ಲನು.
ಪ್ರಸಾದದ ನೆಲೆಯನು ಬಸವಣ್ಣನೇ ಬಲ್ಲನು.
ಬಸವಣ್ಣ ನಡೆದುದೇ ಮಾರ್ಗ, ಅಖಿಳಗಣಂಗಳಿಗೆ.
ಬಸವಣ್ಣ ನುಡಿದುದೇ ವೇದ, ಮಹಾಪುರುಷರಿಗೆ.
ಬಸವಣ್ಣನನಾದಿ, ಲಿಂಗವಾದಿ ಎಂದರಿದೆನಾಗಿ,
ಬಸವಣ್ಣನ ನೆನವುತಿರ್ದೆನಯ್ಯಾ.
ಬಸವಣ್ಣನ ಪಾದವಿಡಿದೆನಾಗಿ, ಲಿಂಗವೇದಿಯಾದೆನು.
ಬಸವಣ್ಣನ ಬಾಗಿಲ ಕಾಯ್ದೆನಾಗಿ, ಪ್ರಸಾದ ಸಾಧ್ಯವಾಯಿತ್ತು.
ಬಸವಣ್ಣನ ಕರುಣದಿಂದ ಪ್ರಭುದೇವರ ನಿಲವ ಕಂಡೆನು.
ಬಸವಣ್ಣನ ಬೋಧೆಯಿಂದ ಜಂಗಮವೇ ಲಿಂಗವೆಂದರಿದೆನು.
ಆ ಜಂಗಮ ಮುಖದಿಂದಲ್ಲದೆ ಲಿಂಗತೃಪ್ತಿಯಾಗದು.
ಪ್ರಸಾದಸಿದ್ಧಿಯಾದಲ್ಲದೆ ಭವಂ ನಾಸ್ತಿಯಾಗದು.
ಇದು ಕಾರಣ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚನ್ನಮಲ್ಲಿಕಾರ್ಜುನದೇವಯ್ಯಾ
ನಿಮ್ಮ ಶರಣ ಬಸವಣ್ಣನ ನಂಬಿ,
ನಾನು ಕೆಟ್ಟು, ಬಟ್ಟಬಯಲಾಗಿ ಹೋದೆನಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ.

- (ಮರುಳ ಶಂಕರದೇವರು : 1120)

ವಚನ ಸಾಹಿತ್ಯದಲ್ಲಿ ಪ್ರತಿಪಾದಿತವಾದ ಕಾರಣ ಇದು ವಚನ ಧರ್ಮ. ಅದಕ್ಕೇ ಎಂ.ಆರ್.ಶ್ರೀನಿವಾಸ ಮೂರ್ತಿಯವರು "ವಚನ ಧರ್ಮ ಸಾರ" ಎಂದು ಹೆಸರಿಟ್ಟು ಪುಸ್ತಕ ಬರೆದುದು.

4. ಶರಣ ಧರ್ಮ

ಆದಿ ಗುರು ಬಸವಣ್ಣನವರು ನೆಟ್ಟ ಈ ಧರ್ಮದ ಸಸಿಯನ್ನು ಶರಣರು ವಚನ ಸಾಹಿತ್ಯದ ಜೀವಾಮೃತವನ್ನು ಎರೆದು ಪೋಷಿಸಿದ್ದಾರೆ. ಆದ್ದರಿಂದ ಇದು ಶರಣ ಧರ್ಮ

ಸೂರ್ಯೋದಯವಾದ ಸಮಯದಿಂದ ಸಹಸ್ರಾರು ಪಕ್ಷಿಗಳು ಮಧುರ ಧ್ವನಿ ಮಾಡುತ್ತ ಉಲಿಯುತ್ತವೆ. ಕತ್ತಲಲ್ಲಿ ಮುಲುಗುವುದು ಗೂಬೆ ಮಾತ್ರ. ಹಾಗೆ ಅಸಂಖ್ಯಾತ ಶರಣರು, ಸಾಹಿತಿಗಳು, ಸುಧಾರಕರು ಬಸವ ಗುರುವಿನ ಸಂದೇಶವನ್ನು ಉಲಿದು ನಲಿಯುತ್ತಿದ್ದರೆ ವೀರಶೈವ ವಾದಿಗಳು ಮಾತ್ರ ಇದು ವೀರಶೈವ ಎಂದು ನರಳುವ ಧ್ವನಿಯಲ್ಲಿ ಮುಲುಗುತ್ತಾರೆ. ಇನ್ನು ಆ ಮುಲುಗಿಗೆ ಅಂಜುವ, ಪ್ರತಿಕ್ರಿಯೆ ನೀಡುವ ಕಾಲ ಮುಗಿಯುತ್ತಿದೆ.

ಇಂದಿನ (28-2-2006) ಸಂಯುಕ್ತ ಕರ್ನಾಟಕದ ಪುರವಣಿಯಲ್ಲಿ ಒಂದು ಫೋಟೋ ಬಂದಿದೆ ಸುಂದರವಾಗಿ ಪುಷ್ಪವಾಗಿ ಬೆಳೆದ ಒಂದು ತೆಂಗಿನ ಮರವಿದೆ. ಅದರ ಕಾಂಡವನ್ನು ಸೀಳಿಕೊಂಡು

ಆಲದ ಮರ ಒಂದು ಬೆಳೆದಿದೆ. ಬಹುಶಃ ಗಾಳಿಯಲ್ಲಿ ತೂರಿ ಬಂದ ಆಲದ ಬೀಜ ಗಿಡದ ಕಾಂಡದ ಮೇಲೆ ಕುಳಿತು ಮೊಳೆತು, ಬೇರು ಬಿಟ್ಟಿರಬಹುದು. ತೆಂಗಿನ ಮರಕ್ಕೆ 14 ವರ್ಷ, ಆಲದ ಗಿಡವನ್ನು ಕಿತ್ತೆಸೆಯಬಾರದು ಎಂಬ ಮೂಢನಂಬಿಕೆಯಿಂದ 4 ವರ್ಷದ ಆಲದ ಗಿಡವನ್ನು ಹಾಗೆಯೇ ಬಿಟ್ಟಿದ್ದಾರೆ. ಈಗ ಅದು ತೆಂಗಿನ ಗಿಡವನ್ನು ಕೊರೆದು ತಿನ್ನುತ್ತಿದೆ. ಹೀಗೆಯೇ ಬಿಟ್ಟರೆ ತೆಂಗಿನ ಗಿಡ ಒಣಗಿ ಉರುಳುವ ಕಾಲ ದೂರವಿಲ್ಲ ಎಂದು ಲೇಖಕರು ಬರೆದಿದ್ದಾರೆ.

ಇದು ಲಿಂಗಾಯತ ಸಮಾಜಕ್ಕೆ ಅತ್ಯಂತ ಪರಿಣಾಮಕಾರಿ ಬೋಧೆ. 12ನೆಯ ಶತಮಾನದಲ್ಲಿ ಹುಟ್ಟಿದ ಲಿಂಗಾಯತ ಧರ್ಮದ ಕಾಂಡದ ಮೇಲೆ ವೀರಶೈವದ ಬೀಜ 15-16ನೆಯ ಶತಮಾನದಲ್ಲಿ ಬಂದು ಕುಳಿತಿತು. ಜನರ ಅಜ್ಞಾನದಿಂದಾಗಿ ಹಾಗೆಯೇ ಬೇರು ತೂರಿಸುತ್ತಾ ಹೋಯಿತು. 20ನೆಯ ಶತಮಾನದ ಆದಿ ಭಾಗದಲ್ಲಿ ಪಂಚಪೀಠಾಧೀಶರು, ವೀರಶೈವ ಮಹಾಸಭಾದ ಕರ್ತೃ ಹಾನುಗಲ್ ಕುಮಾರ ಶ್ರೀಗಳು ಮಾತೃಧರ್ಮವನ್ನು ಕ್ಷೀಣಿಸುವ ವೀರಶೈವದ ಸಸಿಯನ್ನು ಪೋಷಿಸಿದರು. ಈಗಲಾದರೂ ಎಚ್ಚೆತ್ತು ವೀರಶೈವ ಪದ ಬಳಕೆಯನ್ನು ಕಿತ್ತೆಸೆಯದಿದ್ದರೆ. ಒಂದು ಪ್ರಗತಿಪರ ಚಿಂತನೆಯ ಲಿಂಗಾಯತ ಧರ್ಮದ ಕಲ್ಪವೃಕ್ಷ ತಾತ್ತ್ವಿಕ ವಿನಾಶದೆಡೆಗೆ ಸಾಗುವುದು ನಿಶ್ಚಿತ.

ತಮ್ಮದೊಂದು ಧರ್ಮ ವೀರಶೈವ ಇದ್ದರೆ ಅದನ್ನು ರಂಭಾಪುರಿ ಶ್ರೀಗಳು ಬೆಳೆಸಿಕೊಳ್ಳಲಿ, ಪ್ರಚಾರ ಮಾಡಲಿ. ಲಿಂಗಾಯತ ಧರ್ಮಕ್ಕೆ, ವಚನ ಸಾಹಿತ್ಯಕ್ಕೆ ತಗುಲಿಕೊಳ್ಳುವುದೇಕೆ? ನನಗೊಂದು ಉದಾಹರಣೆ ನೆನಪಾಗುತ್ತದೆ.

ಒಮ್ಮೆ ಒಬ್ಬ ವ್ಯಕ್ತಿ ಕೂತಿದ್ದವನು ಎದುರು ಇದ್ದವನ ಜೊತೆ ಕ್ಯಾತೆ ತೆಗೆದ "ಏಯ್, ನಾನು ಎದ್ದು ಬಂದೆ ಅಂದ್ರ ನೋಡು; ಪರಿಸ್ಥಿತಿ ನೆಟ್ಟಗಿರುವುದಿಲ್ಲ." ಇದೇ ತರಹ 3-4 ಸಲ ಅಂದ. ಇದನ್ನು ನೋಡುತ್ತಲಿದ್ದ ಓರ್ವರು, "ಎಷ್ಟು ಸಲ ಹೇಳ್ತೀಯ ? ಒಮ್ಮೆ ಎದ್ದು ಬಂದು ನಿನ್ನ ಶಕ್ತಿ ತೋರಿಸು" ಅಂದರು. "ಆಗ ಅವನು ಅಂದ. ಬರುತ್ತಿದ್ದೆ, ಏನು ಮಾಡುವುದು. ನನಗೆ ಎರಡೂ ಕಾಲು ಇಲ್ಲ." ಪಂಚ ಪೀಠಾಧೀಶರು ಮತ್ತು ವೀರಶೈವವಾದಿಗಳ ಪರಿಸ್ಥಿತಿ ಹೀಗೇ ಇದೆ. ಅವರಿಗೆ ಧರ್ಮಶಾಸ್ತ್ರ ಎಂಬ ಕಾಲೇ ಇಲ್ಲ; ಅದಕ್ಕೇ ವಚನ ಸಾಹಿತ್ಯದ ಕಾಲನ್ನು ವೀರಶೈವ ಕುಂಟುಕಾಲಿಗೆ ಜೋಡಿಸುವ ಸಾಹಸ ಮಾಡುತ್ತಾರೆ.

ನನ್ನ ಮಾತು ಎಷ್ಟು ಸತ್ಯ ಎಂಬುದಕ್ಕೆ ರಂಭಾಪುರಿ ಶ್ರೀಗಳ ಈ ಹೇಳಿಕೆ ನೋಡಿರಿ," ಪಂಚಪೀಠಗಳಿಗೆ ಬಸವಾದಿ ಶರಣರ ಬಗ್ಗೆ ಅಪಾರ ಗೌರವವಿದೆ. ಪಂಚಾಚಾರ್ಯರು ಶರಣರ ವಚನಗಳನ್ನು ವಿಶ್ಲೇಷಿಸುತ್ತಾರೆ. ಆದರೆ ವಿರಕ್ತರು ಹಾಗೆ ಮಾಡಲಾರರು. ಜಟಿಲ ಭಾಷೆ ಸಂಸ್ಕೃತದಲ್ಲಿರುವ ವೀರಶೈವ ಧರ್ಮದ ತತ್ತ್ವ ಸಾರವನ್ನು ಅಧ್ಯಯನ ಮಾಡಿದ ವಚನಕಾರರು ಅವೇ ವಿಚಾರಗಳನ್ನು ಜನ ಸಾಮಾನ್ಯರಿಗೆ ಅರ್ಥವಾಗುವಂತೆ ಅಚ್ಚ ಕನ್ನಡದಲ್ಲಿ ಹೇಳಿದರೇ ಹೊರತು ಹೊಸದೇನನ್ನು ಹೇಳಲಿಲ್ಲ" ಎಂದರು.

ಒಮ್ಮೆ ಅಫಜಲಖಾನನು ಶಿವಾಜಿಯನ್ನು ಪರಸ್ಪರ ಸ್ನೇಹದಿಂದ ಇರೋಣ ಎಂದು ಆಹ್ವಾನಿಸಿ ಅಪ್ಪಿಕೊಳ್ಳಲು ಸಿದ್ಧನಾದನು. ಶಿವಾಜಿ ಮಹಾರಾಜರನ್ನು ಕುತಂತ್ರ ಕೊಲ್ಲುವ ಉದ್ದೇಶವಿತ್ತು. ಇದನ್ನು ಊಹಿಸಿದ ಶಿವಾಜಿ ಮುನ್ನೆಚ್ಚರಿಕೆ ವಹಿಸಿಕೊಂಡು ಪಾರಾದರು. ಪಂಚಪೀಠಾಧೀಶರ ಶರಣ ಪ್ರೇಮ ಇಷ್ಟೇ ಚೆನ್ನಾಗಿದೆ. ಅವರ ದೃಷ್ಟಿಯಲ್ಲಿ ಬಸವಣ್ಣನವರು ಮತ್ತು ಶರಣರು ಅನುಭಾವಿಗಳಲ್ಲ ಕೇವಲ ಭಾಷಾಂತರಕಾರರು. ಸಂಸ್ಕೃತದಲ್ಲಿದುದನ್ನು ಕನ್ನಡದಲ್ಲಿ ಬರೆದರು. ಬಸವಾದಿ ಪ್ರಮಥರ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕ್ರಾಂತಿ, ಸಮಾನತೆಯ ಹೋರಾಟ ಎಲ್ಲ ಇವರ ದೃಷ್ಟಿಯಲ್ಲಿ ಜೀರೋ! ಇಂಥ ಕಪಟತನದ ಗೌರವದ ಬಗ್ಗೆ ಪ್ರಾಜ್ಞರು ಅರ್ಥಮಾಡಿಕೊಳ್ಳಬೇಕು. ಶಂಕರ ಮಠದವರು ಅದ್ವೈತ ಪ್ರತಿಪಾದಿಸಲು, ಮಾಧ್ವ ಮಠದವರು ದ್ವೈತವನ್ನು ಪ್ರತಿಪಾದಿಸಲು ತಮ್ಮ ತಮ್ಮ ಸಂಸ್ಕೃತ ಶಾಸ್ತ್ರ ಬಳಸುತ್ತಾರೆ. ಹಾಗೆಯೇ ಪಂಚಪೀಠಾಧೀಶರು ತಮ್ಮ ಮತವು ಪ್ರತಿಪಾದಿತವಾಗಿರುವ ಶಾಸ್ತ್ರಗಳಿದ್ದರೆ ಅವುಗಳನ್ನೇ ಬೋಧಿಸಿಕೊಳ್ಳಲಿ, ವಚನ ಸಾಹಿತ್ಯಕ್ಕೆ ತೆಕ್ಕೆ ಬೀಳುವುದು ಏಕೆ?

ಬಸವ ಧರ್ಮದ ಪುನರುತ್ಥಾನಕರಾದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ಜೀವನದ ಮಹತ್ವ ಪೂರ್ಣ ಘಟನೆಗಳು ಮತ್ತು ಅವರ ಸಾಧನೆಗಳು

ಸಂಗ್ರಹ: ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ

★ ಜನನ : ಚನ್ನ(ಬುಧ)ವಾರ 13-3-1946

★ ತಂದೆ: ಶರಣ ಡಾ॥ ಎಸ್.ಆರ್ ಬಸಪ್ಪನವರು, ತಾಯಿ: ಶರಣೆ ಗಂಗಮ್ಮನವರು

★ ಜನ್ಮನಾಮ: ರತ್ನ; 14 ವರ್ಷದವರಿದ್ದಾಗಲೇ ತಂದೆ ಶರಣ ಡಾ॥ ಬಸಪ್ಪನವರು ಲಿಂಗೈಕ್ಯ.

★ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರನ್ನು ಚಿತ್ರದುರ್ಗದಲ್ಲಿ ಮೊದಲ ಭೇಟಿ ಮಾಡಿದ್ದು 12-2-1965 ರಂದು.

★ ಬಿ.ಎಸ್‌ಸಿ ಪದವಿ ಪಡೆದುದು - 1965ರಲ್ಲಿ

★ ತಮ್ಮ ಜೀವನವನ್ನು ಪೂರ್ಣವಾಗಿ ಅಧ್ಯಾತ್ಮಿಕಕ್ಕೆ ಮೀಸಲಿಟ್ಟು ಹಾಗೂ ಬಸವ ಧರ್ಮ ಪ್ರಚಾರಕ್ಕೆ ಸಮರ್ಪಿಸಿಕೊಳ್ಳಲು ನಿರ್ಧರಿಸಿ ಮನೆ ಬಿಟ್ಟದ್ದು 19-8-1965ರಂದು

★ ಇಷ್ಟಲಿಂಗ ದೀಕ್ಷೆ: ಪರಮ ಪೂಜ್ಯ ಸದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರಿಂದ 21-8-1965 ಮತ್ತು ಮಾತೆ ಮಹಾದೇವಿ ಎಂಬ ಅಧ್ಯಾತ್ಮಿಕ ನಾಮಕರಣ

★ ತ್ಯಾಗ ಜೀವನಕ್ಕೆ ಕಾಲಿರಿಸಿ ಪೂಜ್ಯ ಸದ್ಗುರು ಲಿಂಗಾನಂದ ಮಹಾಸ್ವಾಮಿಯವರಿಂದ ಜಂಗಮ ದೀಕ್ಷೆ ಪಡೆದುದು 5-4-1966 ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯಂದು

★ ಋಷಿಕೇಶದಲ್ಲಿ ಸಾಧನೆ, ಗಂಗಾತರಂಗ ಪುಸ್ತಕ ರಚನೆ - 1966ರಲ್ಲಿ

★ ಬಸವ ತತ್ತ್ವ ದರ್ಶನ ಬೃಹತ್ ಗ್ರಂಥ ಕೇವಲ 3 ತಿಂಗಳಲ್ಲಿ(ಮೇ - ಜುಲೈ 1967) ರಚನೆ

★ ಬಸವ ಕಲ್ಯಾಣದಲ್ಲಿ 28-12-1967ರಂದು 8ನೆಯ ಶತಮಾನೋತ್ಸವ ಆಚರಣೆಯ ವೇದಿಕೆಯಿಂದ ಜಗನ್ಮಾತೆ ಅಕ್ಕಮಹಾದೇವಿ ಹೆಸರಿನಲ್ಲಿ ಜಗದ್ಗುರು ಪೀಠ ಸ್ಥಾಪನೆಯ ಘೋಷಣೆ

★ 1968 ಏಪ್ರಿಲ್ 13, ಜಗನ್ಮಾತೆ ಅಕ್ಕಮಹಾದೇವಿ ಜಯಂತಿಯಂದು ಧಾರವಾಡದಲ್ಲಿ ಜಗನ್ಮಾತೆ ಅಕ್ಕಮಹಾದೇವಿ ಆಶ್ರಮ ಸ್ಥಾಪನೆ.

★ 14-1-1970 ಶಿವಯೋಗಿ ಸಿದ್ಧರಾಮೇಶ್ವರ ಜಯಂತಿಯಂದು ಕಲ್ಯಾಣ ಕಿರಣ ಮಾಸ ಪತ್ರಿಕೆಯ ಮೊದಲ ಸಂಚಿಕೆ ಬಿಡುಗಡೆ

★ 21-4-1970 ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯಂದು ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಎಂಬ ಐತಿಹಾಸಿಕ ಜಗತ್ತಿನ ಮೊಟ್ಟಮೊದಲ ಮಹಿಳಾ ಜಗದ್ಗುರು ಪೀಠ ಸ್ಥಾಪನೆ ಪ್ರಥಮ ಮಹಿಳಾ ಜಗದ್ಗುರುವಾಗಿ ಪೂಜ್ಯ ಶ್ರೀ ಮಾತಾಜಿಯವರು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರಿಂದ ಪ್ರತಿಜ್ಞಾವಿಧಿ ಸ್ವೀಕಾರ

★ 9-12-1973 ಸಾಮಾಜಿಕ ಕಾದಂಬರಿ 'ಹೆಪ್ಪಿಟ್ಟಹಾಲು' ಪುಸ್ತಕ ರಚನೆ ಹಾಗೂ ಬಿಡುಗಡೆ. ಈ ಕೃತಿಗೆ ರಾಜ್ಯ ಪ್ರಶಸ್ತಿ ಪುರಸ್ಕಾರ

★ ಬೆಂಗಳೂರಿನ ರಾಜಾಜಿನಗರದಲ್ಲಿ ಬಸವ ಮಂಟಪ ನಿರ್ಮಾಣ ಹಾಗೂ 4-5-1975ರ ಬಸವ

ಜಯಂತಿಯಂದು ಉದ್ಘಾಟನೆ

★ 14-5-1976 ಬಸವ ಧರ್ಮ ಪ್ರಚಾರಾರ್ಥ ಇಂಗ್ಲೆಂಡ್ ಪ್ರವಾಸ

★ ವಿಶ್ವ ಕಲ್ಯಾಣ ಮಿಷನ್ ಸಂಸ್ಥೆ ಸ್ಥಾಪನೆ 1977

★ 6-10-1978 ಬೆಂಗಳೂರಿನ ಕುಂಬಳಗೋಡಿನಲ್ಲಿ 35 ಎಕರೆ ಜಾಗ ಖರೀದಿಸಿದ್ದು ಧಾರ್ಮಿಕ ಚಟುವಟಿಕೆಗಳಿಂದ ಕೂಡಿದ ಬಸವ ಗಂಗೋತ್ರಿ ಆಶ್ರಮ ನಿರ್ಮಾಣ

★ ಬಸವ ಧರ್ಮ ಪ್ರಚಾರಾರ್ಥ ಅಮೇರಿಕಾ ಪ್ರವಾಸ 1980-1981

★ ಗುರು ಬಸವಣ್ಣನವರ ಜೀವನ ಚರಿತ್ರೆಯನ್ನು ಸಿನಿಮಾ ಮಾಧ್ಯಮದ ಮೂಲಕ ಪ್ರಚಾರ ಮಾಡಲು ಕ್ರಾಂತಿಯೋಗಿ ಬಸವಣ್ಣ ಚಲನಚಿತ್ರ ನಿರ್ಮಾಣ 1993

★ 1986-87 ನಾರಾಯಣ ಪುರ ಅಣೆಕಟ್ಟಿನ ಹಿನ್ನೀರಿನಿಂದ ಆವೃತವಾದ ಕೂಡಲ ಸಂಗಮದ ಐಕ್ಯಮಂಟಪ, ಸಂಗಮೇಶ್ವರ ದೇವಾಲಯಗಳ ರಕ್ಷಣೆ ಹಾಗೂ ದೇವಾಲಯ ಬೇರೆಡೆಗೆ ವರ್ಗಾಯಿಸದಂತೆ ಯಶಸ್ವಿ ಹೋರಾಟ.

★ 1988 ಜನವರಿ 13-14 ಮತ್ತು 15ರಂದು ಕೂಡಲ ಸಂಗಮದಲ್ಲಿ ಐತಿಹಾಸಿಕ ಮೊದಲನೆಯ ಶರಣಮೇಳ 2 ಲಕ್ಷಕ್ಕೂ ಹೆಚ್ಚು ಜನರನ್ನು ಆಕರ್ಷಿಸಿತು. ಕೂಡಲ ಸಂಗಮ ಲಿಂಗಾಯತ ಧರ್ಮದ ಧರ್ಮಕ್ಷೇತ್ರ ಎಂದು ಘೋಷಣೆ

★ ರಾಷ್ಟ್ರೀಯ ಬಸವ ದಳ ಸ್ಥಾಪನೆ - 1988 ಜನವರಿ 13

★ 1992 ಜನವರಿ 13ರಂದು ಕೂಡಲ ಸಂಗಮದಲ್ಲಿ ಬಸವ ಧರ್ಮ ಪರಮೋಚ್ಚ ಪೀಠ ಸ್ಥಾಪನೆ. ಬಸವ ಧರ್ಮದ ಮಹಾ ಜಗದ್ಗುರು ಪೀಠದ ಪ್ರಥಮ ಪೀಠಾಧ್ಯಕ್ಷರಾಗಿ ಪರಮ ಪೂಜ್ಯ ಲಿಂಗಾನಂದ ಮಹಾಸ್ವಾಮೀಜಿಯವರಿಂದ ಪೀಠಾರೋಹಣ.

★ 1993 - ಪ್ರಥಮ ಬಸವ ಧರ್ಮ ಸಮ್ಮೇಳನ ಕಾಟೇರಿಯಲ್ಲಿ (ಊಟಿ), ತಮಿಳುನಾಡು

★ 1994 - ದ್ವಿತೀಯ ಬಸವ ಧರ್ಮ ಸಮ್ಮೇಳನ ಹೈದರಾಬಾದಿನಲ್ಲಿ, ಆಂಧ್ರ ಪ್ರದೇಶ

★ 1995 - ತೃತೀಯ ಬಸವ ಧರ್ಮ ಸಮ್ಮೇಳನ ಬೆಂಗಳೂರಿನಲ್ಲಿ (ಕರ್ನಾಟಕ)

★ 1996 - ನಾಲ್ಕನೆ ಬಸವ ಧರ್ಮ ಸಮ್ಮೇಳನ ಧಾರವಾಡದಲ್ಲಿ(ಕರ್ನಾಟಕ)

★ ಬಸವ ಧರ್ಮ ಪೀಠದ ದ್ವಿತೀಯ ಪೀಠಾಧ್ಯಕ್ಷೆಯಾಗಿ ಪ್ರತಿಜ್ಞಾವಿಧಿ ಸ್ವಿಕಾರ 13-1-1996

★ 1997 - ಐದನೆಯ ಬಸವ ಧರ್ಮ ಸಮ್ಮೇಳನ ದೆಹಲಿಯಲ್ಲಿ

★ 1999- ಆರನೆಯ ಬಸವ ಧರ್ಮ ಸಮ್ಮೇಳನ ಮುಂಬೈನಲ್ಲಿ(ಮಹಾರಾಷ್ಟ್ರ)

★ 2001 - ಬಸವ ಕಲ್ಯಾಣದಲ್ಲಿ 21 ಎಕರೆ ಜಾಗ ಖರೀದಿ

★ 2002 - ಬಸವ ಕಲ್ಯಾಣದಲ್ಲಿ ಮೊದಲನೇ ಕಲ್ಯಾಣ ಪರ್ವ ಕಾರ್ಯಕ್ರಮ; ಐತಿಹಾಸಿಕ ಅಲ್ಲಮ ಪ್ರಭು ಶೂನ್ಯ ಪೀಠ ರಚನೆ 30-4-2002

★ 2003 - ಬಸವ ಧರ್ಮ ಪ್ರಚಾರಾರ್ಥ ಎರಡನೆಯ ಬಾರಿಗೆ ಅಮೇರಿಕಾ ಪ್ರವಾಸ

★ 2005 - ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನ ದೆಹಲಿಯಲ್ಲಿ

★ 2006 - ಇಚಲಕರಂಜಿಯ ಅಲ್ಲಮ ಪ್ರಭು ಗಿರಿಯಲ್ಲಿ 14 ಎಕರೆ ಜಾಗ ಖರೀದಿ

★ 2006-ಅಲ್ಲಮ ಪ್ರಭು ಗಿರಿಯಲ್ಲಿ ಪ್ರಥಮ ಲಿಂಗಾಯತ ಗಣಮೇಳ ಮಾರ್ಚ್ 29, 30

[ವಿಶೇಷ ಸೂಚನೆ : ಶರಣ.ಅಡಿವೆಪ್ಪ ಪಟ್ಟೆ ಪೂಜ್ಯ ಮಾತಾಜಿಯವರ ವಿಶೇಷ ಸಾಧನೆಯ ಪಟ್ಟಿ ಕಳಿಸಿದ್ದು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು]

॥ ಓಂ ಶ್ರೀ ಗುರು ಬಸವ ಲಿಂಗಾಯನಮಃ॥

866666





ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಮಾತೆ ಮಹಾದೇವಿ ಅವ 61 ನೆಯ ವರ್ಧಂತಿ

ದಿ.19-3-2006, ಸಮಯ ಬೆಳಿಗ್ಗೆ 10-30

ಸ್ಥಳ : ಬಸವ ಗಂಗೋತ್ರಿ, ಕುಂಬಳ ಗೋಡು

ಶರಣ ಬಂಧುಗಳಲ್ಲಿ,

ಬಿನ್ನಹ ; ಪರಮ ಪೂಜ್ಯರಾದ ಜಗದ್ಗುರು ಮಾತೆ ಮಹಾದೇವಿಯವರು ದಿ. 13-3-1946 ರಂದು ಜನಿಸಿದ್ದು ಇದೇ 13-3-2006ಕ್ಕೆ 60 ವರ್ಷಗಳನ್ನು ಪೂರೈಸಿ, 61ಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಬೆಂಗಳೂರಿನ ಅನೇಕ ಅಭಿಮಾನಿಗಳು ವಿಶೇಷವಾದ ಒಂದು ಅಭಿನಂದನ ಸಮಾರಂಭವನ್ನು ಇಟ್ಟುಕೊಳ್ಳಬೇಕೆಂದು ಬಯಸಿದ್ದರು. ಪೂಜ್ಯ ಮಾತಾಜಿಯವರು ಅದಕ್ಕೆ ಅನುಮತಿ ನೀಡಿಲ್ಲ.

ಸಹಜವಾಗಿ ಸರಳವಾಗಿ ದಿ.13ರಂದು ಆಚರಿಸಬೇಕು ಎಂದು ಕೊಂಡರೆ ಕಲ್ಯಾಣ ಕ್ರಾಂತಿ ಸಂಸ್ಮರಣಾ ದಿನಗಳು ಆಗಲೇ ಬಂದಿರುವುದರಿಂದ ದಿ.13ರಂದು ಆಚರಿಸಲು ಪೂಜ್ಯರು ಒಪ್ಪಿಲ್ಲ. ಅದಕ್ಕಾಗಿ ದಿ.19-3-2006 ದೇವ(ಭಾನು)ವಾರದಂದು ಬೆಂಗಳೂರು ರಾಷ್ಟ್ರೀಯ ಬಸವ ದಳದವರು ಪೂಜ್ಯ ಮಾತಾಜಿಯವರ 61ನೆಯ ವರ್ಧಂತಿಯನ್ನು ಆಚರಿಸುತ್ತಿದ್ದಾರೆ.

ಸ್ಥಳ : ಬಸವ ಗಂಗೋತ್ರಿ, ಬೆಂಗಳೂರು - ಮೈಸೂರು ಹೆದ್ದಾರಿ. 21ನೇ ಕಿ.ಮೀಟರ್, ಕುಂಬಳಗೋಡು.

ಬೆಂಗಳೂರಿನ ಸಿಟಿ ಮಾರುಕಟ್ಟೆಯಿಂದ 226, 228, 229, 231 ಮತ್ತು ಬಿಡದಿಗೆ ಹೋಗುವ ಎಲ್ಲಾ ಬಸ್ಸುಗಳು ಬಸವ ಗಂಗೋತ್ರಿಯ ಮೂಲಕ ಸಂಚರಿಸುತ್ತವೆ. ಕುಂಬಳಗೋಡು ಗ್ರಾಮಕ್ಕೂ ಮೊದಲೇ ಬಸವ ಗಂಗೋತ್ರಿಯ ಪ್ರವೇಶ ದ್ವಾರ ಸಿಗುತ್ತದೆ. ರಾಜರಾಜೇಶ್ವರಿ ಡೆಂಟಲ್ ಕಾಲೇಜ್ ಮತ್ತು ಕುಂಬಳಗೋಡಿನ ಮಧ್ಯೆ ಬಸವ ಗಂಗೋತ್ರಿ ಇದೆ.

ವಿವರಗಳಿಗಾಗಿ ಸಂಪರ್ಕಿಸುವ ದೂರವಾಣಿ ಸಂಖ್ಯೆ : 080-23325335, 23322790, ಮೊಬೈಲ್ : 9845399698

ದಾನಿಗಳಿಗೆ ಸತ್ಕಾರ

ಇದೇ ಸಂದರ್ಭದಲ್ಲಿ ಪೂಜ್ಯ ಮಾತಾಜಿಯವರ ದಿವ್ಯ ಸನ್ನಿಧಿಯಲ್ಲಿ ಬಸವ ಗಂಗೋತ್ರಿ ಅನಾಥಾಲಯಕ್ಕೆ ಉದಾರ ದೇಣಿಗೆ ನೀಡಿರುವ ದಾನಿಗಳ ಸತ್ಕಾರವನ್ನು ಸಹ ಏರ್ಪಡಿಸಲಾಗಿದೆ.

॥ ಓಂ ಶ್ರೀ ಗುರು ಬಸವ ಲಿಂಗಾಯನಮಃ॥

866666





ಧಾರವಾಡದ ಉಳವಿ ರಸ್ತೆಯಲ್ಲಿರುವ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ ಟ್ರಸ್ಟ್(ರಿ) ಅಕ್ಕಮಹಾದೇವಿ ಜಯಂತಿ ನಿಮಿತ್ತ

ವಿಶೇಷ ಕಾರ್ಯಕ್ರಮ

ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಜಯಂತಿಯ ನಿಮಿತ್ತವಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರಥಮ ಮಹಿಳಾ ಜಗದ್ಗುರುಗಳು, ಬಸವ ಧರ್ಮ ಪೀಠದ ದ್ವಿತೀಯ ಪೀಠಾಧೀಶರೂ ಆದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ ಅವರ ದಿವ್ಯ ಸನ್ನಿಧಿಯಲ್ಲಿ ಕಾರ್ಯಕ್ರಮಗಳು ಜರುಗಲಿವೆ.

1. ದಿ.11-4-2006 ರಂದು ಬಸವ(ಮಂಗಳ)ವಾರ ಬೆಳಿಗ್ಗೆ 10-30ಕ್ಕೆ ಧಾರವಾಡದ ಮಲ್ಲಿಕಾರ್ಜುನ ಮನ್ಸೂರ್ ಕಲಾಭವನದಲ್ಲಿ ವಿಶೇಷವಾದ ಚಿಂತನ ಗೋಷ್ಠಿಯನ್ನು ಏರ್ಪಡಿಸಲಾಗಿದ್ದು ಗುಲಬರ್ಗಾ ವಿಶ್ವವಿದ್ಯಾಲಯದ ಕಾನೂನು ವಿಭಾಗದ ಮುಖ್ಯಸ್ಥರಾದ ಡಾ॥ ಜೆ.ಎಸ್.ಪಾಟೀಲರು ಮುಖ್ಯ ಅತಿಥಿಗಳಾಗಿ ಆಗಮಿಸಿ "ಲಿಂಗಾಯತ ಧರ್ಮ-ಕಾನೂನಾತ್ಮಕ ದೃಷ್ಟಿಕೋನ" ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಲಿರುವರು. ನಂತರ ಪ್ರಶ್ನೋತ್ತರ ಇರುವುದು. ಅನೇಕ ನ್ಯಾಯವಾದಿಗಳು, ಗಣ್ಯರು ಭಾಗವಹಿಸಲಿರುವರು.
2. ದಿ.12-4-2006ರಂದು ಚನ್ನ(ಬುಧ)ವಾರ ಬೆಳಿಗ್ಗೆ 10-30ಕ್ಕೆ ಧರ್ಮ ಚಿಂತನ ಗೋಷ್ಠಿಯು ಉಳವಿ ರಸ್ತೆ, ರೇಲ್ವೆ ಗೇಟ್ ಬಳಿ ಇರುವ ಜಗನ್ಮಾತಾ ಅಕ್ಕಮಹಾದೇವಿ ಮಠದ ಬಸವ ಮಂಟಪದಲ್ಲಿ ನಡೆಯಲಿದ್ದು ಅನೇಕ ಅತಿಥಿಗಳು ಭಾಗವಹಿಸಿ ಉಪನ್ಯಾಸ ನೀಡಲಿದ್ದಾರೆ.
3. ದಿ.13-4-2006 ಪ್ರಭು(ಗುರು)ವಾರ ದವನದ ಹುಣ್ಣಿಮೆಯಂದು ಬೆಳಗ್ಗೆ 10-30ರಿಂದ ಜಗನ್ಮಾತಾ ಅಕ್ಕಮಹಾದೇವಿಯ ಜಯಂತಿ ಮತ್ತು ಅಕ್ಕಮಹಾದೇವಿ ಅನುಭಾವ ಪೀಠಾರೋಹಣದ 36ನೆಯ ವಾರ್ಷಿಕೋತ್ಸವ.

ಕಾರ್ಯಕ್ರಮಗಳ ಬಳಿಕ ಪ್ರಸಾದ (ಊಟ) ದಾಸೋಹವಿರುತ್ತದೆ. ಕಾರ್ಯಕ್ರಮದ ವ್ಯವಸ್ಥೆಗೆ, ಪ್ರಸಾದ ದಾಸೋಹಕ್ಕೆ ಉದಾರವಾಗಿ ಕಾಣಿಕೆಗಳನ್ನು ನೀಡಬೇಕೆಂದು, ಒಬ್ಬೊಬ್ಬ ದಾಸೋಹಿಗಳು ಪ್ರಸಾದದ ಒಂದೊಂದು ದಿನದ ಖರ್ಚನ್ನು ಭರಿಸಬೇಕೆಂದು ವಿನಂತಿಸುತ್ತೇವೆ.

ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಮಾಡಿಕೊಳ್ಳಬೇಕೆಂದು ಕೋರುತ್ತೇವೆ.

ಪೂಜ್ಯ ಶ್ರೀ ಮಾತೆ ಸತ್ಯಾದೇವಿ, ಜಗನ್ಮಾತಾ ಅಕ್ಕಮಹಾದೇವಿ ಮಠ, ಉಳವಿ ರಸ್ತೆ ರೇಲ್ವೆ ಗೇಟ್ ಬಳಿ, ಧಾರವಾಡ-580003 ದೂರವಾಣಿ : 0836-5577965, 9886907289

ಸಹಕಾರ : ರಾಷ್ಟ್ರೀಯ ಬಸವ ದಳ, ಧಾರವಾಡ - ಹುಬ್ಬಳ್ಳಿ
ಲಿಂಗಾಯತ ಧರ್ಮ ಮಹಾಸಭಾ, ಧಾರವಾಡ

ದಿ.11-4-2006 ಚಿಂತನಗೋಷ್ಠಿಯ ವಿವರಗಳಿಗಾಗಿ ಸಂಪರ್ಕಿಸಿರಿ
ಶರಣ.ಕರಿಬಸಪ್ಪ ಕೋರಿಶೆಟ್ಟರು, ನ್ಯಾಯವಾದಿ : 9945255525

ಕಲ್ಯಾಣ ಕಿರಣ ಪತ್ರಿಕೆಯ ಒಡೆತನ ಮತ್ತಿತರ ವಿವರಗಳ ಪ್ರಕಟಣೆ

ಪ್ರಾರೂಪ 4 (ವಿಧಿ 8)

1.	ಪ್ರಕಟಣೆಯ ಸ್ಥಳ	ಬೆಂಗಳೂರು
2.	ಪ್ರಕಟಣೆಯ ನಿಯತಕಾಲಿಕತೆ	ಮಾಸಿಕ
3.	ಮುದ್ರಕರ ಹೆಸರು	ಶ್ರೀಮತಿ ಕಮಲಮ್ಮ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಪದ್ಮಶ್ರೀ ಪ್ರಿಂಟರ್ಸ್ ರಾಜಾಜಿನಗರ, ಬೆಂಗಳೂರು
4.	ಪ್ರಕಾಶಕರ ಹೆಸರು	ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮೀಜಿ
	ಭಾರತದ ಪ್ರಜೆಯೆ ?	ಹೌದು
	ವಿಳಾಸ	ಕಲ್ಯಾಣ ಕಿರಣ ಕಾರ್ಯಾಲಯ ಬಸವ ಮಂಟಪ, ರಾಜಾಜಿನಗರ ಬೆಂಗಳೂರು - 560010
5.	ಸಂಪಾದಕರ ಹೆಸರು	ಪೂಜ್ಯ ಶ್ರೀಮಾತೆ ಕಸ್ತೂರಿದೇವಿ
	ಭಾರತದ ಪ್ರಜೆಯೆ?	ಹೌದು
	ವಿಳಾಸ	ಬಸವ ಮಂಟಪ, ರಾಜಾಜಿ ನಗರ ಬೆಂಗಳೂರು - 560010
6.	ಪತ್ರಿಕೆ ಒಡೆತನ ವಹಿಸಿರುವ ವ್ಯಕ್ತಿಯ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳ ಶೇ.1.ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರ ಹೆಸರು ಮತ್ತು ವಿಳಾಸ	ವಿಶ್ವಕಲ್ಯಾಣ ಮಿಷನ್ (ರಿಜಿಸ್ಟರ್ಡ್ ರಿಲಿಜಿಯಸ್ ಚಾರಿಟಬಲ್ ಟ್ರಸ್ಟ್) ಬಸವ ಮಂಟಪ ರಾಜಾಜಿ ನಗರ, ಬೆಂಗಳೂರು-560010

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನಂಬಿಕೆಯಂತೆ ನಿಜವೆಂದು ನಾನು ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮೀಜಿ ಘೋಷಿಸುತ್ತೇನೆ.

ಕಲ್ಯಾಣ ಕಿರಣ, ದಿ.10-3-2006

ಪ್ರಕಾಶಕರು
ಪೂಜ್ಯ ಶ್ರೀ ಅಲ್ಲಮ ಪ್ರಭು ಸ್ವಾಮೀಜಿ
ಬೆಂಗಳೂರು -560010



ಬೆಂಗಳೂರು ಬಸವ ಮಂಟಪದಲ್ಲಿ ಗಣ ಮೇಳಕ್ಕೆ ಸಮಾವೇಶವಾಗಿರುವ ಶರಣ ಸಮೂಹ



ಗುಲಬರ್ಗಾ ರಾಷ್ಟ್ರೀಯ ಬಸವ ದಳದ ಬಸವ ಮಂಟಪದಲ್ಲಿ ಶಿವರಾತ್ರಿಯ ಶರಣ ಗಣ ಮೇಳದ ಇಷ್ಟಲಿಂಗ ಪೂಜೆಯಲ್ಲಿ ನಿರತರಾದ ಶರಣ ಸಮೂಹ.



CPMG/KA/BGW-50/WPP-17/2006-2008 R.NO.1980/70